ವಿಷಯ: ರೇಷ್ಮೆ ಬೆಳೆಗೆ ಬಂದಿರತಕ್ಕ ರೋಗ

+ ಶ್ರೀ ವಿ. ಮುನಿಯಪ್ಪ (ಮಾನ್ಯ ರೇಷ್ಮೆ ಖಾತೆ ಸಚಿವರು): ಉಪಾಧ್ಯಕ್ಷಣೆಯವರೆ ನಮ್ಮ ರಾಜ್ಯದಲ್ಲಿ ರೇಷ್ಮೆಬೆಳೆಗೆ ಬಂದಿರತಕ್ಕ ರೋಗಗಳ ಬಗ್ಗೆ ಈ ಸಭೆಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಚಾರಣೆಯ ವಿಷಯದ ಮೇಲೆ ಚರ್ಚೆಯಾಗಿ ಈ ರೋಗದ ಬಗ್ಗೆ ಅನೇಕ ಸದಸ್ಯರುಗಳು ಅವರದೇ ಆದಂತಹ ವಿಚಾರಗಳನ್ನು ಈವತ್ತು ಈ ಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ಅದರಲ್ಲಿ ವಿಶ್ಲೇಷವಾಗಿ ನಮ್ಮ ರೇಷ್ಮೆಬೆಳೆಗೆ ಬರತಕ್ಕ ಗಂಟುರೋಗ ಮತ್ತು ಇತರೇ ಪ್ರಮುಖವಾದ ರೋಗಗಳಾದ ಹಾಲುಸಪ್ಪೆ ಮತ್ತು ಸುಣ್ಣಕಟ್ಟು ರೋಗಗಳಿಂದ ರೇಷ್ಮೆ ಬೆಳೆಗೆ ಬಹಳಷ್ಟು ಹಾನಿಯಾಗುತ್ತಿದೆ. ಇದಕ್ಕೆ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿವರ್ಗದವರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಹಿನ್ನೆಲೆಯಲ್ಲಿ ಅನೇಕ ಸದಸ್ಯರು ಅವರದೇ ಆದಂತಹ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಬಹುಶಃ ಅದರ ಜೊತೆಗೆ ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

(ಶ್ರೀ ಬಿ.ಎಂ. ಇದಿನಬ್ಬನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಮೂಲ ಬಿತ್ತನೆ ಪ್ರದೇಶವೇನಿದೆ ಅಲ್ಲಿಗೆ ಏನು ಅನುಕೂಲತೆಗಳನ್ನು ಕೊಡಬೇಕಾಗಿತ್ತೋ ಆ ಒಂದು ಪ್ರದೇಶದಲ್ಲಿ ರೋಗನಿರ್ಮೂಲನೆ ಮಾಡತಕ್ಕ ಕೆಲಸಗಳಿಗೆ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಆ ಎಲ್ಲಾ ವಿಚಾರಗಳಲ್ಲಿ ಇಲಾಖೆ ಮತ್ತು ಸರ್ಕಾರದ ಏನೂ ಕಾರ್ಯಕ್ರಮ ಹಾಕಿಲ್ಲವೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರೇಷ್ಮೆ ಅನೇಕ ಯೋಜನೆಗಳನ್ನು ನಿರೂಪಣೆ ಮಾಡಿದ್ದೇವೆ. ಹಾಗೆ ಮಾಡಿದಂತಹ ಯೋಜನೆಗಳಲ್ಲಿ ವಿಶೇಷವಾಗಿ ಬಿತ್ತನೆ ಪ್ರದೇಶಕ್ಕೆ ಗಮನ ಕೊಡಲಿಲ್ಲ. ಅಲ್ಲಿರತಕ್ಕ ವ್ಯವಸ್ಥೆಗಳ ಬಗ್ಗೆ ಅಲ್ಲಿರತಕ್ಕ ಒಂದು ರೇಷ್ಮೆ ಬೆಳೆ ಸಾಕಾಣಿಕೆಯ ಒಂದು ಪದ್ಧತಿಯ ಬಗ್ಗೆ ವೈಜ್ಞಾನಿಕವಾದ ರೀತಿಯಲ್ಲಿ ಅನುಸರಿಸಬೇಕಾದ ಬಗ್ಗೆ ಯಾವುದೇ ರೀತಿಯಲ್ಲಿ ಗಮನಕೊಡಲಿಲ್ಲವೆನ್ನುವ ವಿಚಾರವನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ ನಮ್ಮ ಕರ್ನಾಟಕ ರೇಷ್ಮೆ ಕೃಷಿ ಯೋಜನೆ ಎಂದು ಹೇಳಿ ವಿಶ್ವಬ್ಯಾಂಕಿನ ಯೋಜನೆಯ ಮುಖಾಂತರ ಮೊದಲು ಒಂದು ಯೋಜನೆಯನ್ನು ತಂದರು. ಅದರ ಜೊತೆಗೆ ಎರಡನೆಯ ಯೋಜನೆಯನ್ನು ಸಹ ತಂದರು. ಈ ರೀತಿ ತಂದಂತಹ ಯೋಜನೆಗಳು ಅನೇಕ ಭವ್ಯವಾದ ಕಟ್ಟಡಗಳಿಗೆ ವಾಹನಗಳಿಗೆ, ಇತರೆ ಮಾರುಕಟ್ಟೆ ಕಟ್ಟಡಗಳಿಗೆ ಮಾತ್ರ ಉಪಯೋಗಿಸಿದರು. ಎಲ್ಲಿ ಬಹಳ ಕನಿಷ್ಟ ಸೌಲಭ್ಯವನ್ನು ಕೊಡುವ ಕಡೆ ಅದನ್ನು ಸರಿಯಾಗಿ ಉಪಯೋಗ ಮಾಡಲಿಲ್ಲ ಎನ್ನುವ ವಿಚಾರವನ್ನು ಸಹ ಈ ಒಂದು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಕ್ರೋಢಿಕರಿಸಿ ನೀವು ಒಬ್ಬ ರೇಷ್ಮೆಬೆಳೆಗಾರರಾಗಿ ಬಹುಶಃ ನಿಮ್ಮಿಂದ ನಾವು ಹೆಚ್ಚಿನ ಮಟ್ಟಿಗೆ ನಿರೀಕ್ಷಣೆಯನ್ನು ಮಾಡುತ್ತೇವೆ ಎನ್ನುವ ನೇರವಾದ ಆಪಾದನೆಯನ್ನು ನನ್ನ ಮೇಲೆ ಹಾಕಿದ್ದಾರೆ. ನಾನು ರೇಷ್ಮೆ ಮಂತ್ರಿಯಾಗಿ ಬಂದಾಗ ನಾನು ಒಬ್ಬ ರೇಷ್ಮೆ ಬೆಳೆಗಾರನಾಗಿ ಈ ರೇಷ್ಮೆ ಬೆಳೆಯಲ್ಲಿ ಇದ್ದಂತಹ ಅನೇಕ ನ್ಯೂನತೆಗಳು ವೈಯಕ್ತಿಕವಾಗಿ ಇದರ ಬಗ್ಗೆ ಪಡೆದಿರತಕ್ಕಂತಹ ಅನುಭವದಿಂದ ನನ್ನ ಗಮನವನ್ನು ಸಂಪೂರ್ಣವಾಗಿ ಈ ಒಂದು ರೋಗರಹಿತವಾದಂತಹ ಮೊಟ್ಟೆ ಕೊಡುವಂತಹ ಕೆಲಸಕ್ಕೆ ಮೀಸಲಿಡುವುದರಿಂದ ರೈತರಿಗೆ ರೇಷ್ಮೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎಂಬ ಮೂಲ ಉದ್ದೇಶವನ್ನು ಇಟ್ಟುಕೊಂಡು ಆ ಹಿನ್ನೆಲೆಯಲ್ಲಿ ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ರೇಷ್ಮೆ ಬೆಳೆಯುವ ಪ್ರದೇಶಗಳಿಗೆ ಭೇಟಿ ಕೊಟ್ಟೆ ಆ ಸಂದರ್ಭದಲ್ಲಿ ನನ್ನ ನಿರೀಕ್ಷೆ ಏನಿತ್ತು. ಈ ರೇಷ್ಮೆ ಉದ್ಯಮಕ್ಕೆ ಏನು ಒಂದು ಚೈತನ್ಯ ಕೊಡಬೇಕು

ಎಂದು ಏನಿತ್ತು ಅಲ್ಲಿರುವಂತಹ ವ್ಯವಸ್ಥೆ ಪದ್ದತಿ ಅಲ್ಲಿ ಸರ್ಕಾರ ಕೊಡುವಂತಹ ಸೌಲಭ್ಯಗಳನ್ನು ಅನುಸರಿಸತಕ್ಕ ವ್ಯವಸ್ಥೆಗಳು ಈ ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಾ ಇರತಕ್ಕ ಪದ್ಧತಿಗಳೆಲ್ಲವನ್ನೂ ನಾನು ಖುದ್ದಾಗಿ ಕಂಡಾಗ ಬಹುಶಃ ನಮ್ಮ ಒಂದು ನೀರಿಕ್ಷೆಗೆ ತಕ್ಕ ಹಾಗೆ ರೇಷ್ಮೆ ಉದ್ಯಮವನ್ನು ಬೆಳೆಸುವುದರಲ್ಲಿ ಬಹಳ ಕಷ್ಟ ಎಂಬ ವಿಚಾರವನ್ನು ನಾನು ಮನಗೊಂಡೆ ಇದಕ್ಕೆ ಕಾರಣವಾದರೂ ಇಷ್ಟೆ. ಹಿಂದೆ ಮಾಡಿದಂತಹ ಎಲ್ಲಾ ಯೋಜನೆಗಳು ದುರಾದೃಷ್ಟವಶಾತ್ ಬೇರೆ ಬೇರೆ ತರಹ ಗುರಿ ಇಟ್ಟುಕೊಂಡು ಹೋಗಿ ಮೂಲ ಬಿತ್ತನೆ ಪ್ರದೇಶಕ್ಕೆ ಏನು ಆದ್ಯತೆ ಕೊಡಬೇಕಾಗಿತ್ತೋ ಆ ಆದ್ಯತೆಯನ್ನು ಕೊಡದೆ ಅಲ್ಲಿದ್ದಂಥ ಮೂಲ ವ್ಯಾಧಿ ಏನು ಇತ್ತು ಆ ವ್ಯಾಧಿಯನ್ನು ನಿರ್ಮೂಲನ ಮಾಡುವ ದಿಸೆಯಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಬಹುಶಃ ವರ್ಷದಿಂದ ವರ್ಷಕ್ಕೆ ತಾತ್ಕಾಲಿಕವಾದ ಒಂದು ವ್ಯವಸ್ಥೆ ಇಟ್ಟುಕೊಂಡು ಈ ರೋಗವನ್ನು ತಡೆಯತಕ್ಕಂತಹ ಒಂದು ಕೆಲಸ ನಡೆಯುತ್ತಾ ಇದ್ದುದನ್ನು ಬಿಟ್ಟರೆ ಬೇರೆ ಕೆಲಸ ಆಗುತ್ತಾ ಇರಲಿಲ್ಲ. ಬಹಳ ವರ್ಷಗಳಿಂದ ಇದ್ದಂತಹ ರೋಗವನ್ನು ತಾತ್ಕಾಲಿಕವಾಗಿ ತೆಗೆಯತಕ್ಕಂಥಹ ಒಂದು ವ್ಯವಸ್ಥೆಯನ್ನು ಮಾತ್ರ ನಡೆಸಿಕೊಂಡು ಬರುತ್ತಿದ್ದರೇ ಹೊರತು ಅದಕ್ಕಾಗಿ ವಿಶೇಷವಾದಂತಹ ಕಾರ್ಯಕ್ರಮಗಳು ಏನು ಆಗಿಲ್ಲ ಅನ್ನುವಂತಹ ವಿಚಾರವನ್ನು ನಾನು ಕಂಡಾಗ ನಿಜವಾಗಿ ನಾನು ಒಬ್ಬ ರೇಷ್ಮೆ ಬೆಳೆಗಾರನಾಗಿ ನನಗೆ ಸ್ವಲ್ಪ ನೋವಾಯಿತು. ನಾನು ಅಧಿಕಾರಿಗಳ ಜೊತೆ ಇಲ್ಲಿನ ಪರಿಸ್ಥಿತಿಯೇನು ತಾಂತ್ರಿಕವಾದ ತೊಂದರೆಗಳೇನು ಎಂಬುದರ ಬಗ್ಗೆ ಚರ್ಚೆ ಮಾಡಿದೆ. ಸುಮಾರು ಅಲ್ಲಿ 60 ರೇಂಜ್‌ಗಳಿತ್ತು. ಒಂದು ರೇಂಜ್ ಅಂದರೆ ಸುಮಾರು 350, 400, 450 ಜನ ರೈತರನ್ನು ಉಸ್ತುವಾರಿ ನೋಡತಕ್ಕಂತಹ ವಲಯಾದಿಕಾರಿ ಹುಳ ಇರತಕ್ಕ ಪ್ರತಿಯೊಂದು ಮನೆಗೆ ಹೋಗಬೇಕು. ಪ್ರತಿಯೊಂದು ಹಂತದಲ್ಲೂ ಚೆಕ್ ಮಾಡಬೇಕು. ನಾನು ವಿಚಾರ ಮಾಡಿದೆ ಇಷ್ಟೊಂದು ಜನ ರೈತರಿಗೆ ಈ ಒಬ್ಬ ವಲಯಾಧಿಕಾರಿ ಸಾಕಾಗುವುದಿಲ್ಲವೆಂದು. 30-40 ಹಳ್ಳಿಗಳಿಗೆ ಹೋಗಿ ವಿಚಾರ ಮಾಡಿದಾಗ ಸ್ವಲ್ಪ ಕಷ್ಟವಿದೆ, ಇನ್ನೂ ಹೆಚ್ಚಿನ ಸಿಬ್ಬಂದಿ ಬೇಕು ಅನ್ನುವಂತಹ ಒಂದು ವಿಚಾರ ಹೇಳಿದರು.

ಗ್ರಾಮಗಳಿಗೆ ಹೋಗಿ ರೈತರನ್ನು ಕಂಡೆ, ಅವರ ಪರಿಸ್ಥಿತಿಯನ್ನು ಮನೆಯ ಒಳಗಡೆ ನೋಡಿದೆ. ಅವರು ಮೇಯಿಸತಕ್ಕ ಹುಳವನ್ನು ನೋಡಿದೆ. ರೇಷ್ಮೆ ಹುಳು ಸಾಕಾಣಿಕೆ ಮಾಡುವಂತಹ ನೂರಾರು ಮನೆಗಳಿಗೆ ಹತ್ತಾರು ಹಳ್ಳಿಗಳಿಗೆ ಖುದ್ದಾಗಿ ಹೋಗಿ ಅವರ ಪರಿಸ್ಥಿತಿಯನ್ನು ಕಂಡಾಗ ನಮ್ಮ ಅಧಿಕಾರಿಗಳು ಮಾಡುತ್ತಾ ಇರುವಂತಹ ರೋಗ ನಿಯಂತ್ರಣ ಕಾರ್ಯಕ್ಕೂ ಆ ಮನೆಗಳಲ್ಲಿರತಕ್ಕ ಪರಿಸ್ಥಿತಿಗೂ ಇರತಕ್ಕ ವ್ಯತ್ಯಾಸವನ್ನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಆ ರೋಗವನ್ನು ಸಂಪೂರ್ಣವಾಗಿ ತಡೆಯತಕ್ಕಂತಹ ಕೆಲಸಕ್ಕೆ ಬೇಕಾದಂತಹ ಒಂದು ವ್ಯವಸ್ಥೆ ಅಲ್ಲಿ ಇಲ್ಲವೆಂಬ ವಿಚಾರವನ್ನು ನಾನು ಮನಗಂಡೆ. ಅದಕ್ಕೆ ಅನೇಕ ಅಧಿಕಾರಿಗಳ ನಿರ್ಲಕ್ಷತೆಯೂ ಕಾರಣವಾಗಿತ್ತು. ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ರೈತರ ಮನೆಗೆ ಹೋಗಿ ಮೊಟ್ಟೆ ಕೊಡುವುದಕ್ಕೆ ಮುಂಚೆ ಏನು ರೈತರಿಗೆ ರೋಗ ನಿಯಂತ್ರಣ ಕಾರ್ಯಕ್ರಮ ಕೊಡಬೇಕೋ ಅದೂ ಸರಿಯಾಗಿ ನಡೆಯುತ್ತಿಲ್ಲ ಎಂಬ ದೂರನ್ನು ನಾನು ಮನಗಂಡಿದ್ದೇನೆ. ಅಲ್ಲದೆ ಅನೇಕ ತಾಂತ್ರಿಕವಾದ ಸಮಸ್ಯೆಗಳು ಅಲ್ಲಿ ಅಡ್ಡ ಬಂದಿದೆ. ಸುಮಾರು ಹತ್ತು ವರ್ಷಗಳ ಹಿಂದೆ 10 ರಿಂದ 12 ಸಾವಿರ ಜನ ರೈತರು ರೇಷ್ಮೆ ಬೆಳೆ ಸಾಗಾಣಿಕೆ ಮಾಡುತ್ತಿದ್ದರು. ಆದರೆ ಇವತ್ತಿನದಿವಸ ಸುಮಾರು 20 ಸಾವಿರ ಜನ ರೈತರು ರೇಷ್ಮೆ ಬೆಳೆ

ಸಾಗಾಣಿಕೆ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಮಾತ್ರ ಜಾಸ್ತಿಯಾಗಿಲ್ಲ, ಸುಮಾರು ಒಂಭೈನೂರು ಚಿಲ್ಲರೆ ಹಳ್ಳಿಗಳು ಮಾತ್ರ ಬಿತ್ತನೆ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತವೆ. ಪ್ರತಿ ಗ್ರಾಮದಲ್ಲೂ 5ರಿಂದ 10 ಜನ ರೇಷ್ಮೆ ಬೆಳೆಯತಕ್ಕಂತಹ ಹಳ್ಳಿಯಲ್ಲಿ ಇವತ್ತು 20-30-40-50 ಜನ ರೇಷ್ಮೆ ಬೆಳೆಗಾರರು ಜಾಸ್ತಿಯಾಗಿದ್ದಾರೆ. 365 ದಿವಸ ಪೂರ್ತಿ ಎಲ್ಲಾ ಹಂತದ ರೇಷ್ಮೆ ಬೆಳೆಯೂ ಒಂದೇ ಗ್ರಾಮದಲ್ಲಿ ಇರುವಂತಹ ಪರಿಸ್ಥಿತಿಯನ್ನು ನಾನು ಮನಗಂಡಿದ್ದೇನೆ. ನೀವು ಯಾವುದೇ ಗ್ರಾಮಕ್ಕೆ ಹೋಗಿ ಒಂದು ಹತ್ತು ಮನೆ, ಐದು ಮನೆಯಲ್ಲಿ ಎಲ್ಲಾ ಹಂತದ ಹುಳುವನ್ನು ಕಾಣುತ್ತೀರಿ. ಒಂದು ಮನೆಯಲ್ಲಿ ಹಣ್ಣಾಗುತ್ತಿರುತ್ತದೆ. ಇನ್ನೊಂದು ಮನೆಯಲ್ಲಿ ಜಾಕಿ ಕಟ್ಟುತ್ತಿರುತ್ತಾರೆ. ಹೀಗೆ 2ನೇ ಹಂತ 3ನೇ ಹಂತ ಇರುವಂತಹ ವರ್ಷ ಪೂರ್ತಿ ರೇಷ್ಮೆ ಬೆಳೆ ಸಾಗಾಣಿಕೆ ಮಾಡುವಂತಹ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇದೆ. ಆ ಕ್ರಮವನ್ನು ಬಿತ್ತನೆ ಪ್ರದೇಶದಲ್ಲಿ ಅನುಸರಿಸುತ್ತಿದ್ದಾರೆ.

ಬಹುಶಃ ನಾನಾದರೂ ಮನಗಂಡೆ, ಏನ್ರಿ ಇದು ಬಿತ್ತನೆ ಪ್ರದೇಶ, ಇದು ಒಂದು ಪ್ರತ್ಯೇಕವಾದಂಥ ಪ್ರದೇಶ. ಇದು ಐಸೋಲೇಟರ್ ಆಗಿ ಎಲ್ಲಾ ರೋಗರುಜಿನಗಳಿಂದ ರೋಗಮುಕ್ತವಾಗಿರತಕ್ಕಂಥ ಒಂದು ಪ್ರದೇಶ ಎಂದು ಘೋಷಣೆ ಮಾಡಿ ಅದಕ್ಕೆ ಸರಿಯಾದಂಥ ಕೆಲವು ನ್ಯೂನತೆಗಳ ಸಿಸ್ಟಮ್ ಅನ್ನು ನಾವು ಇಟ್ಟಿದ್ದೇವೆ. ಈ ಒಂದು ವ್ಯವಸ್ಥೆಯಲ್ಲಿ ಇಲ್ಲಿರತಕ್ಕಂಥ ಒಂದು ಪದ್ಧತಿ ಇಲ್ಲಿ ಮಾಡುತ್ತಿರತಕ್ಕಂಥ ರೇರಿಂಗ್‌ನಲ್ಲಿ ನೀವು ಯಾವರೀತಿ ಮಾಡುತ್ತಿದ್ದೀರಿ ಎಂದು ಕೇಳಿದರೆ, ಬಹುಶಃ ಆ ನಮ್ಮ ಅಧಿಕಾರಿಗಳು ಅವರದೇ ಆದಂಥ ಕೊರಗನ್ನು ನಮ್ಮ ಮುಂದೆ ತೋಡಿಕೊಂಡರು. ಸ್ವಾಮಿ, ಈ ಊರಿನಲ್ಲಿ 40 ಜನರು ರೈತರು ಇದ್ದಾರೆ, ನಾವು ಡಿಸ್‌ಇನ್‌ಫೆಕ್ಟ್ ಮಾಡಬೇಕಾದರೆ, ಈ ಊರಿನಲ್ಲಿ ಇವೊತ್ತು ನಾಲ್ಕು ಮನೆಯವರು ರೈತರು ರೆಡಿಯಾಗುತ್ತಾರೆ, ಆದರೆ ಅದೇ ಊರಿನಲ್ಲಿ ಎಲ್ಲರ ಮನೆಯಲ್ಲಿಯೂ ಹುಳು ಇರುತ್ತದೆ. ಎರಡು ಮನೆಗಳಿಗೆ ಔಷಧಿ ಹೊಡೆದು ಇನ್ನೊಂದು ಊರಿಗೆ ಹೋಗಿಬಿಟ್ಟಾಗ ಮತ್ತೆ ಅಲ್ಲಿಗೆ ಹೋಗಲಿಕ್ಕೆ ಆಗುವುದಿಲ್ಲ! ಮತ್ತೆ ಇನ್ನೊಂದು ಊರಿಗೆ ಹೋಗಬೇಕಾದಾಗ ಇವನ ಆ ಹುಳು ಹಣ್ಣಾದಾಗ ಅವನ ಮನೆಗೆ ಮೊಟ್ಟೆ ಕೊಡಬೇಕು. ಹೀಗೆಲ್ಲಾ ತೊಂದರೆಗಳಿವೆ ಎಂದು ಹೇಳಿದರು. ನಾವು ಹೋಗಿದ್ದ ದಿವಸ ಅವನು ಇವೊತ್ತು ಹೊಡೆಯಲಿಕ್ಕೆ ಆಗುವುದಿಲ್ಲ, ನಾಳೆ ಬನ್ನಿ ಎಂದು ಹೇಳುತ್ತಾನೆ. ಈ ರೀತಿ ನೂರಕ್ಕೆ ತೊಂಭತ್ತು ಜನರ ಮನೆಗಳಲ್ಲಿ ಸಂಸಾರ ಅಲ್ಲಿಯೇ ಇರುತ್ತದೆ. ರೇಷ್ಮೆ ಬೆಳೆ ಸಾಗಾಣಿಕೆ ಅಲ್ಲೇ ಇರುತ್ತದೆ. ಅವರು ತಮ್ಮ ದನಕರುಗಳನ್ನು ಕಟ್ಟತಕ್ಕಂಥ ವ್ಯವಸ್ಥೆಯೂ ಅಲ್ಲೇ ಇರುತ್ತದೆ. ನೂರಕ್ಕೆ ತೊಂಭತ್ತು ಜನ ಬಡತನದಲ್ಲಿರತಕ್ಕಂಥ ಒಂದು ವ್ಯವಸ್ಥೆಯೂ ಅಲ್ಲೇ ಇರುತ್ತದೆ. ನಾವು ಒಬ್ಬ ರೈತರಿಗೆ ಕೇವಲ ನೂರು ಇನ್ನೂರು ಮೊಟ್ಟೆಗಳನ್ನು ಒಬ್ಬ ರೈತನಿಗೆ ಕೊಡುತ್ತೇವೆ. ಏಕೆಂದರೆ ಇದು ಬಿತ್ತನೆ ಮೊಟ್ಟೆ. ನಮ್ಮ ಮಿಶ್ರತಳಿ ಪ್ರದೇಶದಲ್ಲಿ ಕೊಟ್ಟಹಾಗೆ ಅವರಿಗೆ ಐನೂರು ಅಥವಾ ಸಾವಿರ ಮೊಟ್ಟೆ ಕೊಟ್ಟು ಅವರು ಆರ್ಥಿಕರಾಗಿ ಚೆನ್ನಾಗಿ ಮಾಡುವಂತಹ ವ್ಯವಸ್ಥೆ ಅಲ್ಲಿ ಇಲ್ಲ. ಅಲ್ಲಿ ಕೊಡಬೇಕಾದರೆ ಕನಿಷ್ಟ 150-200 ಮೊಟ್ಟೆ ಕೊಡತಕ್ಕಂತಾದ್ದು ಇದೆ. ಆ ವ್ಯವಸ್ಥೆಯಲ್ಲಿ ಆ ರೇಷ್ಮೆ ಬೆಳೆಗಾರರು ಮಾತ್ರ ಅವರು ಯಾವುದೇ ಕಾರಣಕ್ಕೂ ಆರ್ಥಿಕವಾಗಿ ಮೇಲೆ ಬರಲಿಕ್ಕೆ ಸಾಧ್ಯವೇ ಇಲ್ಲ. ಆದರಿಂದ ಏನಾಗಿದೆ, ದೊಡ್ಡ ರೈತರು ಇದರಲ್ಲಿ ಹೆಚ್ಚಾಗಿ ಬರುತ್ತಿಲ್ಲ. ಸಾಮಾನ್ಯ ರೈತರು, ಬಡವರು, ಆ ರೇಷ್ಮೆ ಬೆಳೆಯನ್ನು ಅಲ್ಲಿ ಅವಲಂಬಿಸಿಕೊಂಡು ಕುಳಿತುಕೊಂಡಿದ್ದಾರೆ. ಅಲ್ಲಿ ನೂರಕ್ಕೆ ತೊಂಭತ್ತು ಜನ ಮಳೆ ಆಶ್ರಯದಲ್ಲಿ ಬೆಳೆಯತಕ್ಕವರೇ; ಅಂದರೆ

ಸುಮಾರು ನೂರಕ್ಕೆ 60-70 ಭಾಗ, 20-30 ಭಾಗ ಇತ್ತೀಚೆಗೆ ನೀರಾವರಿಯ ಒಂದು ವ್ಯವಸ್ಥೆಯನ್ನು ಮಾಡಿ ಕೊಂಡಿದ್ದಾರೆ, ಅದರ ಮುಖಾಂತರ ರೇಷ್ಮೆ ಬೆಳೆಯನ್ನು ಮಾಡುತ್ತಾ ಇದ್ದಾರೆ. ಈ ಒಂದು ಪ್ರದೇಶದಲ್ಲಿ 365 ದಿವಸ ಹುಳು ಮೇಯಿಸತಕ್ಕಂತಾದ್ದು ನಡೆಯುತ್ತಿದೆ.

ಈ ರೋಗ ಸಾಮೂಹಿಕವಾಗಿ ಒಂದು ವಾತಾವರಣದಲ್ಲಿ ಹಬ್ಬಿ ಕುಳಿತಿದೆ, ಬಹುಶಃ ಈ ಪೆಬ್ರಿನ್ ಖಾಯಿಲೆ ಎನ್ನತಕ್ಕದ್ದು ಇತರೇ ಏನು ಹಾಲುರೋಗ, ಸಪ್ಪೆರೋಗ ಇವೆಲ್ಲಾ ಏನಿವೆ, ಇವೆಲ್ಲಾ ಬ್ಯಾಕ್ಟೀರಿಯಾ ವೈರೆಸ್, ಇವೆಲ್ಲಾ ಒಂದಕ್ಕೊಂದು ಕಂಟಾಮಿನೇಷನ್ ಡಿಸೀಸಸ್. ಇವೆಲ್ಲಾ ರೋಗಗಳನ್ನು ತಡೆಗಟ್ಟುವಂಥ ವಾತಾವರಣ ಇಲ್ಲದೇ ಇರುವಾಗ ನೀವು ರೋಗರಹಿತವಾದಂಥ ಮೊಟ್ಟೆ ಕೊಡತಕ್ಕಂಥ ಪರಿಸ್ಥಿತಿ ಇಲ್ಲ. ಹೀಗಿರುವಾಗ ಹೇಗೆ ರೋಗರಹಿತವಾದಂಥ ಮೊಟ್ಟೆ ಕೊಡಲು ಸಾಧ್ಯ ಎನ್ನುವ ವಿಚಾರವನ್ನು ನಾನು ಮನಗಂಡೆ. ನಿಜವಾಗಿಯೂ ಇದೇ ಪರಿಸ್ಥಿತಿ ಇನ್ನೊಂದು ನಾಲ್ಕೈದು ವರ್ಷ ಮುಂದುವರಿದರೆ ಖಂಡಿತ ನಮ್ಮ ರಾಜ್ಯದಲ್ಲಿ ರೇಷ್ಮೆ ಬೆಳೆ ಇರುವುದಿಲ್ಲ ಎನ್ನುವಂಥ ವಿಚಾರವನ್ನು ನಾನು ನನ್ನ ಅಧಿಕಾರಿಗಳ ಒಂದು ಸಭೆಯಲ್ಲಿ ಪ್ರಸ್ತಾಪ ಮಾಡಿ, ಇದಕ್ಕೆ ನೀವು ಹೊಸ ತರಹದ ಒಂದು ಪದ್ಧತಿಗಳ ಜೊತೆಗೆ ಇದಕ್ಕೆ ಏನಾದರೂ ಒಂದು ಮೂಲತಃ ಬಿತ್ತನೆ ಪ್ರದೇಶಕ್ಕೆ ಕನಿಷ್ಠವಾದ ಸೌಲಭ್ಯವನ್ನು ಕೊಡತಕ್ಕಂಥ ಒಂದು ಕೆಲಸ ಮಾಡಿದರೆ ಮಾತ್ರ ಈ ಇಲಾಖೆ ಉಳಿಯುತ್ತದೆ ಎನ್ನತಕ್ಕ ವಿಚಾರ ನಾನು ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಜನವರಿ ತಿಂಗಳಿನಲ್ಲಿ ನಾನು, ನಮ್ಮ ಸಂಬಂಧ ಪಟ್ಟ ಕಮೀಷನರ್ ಅದಕ್ಕೆ ಸಂಬಂಧಪಟ್ಟ ಇತರೇ ಅಧಿಕಾರಿಗಳೆಲ್ಲಾ ಜನವರಿ ತಿಂಗಳಲ್ಲಿ ಹೋದೆವು. ಅಲ್ಲೆಲ್ಲಾ ವಿಚಾರ ಮಾಡಿ, ಫೆಬ್ರವರಿ ತಿಂಗಳಿನಲ್ಲಿ ಒಂದು ರೇಷ್ಮೆ ಬೆಳೆಗಾರರ ಸಮ್ಮೇಳನ ಮಾಡಿದೆವು. ನಾವು ಒಬ್ಬರೇ ಒಂದೇ ಕೈಯಲ್ಲಿ ತೀರ್ಮಾನ ತೆಗೆದುಕೊಳ್ಳತಕ್ಕಂಥ ವಿಚಾರವಲ್ಲ. ಅಲ್ಲಿ ಇರತಕ್ಕಂಥ ರೈತರ ಒಂದು ಸಮಸ್ಯೆಗಳನ್ನೂ ನಾವು ಕೇಳಿ, ಅವರ ಜೊತೆ ಕುಳಿತು ಚರ್ಚೆಮಾಡಿ ಇದಕ್ಕೆ ಏನಾದರೂ ಒಂದು ಅಂತಿಮವಾಗಿ ನಿರೂಪಣೆಯನ್ನು ಮಾಡಬೇಕು, ಒಂದು ಕಾರ್ಯಕ್ರಮ ಮಾಡಬೇಕು ಎನ್ನುವ ದಿಸೆಯಲ್ಲಿ ನಾವು ಆ ಒಂದು ಪ್ರದೇಶದಲ್ಲಿ ಒಂದು ದೊಡ್ಡ ಬೃಹದಾಕಾರವಾದಂಥ ಎರಡು ತಾಲ್ಲೂಕುಗಳನ್ನು ಸೇರಿಸಿ ಸಂಬಂಧಪಟ್ಟ ಎಲ್ಲಾ ಸ್ಥಳೀಯ ನಾಯಕರನ್ನು ಕರೆಸಿ, ರೈತರ ಸಮ್ಮೇಳನವನ್ನು ಮಾಡಿದೆವು. ರೈತರ ಸಮ್ಮೇಳನದಲ್ಲಿ ಅನೇಕ ವಿಚಾರಗಳು, ಅವರವರಿಗೆ ಆಗುತ್ತಿರತಕ್ಕಂಥ ತಾಂತ್ರಿಕ ತೊಂದರೆಗಳ ಬಗ್ಗೆ ರೈತರು ತಮ್ಮದೇ ಆದಂತಹ ಒಂದು ಮಾತಿನಲ್ಲಿ ವ್ಯಕ್ತಮಾಡಿದರು. ಸ್ವಾಮಿ, ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲವರು ಬರುವುದಿಲ್ಲ, ಬಂದರೂ ಸಹ ರೈತರಿಗತೆ ನಮಗೆ ಅನೇಕ ತೊಂದರೆಗಳು ಇರುತ್ತವೆ. ನಾನು ಅಡುಗೆ ಮನೆಗೆ ಮಾತ್ರ ಯಾವೊತ್ತೂ ಔಷಧಿ ಹೊಡಿಸುವುದಿಲ್ಲ, ನಾನು ರೇಷ್ಮೆ ತಟ್ಟೆ ಇಡುವ ಕಡೆ ಔಷಧಿ ಹೊಡಿಸುವುದು ಎಂದು ಹೇಳಿದರು. ಅಡುಗೆಮನೆ, ರೇಷ್ಮೆ ಮನೆ ಎರಡೂ ಒಂದೇ ಏನೋ ಮಧ್ಯೆ ಒಂದು ಸಣ್ಣ ಗೋಡೆ ಹಾಕಿರುತ್ತಾರೆ. ಅಲ್ಲಿ ಔಷಧಿ ಹೊಡಿಸುವಂಥ ಸಂದರ್ಭದಲ್ಲಿ ಕನಿಷ್ಠ 24 ಗಂಟೆ ಸಮಯ ಆ ಮನೆಗೆ ಗಾಳಿ ಪ್ರವೇಶವಿಲ್ಲದಂತೆ ಏರ್‌ಟೈಟ್ ಮಾಡಬೇಕು. ಯಾವುದೇ ಸಮಯದಲ್ಲೂ ಕನಿಷ್ಠ ಒಂದೆರಡು ಗಂಟೆಗಳ ಕಾಲ ಒಂದು ಮನೆಗೆ ಔಷಧಿ ಹೊಡೆದಮೇಲೆ ಗಾಳಿ ಇಲ್ಲದೇ ನಿಲ್ಲಿಸಿರತಕ್ಕ ಒಂದು ಮನೆಯೂ ನನಗೆ ನೋಡಲಿಕ್ಕೆ ಸಿಕ್ಕಲಿಲ್ಲ, ಆ ಬಗ್ಗೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಹೇಳಿ ಬಂದರೂ ಸಹ ರೈತರು ಆ ಒಂದು ಸ್ಥಿತಿಯಲ್ಲಿಲ್ಲ, ಅಲ್ಲಿರತಕ್ಕಂಥ ರೈತರ ಒಂದು ಪರಿಸ್ಥಿತಿ

ಆ ರೀತಿಯಲ್ಲಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಇವೊತ್ತು ಈ ರೋಗ ಬೃಹದಾಕಾರವಾಗಿ ಬೆಳೆದಿದೆ. ಬಹುಶಃ ಏನು ಒಂದು ವಾತಾವರಣದ ಅನುಕೂಲತೆಯಿಂದ ನಾವು ಈ ರೇಷ್ಮೆ ಬೆಳೆಯನ್ನು ಬೆಳಸಿಕೊಂಡು ಹೋಗುತ್ತಿದ್ದೇವೆ. ಆದರೆ, ಈ ಒಂದು ವಾತಾವರಣದಲ್ಲಿರತಕ್ಕಂಥ ರೋಗ ನಿಯಂತ್ರಣ ಮಾಡತಕ್ಕಂಥ ಕೆಲಸ ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ಸಾಧ್ಯವೇ ಎನ್ನತಕ್ಕಂಥ ವಿಚಾರದ ಬಗ್ಗೆ ರೈತರ ಜೊತೆಯಲ್ಲಿ ನಾವು ಮುಕ್ತವಾಗಿ ಚರ್ಚೆಮಾಡಿದಾಗ, ರೈತರು ಒಂದು ಮಾತನ್ನು ಹೇಳಿದರು. ಸ್ವಾಮಿ, ನಮಗೆ ಕನಿಷ್ಟ ಸವಲತ್ತುಗಳನ್ನು ನೀವು ಕೊಡದೇಹೋದರೆ, ನಾವು ಈ ರೋಗವನ್ನು ತಡೆಗಟ್ಟುವುದರಲ್ಲಿ ನಿಮ್ಮ ಅಧಿಕಾರಿಗಳು ಎಷ್ಟು ಪ್ರಯತ್ನಪಟ್ಟರೂ ಅದಕ್ಕೆ ನಾವು ಸಹಕರಿಸುವುದು ನಮಗೆ ತಾಂತ್ರಿಕವಾದ ಕಷ್ಟ ಇದೆ ಎನ್ನತಕ್ಕ ಮಾತನ್ನು ಹೇಳಿದಾಗ ಅವರ ಕನಿಷ್ಟವಾರು ಸವಲತ್ತುಗಳ ಬಗ್ಗೆ ಒಂದು ಬೇಡಿಕೆಯನ್ನು ಇಟ್ಟರು.

ನಮಗೆ ಪ್ರತ್ಯೇಕವಾದ ಒಂದು ರೇಷ್ಮೆಮನೆ ಬೇಕು, ನಮ್ಮ ಮನೆಗೆ ಅಥವಾ ನಮ್ಮ ತೋಟದ ವ್ಯಾಪ್ತಿ ಎಷ್ಟು ಎಕರೆ ಇದೆ ಅದಕ್ಕನುಗುಣವಾಗಿ ನಾವು ಬೆಳೆಯುವುದಕ್ಕೆ ಬೇಕಾದಂಥ ಏನು ಸಾಮಾನು ಸಲಕರಣೆಗಳು ಇದೆ. ಅವುಗಳನ್ನು ನೀವು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ನೀರಾವರಿ ವ್ಯವಸ್ಥೆಯನ್ನೂ ಕೂಡ ಮಾಡಿಕೊಟ್ಟರೆ ನಾವು ಉತ್ತಮ ಗುಣಮಟ್ಟದ ಸೊಪ್ಪನ್ನು ಬೆಳೆದುಕೊಡುತ್ತೇವೆ. ಮತ್ತು ಪ್ರತ್ಯೇಕವಾದ ಮನೆಯನ್ನು ಇಟ್ಟುಕೊಂಡು ಡಿಸ್ ಇನ್‌ಫೆಕ್ಷನ್ ಪ್ರೋಗ್ರಾಂ ಅನ್ನು ಮಾಡಿದಾಗ ರೋಗ ನಿಯಂತ್ರಣ ಕಾರ್ಯಕ್ರಮವನ್ನು ಮಾಡಿದಾಗ ತಾವು ಹೇಳಿದ ರೀತಿಯಲ್ಲಿ ನಾವು ಕ್ರಮವನ್ನು ಅನುಸರಿಸಲು ಸಾಧ್ಯವಾಗುತ್ತದೆ. ಇವೆಲ್ಲಾ ಆದರೆ ನಾವು ಸಾಧ್ಯವಾದಷ್ಟೂ ರೋಗರಹಿತವಾದ ಗೂಡನ್ನು ಬೆಳೆಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆಂಬ ವಿಚಾರವನ್ನು ಆ ಒಂದು ಸಭೆಯಲ್ಲಿ ಅನೇಕ ಜನ ರೈತರು ವ್ಯಕ್ತಮಾಡಿದರು. ಆಗ ನಾನು ಯೋಚನೆ ಮಾಡಿದೆ. ಅನೇಕ ಜನ ಈ ಪ್ರದೇಶದಿಂದ ಮಂತ್ರಿಗಳಾಗಿರತಕ್ಕ ಜನ ಇದ್ದಾರೆ. ಇದು ಮೂಲ ಬಿತ್ತನೆಯ ಪ್ರದೇಶ. ಇಂಥ ಒಂದು ಪ್ರದೇಶಕ್ಕೆ ಇಷ್ಟೆಲ್ಲಾ ಯೋಜನೆಗಳು ಬಂದಿರುವಾಗ ನಿಮ್ಮ ಕನಿಷ್ಠ ಸೌಲಭ್ಯಗಳ ಬಗ್ಗೆ ಏನು ಮಾಡಿದ್ದಾರೆಂದು ನಾನು ಕೇಳಿದಾಗ, ಆ ರೈತರು ಹೇಳಿದರು, ಸುಮಾರು 80-81 ಇಸವಿಯಲ್ಲಿ ನಮಗೆ 5 ರೂ. ಇನ್‌ಸೆಂಟಿವ್ ಕೊಟ್ಟಿದ್ದರು. ನಂತರ 85-86ರಲ್ಲಿ ಇನ್ನೂ 5.ರೂ. ಇನ್‌ಸೆಂಟಿವ್ ಜಾಸ್ತಿ ಮಾಡಿದರು. ಸರ್ಕಾರದಿಂದ ನಮಗೆ ಇಷ್ಟು ಮಾತ್ರ ಸೌಲಭ್ಯಗಳು ಬರುತ್ತಿವೆ. ಇದನ್ನು ಬಿಟ್ಟರೆ ಇನ್ನೇನು ಸೌಲಭ್ಯ ನಮಗೆ ಸಿಕ್ಕಿಲ್ಲ ಎಂದು ಹೇಳಿದರು. ಮೂಲ ಬಿತ್ತನೆ ಪ್ರದೇಶದ ಜನರಿಗೇ ಏನೇನೂ ಸೌಲಭ್ಯಗಳು ಸಿಗಬೇಕೋ ಅವು ಸಿಕ್ಕಿಲ್ಲ ಎಂದು ಹೇಳಿದಾಗ ನನಗಂತೂ ಬಹಳ ನೋವಾಯಿತು. ಈ ಮೂಲ ಬಿತ್ತನೆ ಪ್ರದೇಶ ಇಡೀ ರಾಜ್ಯದಲ್ಲಿರತಕ್ಕ ರೇಷ್ಮೆ ಬೆಳೆಯನ್ನು ಅವಲಂಬಿಸಿದೆ ಎನ್ನತಕ್ಕ ವಿಚಾರ ನಮಗೆಲ್ಲರಿಗೂ ತಿಳಿದಿರತಕ್ಕ ಹಿನ್ನೆಲೆಯಲ್ಲಿ ಆ ಮೂಲ ಬಿತ್ತನೆ ಬೆಳೆಗಾರರಿಗೆ ನಾವು ಏನು ಮಾಡಿದ್ದೇವೆಂಬುದನ್ನು ಯೋಚನೆ ಮಾಡಿದಾಗ ನಿಜವಾಗಿ ನನಗೆ ಬಹಳ ನೋವಾಯಿತು. ನಾನು ಆ ದಿಸೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ನಾವು ರೈತರ ಅಭಿವೃದ್ಧಿಗೆ ಒಂದು ವಿಶೇಷ ಕಾರ್ಯಕ್ರಮವನ್ನು ನಿರೂಪಣೆ ಮಾಡಿ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟು ಅದಕ್ಕೆ ನಬಾರ್ಡ್ ನಿಂದ ಮಂಜೂರಾತಿಯನ್ನೂ ಕೂಡ ಪಡೆದುಕೊಂಡಿದ್ದೇನೆ. ಕೆಲವು ಅಧಿಕಾರಿಗಳು ಉತ್ತಮ ಕೆಲಸಮಾಡಿದ್ದಾರೆ, ಅದೇ ರೀತಿ ಕೆಲವು ಮಂತ್ರಿಗಳೂ ಕೂಡ ಒಳ್ಳೆಯ ಕೆಲಸ

ಮಾಡಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಕೆಲವರು ಸಣ್ಣಪುಟ್ಟ ಅಧಿಕಾರಿಗಳು ಒಬ್ಬಬ್ಬರಿಗೆ ಬೆದರಿಸಿರಬಹುದು ಅಥವಾ ಜೋರಾಗಿ ಕೂಗು ಹಾಕಿರಬಹುದು. ಅವರು ಆಡಳಿತದ ವಿಚಾರದಲ್ಲಿ ಬಿಗಿಯಾದ, ಕಠಿಣವಾದ ಕ್ರಮವನ್ನು ತೆಗೆದುಕೊಂಡಿರಬಹುದು. ಆದರೆ ಮೂಲಭೂತವಾಗಿ ಒಂದು ಕಡೆ ಸರ್ಕಾರಕ್ಕೂ, ಇಲಾಖೆಗೂ ಮತ್ತು ರೈತರಿಗೂ ಏನೊಂದು ಬೃಹದಾಕಾರವಾದ ಸಮಸ್ಯೆ ಇದೆ ಅದರ ಬಗ್ಗೆ ಎಷ್ಟು ಮಹತ್ವವನ್ನು ಕೊಟ್ಟು ಕೆಲಸ ಮಾಡಬೇಕಾಗಿತ್ತೋ ಆ ರೀತಿ ಕೆಲಸಮಾಡದೆ ನೆಗ್ಲೆಕ್ಟ್ ಮಾಡಿದ್ದಾರೆನ್ನತಕ್ಕ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ. ಈ ರೇಷ್ಮೆ ಬೆಳೆಯಿಂದ ಆಗುತ್ತಿರುವ ನಷ್ಟದ ಬಗ್ಗೆ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ ಎಲ್ಲಾ ವಿಚಾರಗಳನ್ನೂ ನಾನು ಕ್ರೋಢೀಕರಿಸಿ ಕ್ರಮತೆಗೆದುಕೊಳ್ಳುತ್ತೇನೆ.

ಇನ್ನು ಗಂಟು ರೋಗದ ವಿಚಾರದಲ್ಲಿ ಹೇಳುವುದಾದರೆ ನಮ್ಮ ಸರ್ಕಾರಕ್ಕೆ ಇದೊಂದು ಸಮಸ್ಯೆಯಾಗಿದೆ. ಇದರಿಂದ ನಮಗೆ ಅಪಾರವಾದ ನಷ್ಟವಾಗುತ್ತಿದೆ. ನಾನು ರೇಷ್ಮೆಯನ್ನು ಬೆಳೆಯತಕ್ಕ ಒಬ್ಬ ರೈತನಾಗಿ ಹೇಳುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಮಾನ್ಯ ಸಿಂಧ್ಯರವರೂ ಇನ್ನೂ ಅನೇಕ ಮಾನ್ಯ ಸದಸ್ಯರು ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ 3-4 ಬೆಳೆಗಳನ್ನು ಕಳೆದುಕೊಂಡಿರತಕ್ಕ ರೈತ. ನಾನೇನು ಬೆಳೆಯನ್ನು ಕಳೆದುಕೊಳ್ಳದೇ ಇಲ್ಲ, ಸುಮಾರು 1 ವರ್ಷದಿಂದ ನನಗೆ ಬೆಳೆ ಹೋಗುತ್ತಿದೆ. ನಾನು ಮಂತ್ರಿಯಾಗಿ ಬಂದಿಲ್ಲ, ಮನೆಯಲ್ಲಿ ರೇಷ್ಮೆ ಹುಳು ಇದ್ದರೆ ರಾತ್ರಿ 10 ಗಂಟೆ ಆದರೂ ಕೂಡ ನಾನು ಮನೆಯಲ್ಲಿದ್ದಾಗ ಹುಳುಗಳಿಗೆ ಸೊಪ್ಪನ್ನು ಹಾಕಿ ಬರತಕ್ಕ ರೈತ. ನಾವು ಎಷ್ಟೇ ವೈಜ್ಞಾನಿಕವಾಗಿ ರೇಷ್ಮೆ ಬೆಳೆಯುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ನಮ್ಮಲ್ಲಿ ಹಲವಾರು ನ್ಯೂನತೆಗಳಿವೆ. ತಪ್ಪುಗಳಿವೆ. ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಒಂದು ಹೊಸ ರೂಪವನ್ನು ಕೊಡತಕ್ಕ ಕೆಲಸ ಆಗಬೇಕಾಗಿದೆ. ರೇಷ್ಮೆ ಹುಳುಗಳನ್ನು ಸಾಕತಕ್ಕ ಪದ್ಧತಿಯನ್ನೇ ನಾವು ಈವತ್ತು ಬದಲಾವಣೆ ಮಾಡಬೇಕಾಗಿದೆ. ಪ್ರತ್ಯೇಕವಾದ ಮನೆ ಇನ್ನೂ ಮುಂತಾದ ವ್ಯವಸ್ಥೆಯನ್ನು ಮಾಡಿದರೆ ಸಾಮೂಹಿಕ ವಾತಾವರಣದಲ್ಲಿ ಶಾಶ್ವತವಾದಂಥ ರೀತಿಯಲ್ಲಿ ಫ್ರೆಬ್ರಿನ್ ರೋಗವನ್ನು ತಡೆಯಬಹುದು. ಇದಕ್ಕೆ ವಿಶೇಷವಾದ ಕಾರ್ಯಕ್ರಮ, ಸಹಕಾರ ಈ ರಾಜ್ಯದಲ್ಲಿರತಕ್ಕ ಎಲ್ಲ ರೈತ ಬಂಧುಗಳಿಂದ ದೊರೆತರೆ ಮಾತ್ರ ತಡೆಯುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ರೇಷ್ಮೆ ಉದ್ದಿಮೆಯಲ್ಲಿ ಬಹಳ ಸೈಂಟಿಫಿಕ್ ಆಗಿ ಮುಂದುವರಿದಂಥ ಜಪಾನ್, ಫ್ರಾನ್ಸ್, ಕೊರಿಯಾ ದೇಶಗಳೂ ಕೂಡ ಈಗ ಈ ಉದ್ದಿಮೆಯಿಂದ ಬಹಳ ಹಿಂದೆ ಹೋಗುತ್ತಿವೆ. ಇದಕ್ಕೆ ಕಾರಣ ಫೆಬ್ರಿನ್ ಖಾಯಿಲೆಯನ್ನು ತಡೆಗಟ್ಟುವುದಕ್ಕೆ ಸಾಧ್ಯ ಆಗದೇ, ಇದರಲ್ಲಿ ವಿಫಲವಾಗಿದ್ದಾರೆ. ಸೈಂಟಿಫಿಕ್ ಆಗಿ ಬಹಳ ಮುಂದುವರಿದ ಈ ದೇಶಗಳೇ ಇವತ್ತು ಈ ಉದ್ದಿಮೆಯನ್ನು ಉಳಿಸಿಕೊಳ್ಳುವುದಕ್ಕಾಗದೇ ಕಷ್ಟಪಡುತ್ತಿದ್ದಾರೆ. ಅಲ್ಲಿ ಇನ್ನೊಂದು ಪರಿಸ್ಥಿತಿಯನ್ನು ಅವರು ಅನುಸರಿಸುತ್ತಿದ್ದಾರೆ, ಒಂದು ಸೀಸನ್‌ನಲ್ಲಿ ಅಂದರೆ ಒಂದು ವರ್ಷದಲ್ಲಿ ಸುಮಾರು 3-4 ತಿಂಗಳಕಾಲ ಅವರು ಹುಳುಗಳನ್ನೇ ಮೇಯಿಸುವುದಿಲ್ಲ, ನಮ್ಮ ದೇಶದಲ್ಲಿರುವಂತೆ 365 ದಿವಸವೂ ರೇಷ್ಮೆ ಹುಳುಗಳನ್ನು ಸಾಕುವುದಿಲ್ಲ, ವರ್ಷದಲ್ಲಿ 3-4 ತಿಂಗಳು ಹುಳುಗಳನ್ನು ಸಾಕುವುದನ್ನು ನಿಲ್ಲಿಸಿ ಈ ರೋಗಾಣುಗಳು ಸಂಪೂರ್ಣವಾಗಿ ತಾನೇತಾನಾಗಿ ನಾಶವಾಗುವಂಥ ರೀತಿಯಲ್ಲಿ ವಾತಾವರಣವನ್ನು ನಿರ್ಮಾಣ ಮಾಡುತ್ತಾರೆ. ನಾವೂ

ಕೂಡ ಈ ರೋಗವನ್ನು ನಿರ್ಮೂಲನ ಮಾಡತಕ್ಕ ಕೆಲಸದಲ್ಲಿ ಬಹಳ ಶ್ರಮಪಡಬೇಕಾಗುತ್ತದೆ. ನಮ್ಮ ಅಧಿಕಾರಿಗಳಲ್ಲಿ ನಿರ್ಲಕ್ಷ್ಯತೆ ಇದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಕೆಳಮಟ್ಟದಲ್ಲಿ ಇದು ಬಹಳಷ್ಟಿದೆ. ಇದಕ್ಕೆ ನಮ್ಮದೇ ಆದಂಥ ರೀತಿಯಲ್ಲಿ ಅಧ್ಯಯನ ಮಾಡಿ ಒಂದು ಯೋಜನೆಯನ್ನು ನಿರೂಪಿಸಿ ಆ ಅಧಿಕಾರಿಗಳ ಮೇಲೆ ನಾವು ಯಾವ ರೀತಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬಹುದೆಂಬ ವಿಚಾರವನ್ನೂ ಕೂಡ ನಾವು ಪರಿಶೀಲಿಸುತ್ತಿದ್ದೇವೆ.

ಆ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮಬದ್ಧವಾಗಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳತಕ್ಕಂಥ ವಿಚಾರದಲ್ಲಿ ಪರಿಶೀಲನೆ ಮಾಡುತ್ತಿದ್ದೇವೆ. ಮಾಡದೇನೂ ಇಲ್ಲ. ಈಗಾಗಲೇ ಹಲವಾರು ವಿಚಾರಗಳಲ್ಲಿ ನಮಗೆ ಮೇಲ್ನೋಟಕ್ಕೆ ತೀರ್ವವಾಗಿ ಇವನು ಪ್ರತ್ಯಕ್ಷವಾಗಿ ತಪ್ಪು ಮಾಡಿದ್ದಾನೆ ಎನ್ನುವ ವಿಚಾರದಲ್ಲಿ ಅದರ ಮೇಲೆ ಆಕ್ಷನ್ ಕೂಡ ತೆಗೆದುಕೊಂಡಿದ್ದೇವೆ. ಅದೆಲ್ಲಾ ವಿಚಾರಗಳನ್ನು ಸೇರಿಸಿ ಈವತ್ತು ನಮ್ಮ ಸಭೆಯ ಮುಂದೆ, ವಿಚಾರಗಳನ್ನು ಸಂಬಂಧಪಟ್ಟ ರೋಗಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಸನ್ಮಾನ್ಯ ಅಧ್ಯಕ್ಷರೇ ಬಹುಶಃ ಈ ಗಂಟುರೋಗ ಯಾವ ರೀತಿ ಬಂತು? ಏತಕ್ಕೆ ಬಂತು? ಎಲ್ಲಿಂದ ಬಂತು? ಈ ರೋಗ ಇದ್ದಾಗ ಏನು ಮಾಡಬೇಕಿತ್ತು ಎನ್ನುವ ವಿಚಾರಗಳನ್ನು ಬಹಳ ನಿರ್ದಿಷ್ಟವಾಗಿ ನಿಖರವಾಗಿ ಬಹಳ ತೀಕ್ಷ್ಣವಾಗಿ ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ. ರೈತನಾಗಿ ಬಹುಶಃ ಆ ನೋವು ಆದಂಥ ಸಂದರ್ಭದಲ್ಲಿ ಮಾಡತಕ್ಕಂಥ ಟೀಕೆ ಬಹಳ ಸಮಂಜಸವೆಂದು ನಾನಂತೂ ತಿಳಿದುಕೊಂಡಿದ್ದೇನೆ. ಅದರಲ್ಲಿ ನನಗೇನೂ ಸಂಕೋಚವಿಲ್ಲ. ಇಂಥ ರೋಗ ಬಹಳ ಕಾಲದಿಂದ ಇದೆ. ಅನೇಕ ಭಾರಿ ರೇಷ್ಮೆ ಬೆಳೆಯನ್ನು ನಾನು ರೈತನಾಗಿ ಕಳೆದುಕೊಂಡಿದ್ದೇನೆ. ಆದರೂ ಇದು ಸಾರ್ವಜನಿಕ ಮಹತ್ವದ ವಿಷಯವಾಗಿ ಈ ಒಂದು ಸಭೆಯಲ್ಲಿ ಬಂದಿಲ್ಲ. ಈ ಒಂದು ಸಂದರ್ಭದಲ್ಲಿ ಬಂದಿದೆ ಎನ್ನುವುದಕ್ಕೋಸ್ಕರ ಸಂತೋಷಪಟ್ಟು ಇವತ್ತು ಅದಕ್ಕೆ ಮೂಲವಾಗಿ ಈ ರೋಗ ಯಾವ ರೀತಿ ಬರುತ್ತದೆ. ಎಲ್ಲಿಂದ ಬಂತು, ಏತಕ್ಕೆ ಬಂತು ಇದನ್ನು ತಡೆಯಬೇಕಾದರೆ ಯಾವರೀತಿ ಕ್ರಮ ತೆಗೆದುಕೊಂಡರೆ ಮಾತ್ರ ಸಾಧ್ಯವೆನ್ನತಕ್ಕಂಥ ವಿಚಾರಗಳನ್ನು ಸಂಕ್ಷಿಪ್ತವಾಗಿ ನಾನು ಈ ಸಭೆಯ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಗಂಟುರೋಗ ರೇಷ್ಮೆ ಹುಳುವಿಗೆ ಎರಡು ರೀತಿಯಲ್ಲಿ ಬರುತ್ತದೆ. ಒಂದು ಹುಳು ಸಾಕಾಣಿಕೆಯ ಉಪ್ಪಣದಲ್ಲಿ, ಹುಳು ಸಾಕಾಣಿಕೆ ಮನೆಯ ಗೋಡೆಗಳ ಮಧ್ಯೆ ಮತ್ತು ನೆಲದ ಸಂದುಗಳಲ್ಲಿ, ಹಾಗೂ ಹುಳಿವಿನ ಹಿಕ್ಕೆಯಿಂದ ಹಿಪ್ಪನೇರಳೆ ತೋಟದಲ್ಲಿರತಕ್ಕಂಥ ಗಂಟು ರೋಗದ ಕಣಗಳು ಹುಳುಹಿಪ್ಪನೇರಳೆ ಸೊಪ್ಪನ್ನು ಆಹಾರವಾಗಿ ತೆಗೆದುಕೊಂಡಾಗ ಹಿಪ್ಪನೇರಳೆ ಸೊಪ್ಪಿನ ಮುಖಾಂತರ ರೋಗ ಬರುವುದು. ತಾಯಿ ಚಿಟ್ಟೆಯಿಂದ ಗಂಟು ರೋಗದ ಚಿಟ್ಟೆಯಿಂದ ಭ್ರೂಣದ ಮುಖಾಂತರ ಮರಿಗಳಿಗೆ ಬರುವಂಥದ್ದು. ರೋಗ ರಹಿತ ಮೊಟ್ಟೆಗಳನ್ನು ಕೊಟ್ಟರೂ ಕೂಡ ಹುಳುಸಾಕಾಣಿಕೆ ಮನೆಯಲ್ಲಿ, ಹುಳುಸಾಕಾಣಿಕೆ ಉಪ್ಪಣೆಗೆಗಳಲ್ಲಿ ರೋಗಾಣುಗಳಿದ್ದರೆ ಮೊದಲ ಬೆಲೆಯಲ್ಲಿ ಶೇಕಡಾ 10 ರಿಂದ 30 ರಷ್ಟು ಗಂಟುರೋಗ ಬರುವುದು ಕಾಣಬರುತ್ತದೆ. ಎರಡನೇ ಬೆಳೆಯಲ್ಲಿ ಶೇಕಡಾ ೧೬ರಿಂದ ೬೪ರಷ್ಟು ಮತ್ತು ಮೂರನೇ ಬೆಳೆಯಲ್ಲಿ ಶೇಕಡಾ 49 ರಿಂದ 90 ರಷ್ಟು ರೋಗ ಕಾಣಬರುತ್ತದೆ. ರೇಷ್ಮೆ ಹುಳುಸಾಕಾಣಿಕೆ ಮತ್ತು ರೇಷ್ಮೆ ಹುಳುವಿನ ರೋಗಗಳ ಬಗ್ಗೆ ಪ್ರಕಟಿಸಿದ್ದವರು ಮೈಸೂರು ಸಿಲ್ಕ್ ಅಸೋಸಿಯೇಷನ್

ಎಂದು ಈ ಒಂದು ಅಧ್ಯಯನ ಸಮಿತಿ ಇದರ ಬಗ್ಗೆ ವಿಚಾರಮಾಡಿ ಒಂದು ಹೊಸ ಮನೆಕಟ್ಟಿ, ಹೊಸ ಮನೆಯಲ್ಲಿ ಒಂದು ಬೆಳೆ ಇಟ್ಟರೆ, ಪ್ರತಿಯೊಂದು ಬೆಳೆಯಲ್ಲಿ ಒಂದು ಬೆಳೆಯಿಂದ ಮತ್ತೊಂದು ಬೆಳೆಗೆ ಯಾವರೀತಿ ಡೆವಲಪ್ ಆಗುತ್ತದೆಂದರೆ ಶೇಕಡಾ 10ರಿಂದ 30ಕ್ಕೆ, ಎರಡನೆಯ ಬೆಳೆಗೆ 16 ರಿಂದ 69ಕ್ಕೆ, ಮೂರನೆ ಬೆಳೆಗೆ 49 ರಿಂದ 96ಕ್ಕೆ ಏರುತ್ತದೆ. ನಾವು ಯಾವುದೇ ರೋಗ ನಿಯಂತ್ರಣ ಕಾರ್ಯಕ್ರಮ ತೆಗೆದುಕೊಳ್ಳದೆ ತಾನಾಗಿತಾನೆ ಮುಕ್ತವಾಗಿ ಮನೆಯಲ್ಲಿ ರೇಷ್ಮೆ ಹುಳು ಬೇಯಿಸುವುದಕ್ಕೆ ಮಾಡಿದರೆ ಆ ರೀತಿ ರೋಗ ತಾನಾಗಿ ತಾನು ಆಕ್ರಮಿಸತಕ್ಕಂಥ ಒಂದು ವಾತಾವರಣದಲ್ಲಿ ಸಂಪೂರ್ಣವಾಗಿ ಈ ರೋಗ ಇರುತ್ತದೆ. ಇದು ಒಂದೇ ಪರಾವಲಂಬಿಯಲ್ಲ. ಈ ಅಣುವಿಗೆ ರೋಗಾಣುಗಳಿಗೆ ನಮ್ಮ ರೇಷ್ಮೆ ಹುಳು ಬೇರೆ ವಾತಾವರಣದಲ್ಲಿರತಕ್ಕಂಥ ಅನೇಕ ಕೀಟಗಳೂ ಸಹ ಇದಕ್ಕೆ ಪರಾವಲಂಬಿಯಾಗಿರುವುದರಿಂದ ಅದು ಜೀವಿಸಬಲ್ಲದು. ಇದು ಹೆಚ್ಚಿಗೆ ಇರುವ ಕಡೆ ಒಂದೇ ಕಡೆ ಮಾಸ್ ಆಗಿ ಸಿಕ್ಕುವ ಕಡೆ ಅದು ತಕ್ಷಣ ಒಂದು ಆಕ್ರಮ ಮಾಡುವುದಕ್ಕೆ ಒಂದು ಒಳ್ಳೆಯ ಸದವಕಾಶ ಇರತಕ್ಕಂಥ ಬಹಳ ಬೃಹದಾಕಾರವಾಗಿರುವಂಥ, ನಮಗೆ ಆತಂಕಕಾರಿಯಾದಂಥ ರೋಗ ಇದು. ಇದರಿಂದ ತಿಳಿದುಬರುವುದು ಏನೆಂದರೆ, ಇಂದಿನ ಬೆಳೆಗಳಲ್ಲಿ ರೋಗ ಕಂಡುಬಂದಿದ್ದರೆ, ರೋಗ ಮುಂದಿನ ಬೆಳೆಗಳಲ್ಲಿ ತೀವ್ರತರವಾಗಿ ಹರಡುವುದು. ತಾಯಿ ಚಿಟ್ಟೆಯಲ್ಲಿ ರೋಗ ಕಾಣಬೇಕಾದರೂ ಕೂಡ ಹುಳು ಸಾಕಾಣಿಕೆ ಕಾಲದಲ್ಲಿ, ಮನೆಗಳಲ್ಲಿ ಹುಳುಸಾಕಾಣಿಕೆಯ ಉಪಕರಣಗಳು ಅಥವಾ ವಾತಾವರಣದಲ್ಲಿರ ತಕ್ಕ ರೋಗಾಣುಳು ಹುಳುವಿನ ಶರೀರವನ್ನು ನಾಲ್ಕು ಅಥವಾ ಐದನೇ ಹಂತದಲ್ಲಿ ಸೇರಬೇಕಾಗುತ್ತದೆ. ಈ ರೋಗವನನ್ನು ನಿಗ್ರಹಿಸಬೇಕಾದರೆ ಬಿತ್ತನೆ ವಲಯ ಹಾಗೂ ಮಿಸಲು ವಲಯದಲ್ಲಿರತಕ್ಕಂಥ ರೇಷ್ಮೆ ಬೆಳೆಗಾರರು ಪ್ರತಿ ಬೆಳೆಯಾದನಂತರ ಫಾರ್ಮಲಿನ್ ಮತ್ತು ಬ್ಲೀಚಿಂಗ್ ಪೌಡರ್ ಸಹಾಯದಿಂದ ತಪ್ಪದೆ ಸಿಂಪರಣೆ ಮಾಡತಕ್ಕಂಥದ್ದು ಬಹಳ ಮುಖ್ಯವಾದುದು. ಇದರ ಜೊತೆಗೆ ಬಿತ್ತನೆ ವಲಯದ ಪ್ರತಿ ಹಂತದಲ್ಲೂ ಜ್ವರಕ್ಕೂ ಕೂರದೇ ಇರುವ ಮರಿಗಳನ್ನು ಸೂಕ್ಷ್ಮದರ್ಶಕದಿಂದ ಪರೀಕ್ಷೆಮಾಡುವುದು, ಕಳಪೆ ಗೂಡುಗಳು ಮತ್ತೆ ಕರಗಿದ ಗೂಡುಗಳಲ್ಲಿರತಕ್ಕಂಥ ಕೋಶಗಳನ್ನು ಸೂಕ್ಷ್ಮ ದರ್ಶಕದಲ್ಲಿ ಪರೀಕ್ಷಿಸುವುದು. ಈ ರೋಗಾಣುಗಳು ಸ್ಪೋರ್ ಹಂತದಲ್ಲಿದ್ದರೆ, ಸೂಕ್ಷದರ್ಶಕದಲ್ಲಿ ಸರಿಯಾಗಿ ಗುರುತಿಸುವುದು. ಇಲ್ಲೂ ಕೂಡ ಸಮಾರು 5 ಲಕ್ಷ ಸ್ಪೋರುಗಳು ಇದ್ದರೆ ಸೂಕ್ಷ್ಮದರ್ಶಕದಲ್ಲಿ ಒಂದು ಸ್ಪೋರು ಮಾತ್ರ ಕಾಣುತ್ತದೆ. ಐದು ಲಕ್ಷ ಸ್ಪೂರು ಇದ್ದರೆ ಅದು ಸ್ಪೋರು ಮಾತ್ರ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಅದೂ ಮೈಕ್ರೋಸ್ಕೋಪ್‌ನಲ್ಲಿ ಅಂದರೆ ಕಡಿಮೆ ಸಂಖ್ಯೆಯಲ್ಲಿ ಸ್ಪೋರುಗಳಿದ್ದರೆ ಸೂಕ್ಷ್ಮದರ್ಶಕದಲ್ಲಿ ಇವುಗಳನ್ನು ಗುರುತಿಸುವುದು ಕಷ್ಟ. ಇದು ಸಿಂಥಸೈಡ್ ಸೈನ್ಸ್ ಆಫ್ ಸಿರಿಕಲ್ಚರ್ ಬೈ ಡಾ। ಯಾಕ್ಟಿಮ್ ಇವರು ಮಾಡಿರತಕ್ಕಂಥ ಒಂದು ರೀಸರ್ಚಿನಿಂದ ಬಂದಿರತಕ್ಕಂಥ ಒಂದು ವಿಚಾರ. ಆಮೇಲೆ ಅನೇಕ ಸದಸ್ಯರು ಈ ಗಂಟುರೋಗ ಎಲ್ಲಿಂದ ಬಂತು, ಏಕೆ ಬಂದಿತು. ನೀವೇನು ಮಾಡುತ್ತಿದ್ದೀರಿ ಎನ್ನುವ ವಿಚಾರಗಳನ್ನು ಬಹಳ ತೀಕ್ಷವಾಗಿ ಪ್ರಸ್ತಾಪ ಮಾಡಿದ್ದಾರೆ.

ಈ ಗಂಟುರೋಗ ಹುಳುವಿಗೆ ಬರುವುದಕ್ಕೆ ಕಾರಣ ಸೋಸಿ ಬಾಂಬೈಸಸ್ ಎಂಬ ಪರೋಪಜೀವಿ. ಈ ಪರೋಪ ಜೀವಿ, ಶ್ರೀಯುತ ಲೈಫ್ರೈಯ್ ಅವರ ವರದಿ ಪ್ರಕಾರ ಪಶ್ಚಿಮ ಬಂಗಾಳದಲ್ಲಿ 1985ರಲ್ಲಿ ಮತ್ತು ಮೈಸೂರು ರಾಜ್ಯದಲ್ಲಿ 1890-1900 ರಿಂದ (ಭಾರತದಲ್ಲಿ ರೇಷ್ಮೆ ಹುಳುಗಳ ರೋಗಗಳ ವರದಿ - ಶ್ರೀ ಫ್ರಿಂಗಲ್ಸ್ ಜೆಮ್ಸ್) ಕಾಣಿಸಿಕೊಂಡಿದೆ.

ಶ್ರೀ ಪ್ರಿಂಗಲ್ಸ್ ಜೆಮ್ಸ್ ಅವರು ರಾಷ್ಟ್ರದಲ್ಲಿ ಯಾವಾಗ ಬಂತು, ರಾಜ್ಯದಲ್ಲಿ ಯಾವಾಗ ಬಂತು ಎಂದು, ಸೈಂಟಿಸ್ಟ್ ಅವರು ಹೇಳಿರತಕ್ಕ ಮಾತು ಇದು. ಈ ರೋಗ 1940 ರಿಂದ 1947ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೈಸೂರಿನಲ್ಲಿ ಕಾಣಬಂದಿದೆ ಎಂಬ ಬಗ್ಗೆ ಕೂಡ ದಾಖಲೆಗಳಲ್ಲಿ ಇದೆ (ರೇಷ್ಮೆ ಹುಳು ಸಾಕಾಣಿಕೆ ಮತ್ತು ರೇಷ್ಮೆ ಹುಳುಗಳು ರೋಗಗಳು -ಪ್ರಕಟಣೆ ಮೈಸೂರು ರೇಷ್ಮೆ ಸಂಘ, 1959) ಈ ರೋಗ ಸಾಮಾನ್ಯವಾಗಿ 4-5 ವರ್ಷಗಳಿಗೊಂದಾವರ್ತಿ ಹೆಚ್ಚಿನ ಪ್ರಮಾಣದಲ್ಲಿ ಕಾಣಬರುತ್ತದೆ. 1973-74, 79-80, 83-84ಮತ್ತು 87-88 ರಲ್ಲೂ ಕೂಡ ಈ ರೋಗ ಹೆಚ್ಚಿನಪ್ರಮಾಣದಲ್ಲಿ ಕಾಣಬಂದಿದೆ. ಈ ರೋಗದಿಂದ 1983-84ರಲ್ಲಿ ಮಾರಾಟವಾದ ಗೂಡಿನ ಪ್ರಮಾಣ 82-83ಕ್ಕೆ ಹೋಲಿಸಿದಾಗ 3192 ಟನ್ ಕಡಿಮೆಯಾಗಿದೆ. ಮೋಡ ಕವಿದ ವಾತಾವರಣ, ಆಗಾಗ್ಗೆ ಬೀಳುವ ತುಂತುರು ಮಳೆ, ಸೂರ್ಯನ ಬೆಳಕು ಪೂರ್ಣ ಇಲ್ಲದೆ ಇರುವುದು ಅಥವಾ ಅತಿ ಕಡಿಮೆ ಇರುವುದು, ರೋಗಾಣುಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಬರಲು ಕಾರಣವಾಗುತ್ತದೆ. ಈ ರೋಗಾಣುಗಳು ಜೀವಿಸುವುದಕ್ಕೆ ಪ್ರತಿಕೂಲಕರವಾದ ವಾತಾವರಣ ಇಲ್ಲದಿದ್ದರೂ ಕೂಡ 3 ರಿಂದ 4 ತಿಂಗಳುಗಳ ಈ ಜೀವಾಣು ಕಾಲ ಜೀವಿಸಬಲ್ಲದು.

ಡಾ। ಇಷಿಯಾರ ಮತ್ತು ಹಿರೋಚಿ ಇವರುಗಳು ನಡೆಸಿದ ಸಂಶೋಧನೆ ಪ್ರಕಾರ ಗಂಟುರೋಗದ ಕಣಗಳು ರೋಗ ಉಂಟು ಮಾಡತಕ್ಕ ಶಕ್ತಿಯನ್ನು ಕತ್ತಲು ಪ್ರದೇಶದ ಕೋಣೆಯ ವಾತಾವರಣದಲ್ಲಿ ಒಂದು ವರ್ಷಕ್ಕಿಂತ ಹೆಚ್ಚಿನ ಕಾಲ ಹೊಂದಿರುತ್ತದೆ.

ಈ ರೋಗಾಣುಗಳ ಮೇಲೆ ಇರತಕ್ಕ ಕವಚ ಇಲ್ಲದಿದ್ದರೂ ಕೂಡ ಇಂತಹ ಒಂದು ವಾತಾವರಣದಲ್ಲಿ ಸುಮಾರು ಒಂದು ತಿಂಗಳುಗಳ ಕಾಲ ಅವು ಜೀವಿಸಬಲ್ಲವು.

ಈ ರೋಗಾಣುಗಳು ಪೂರ್ತಿ ತೇವ ಇಲ್ಲದ ವಾತಾವರಣದಲ್ಲಿ ಕಡಿಮೆ ಶಕ್ತಿಯನ್ನು ಹೊಂದಿರುತ್ತವೆ. ಆದರೆ ತೇವವಿರತಕ್ಕ ವಾತಾವರಣದಲ್ಲಿ ಈ ರೋಗಾಣುಗಳು ಹುಳು ಸಾಕಾಣಿಕೆ ಕೊಠಡಿಗಳ ಗೋಡೆಗಳಲ್ಲಿ ಅನೇಕ ವರ್ಷಗಳ ಕಾಲ ಜೀವಿಸಬಲ್ಲವು. (ಇಂಟ್ರುಡಕ್ಷನ್ ಟು ಸಿಲ್ಕ್‌ವಾರ್ಮ್ ರೇರಿಂಗ್ ಪಬ್ಲಿಷಡ್ ಬೈ ಜಪಾನ್ ಸಿಲ್ಕ ಅಸೋಸಿಯೇಷನ್ ಈ ಒಂದು ಕ್ಲೈಮ್ಯಾಟಿಕ್ ಕಂಡೀಷನ್ಸ್ ಹ್ಯುಮಿಡಿಟಿ ಜಾಸ್ತಿ ಆದಾಗ, ಯಾವ ರೀತಿ ರೋಗ ಉಲಬಣವಾಗುತ್ತದೆಂಬ ವಿಚಾರದ ಬಗ್ಗೆ ಶ್ರೀ ಜಾಲಪ್ಪನವರು ಮತ್ತು ಶ್ರೀ ಬೈರೇಗೌಡರು ಯಾವ ಕಾರಣಕ್ಕೂ ಇದಕ್ಕೂ ಸಂಬಂಧ ಇಲ್ಲವೆಂಬ ವಿಚಾರ ಹೇಳಿದಾಗ ನಾನು ಬಹುಶಃ ಫೈಬ್ರಿನ್ ರೋಗ ತೇವಾಂಶದಿಂದ ಬರತಕ್ಕದ್ದು ಅನ್ನತಕ್ಕಮಾತನ್ನು ಹೇಳಲಿಲ್ಲ. ಈ ರೋಗ ಸದಾ ಕಾಲ ಇರುತ್ತದೆ. ಅದು ಉಲ್ಬಣಗೊಳ್ಳತಕ್ಕ ಪರಿಸ್ಥಿತಿ ವಾತಾವರಣ ಯಾವಾಗ ಉದ್ಭವಿಸುತ್ತದೆ. ಎಂಬುದರ ಬಗ್ಗೆ ಅನೇಕ ರೀಸರ್ಚ್ ಆಗಿ ರಿಪೋರ್ಟ್ ಆಧಾರದ ಮೇಲೆ ನಾನು ವಿಚಾರಗಳನ್ನು ಇಲ್ಲಿ ಮೆನ್‌ಷನ್ ಮಾಡುತ್ತಿದ್ದೇನೆ.

ಗಂಟು ರೋಗದ ಬಗ್ಗೆ ಜಪಾನಿನ ಓವರ್‌ಸಿಸ್ ಟೆಕ್ನಿಕಲ್ ಎಜೆನ್ಸೀಸ್ 1971ರಲ್ಲಿ ಬರೆದಿರತಕ್ಕಂತಹ ವರದಿ ಪ್ರಕಾರ ಹುಳು ಸಾಕಾಣಿಕೆ ಕೊಠಡಿಯಲ್ಲಿ ಮತ್ತು ಉಪಕರಣಗಳನ್ನು ಇಡುವ ಸ್ಥಳದಲ್ಲಿ ಕತ್ತಲು ತೇವಾಂಶ ಮತ್ತು ಶೀತ ವಾತಾವರಣ ಇದ್ದರೆ ರೋಗಾಣುಗಳು ಒಂದು ವರ್ಷಕ್ಕಿಂತ ಜಾಸ್ತಿ ರೋಗ ಉಂಟು ಮಾಡತಕ್ಕ ಶಕ್ತಿಯನ್ನು ಹೊಂದಿರುತ್ತದೆ. ಒಣ ಮತ್ತು ಹೆಚ್ಚಿನ ಬೆಳಕಿರತಕ್ಕ

ವಾತಾವರಣ ಇದ್ದರೆ ಒಂದು ತಿಂಗಳಲ್ಲಿ ರೋಗ ಉಂಟು ಮಾಡತಕ್ಕ ಶಕ್ತಿ ಶೇಕಡ ಒಂದಕ್ಕಿಂತ ಕಡಿಮೆಯಾಗಿರುತ್ತದೆ. ಆದುದರಿಂದಲೇ ಹುಳು ಸಾಕಾಣಿಕೆ ಉಪಕರಣಗಳನ್ನು ಸೂರ್ಯನ ಬೆಳಕಿನಲ್ಲಿ ಇಡತಕ್ಕ ಉದ್ದೇಶ ಮುಖ್ಯವಾದದ್ದು, ಸರಿಯಾದ ರೀತಿ ಸೋಂಕು ನಿವಾರಣೆ ಮಾಡಬೇಕಾದರೆ ಫಾರ್ಮಲಿನ್ ದ್ರಾವಣ ಸಿಂಪರಣೆ ಮಾಡತಕ್ಕ ಕಾಲದಲ್ಲಿ ಕನಿಷ್ಠ 25 ಸೆ.ಗ್ರೇ. ಉಷ್ಣಾಂಶ ಇರಬೇಕು. ಇದು ಬಹಳ ಮುಖ್ಯವಾದುದ್ದು.

ಕನಿಷ್ಠ 25 ಸೆಂ.ಗ್ರೇ. ಉಷ್ಣಾಂಶ ಇಲ್ಲದಿದ್ದರೆ ಸರ್ಕಾರದ ಅಧಿಕಾರಿಗಳು ಎಷ್ಟು ಪ್ರಯತ್ನ ಮಾಡಿದರೂ ಪರಿಣಾಮಕಾರಿಯಾಗಿ ಆ ರೋಗವನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ, ಖಂಡಿತ ರೋಗ ಉಲ್ಬಣಗೊಳ್ಳುತ್ತದೆ. ಇದರಲ್ಲಿ ಯಾವುದೇ ಎರಡನೇ ಮಾತಿಲ್ಲ, ಈ ವರ್ಷ ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಮೋಡ ಕವಿದ ವಾತಾವರಣ ಇದ್ದು, ಸೂರ್ಯನ ಬೆಳಕು ಪೂರ್ಣ ಇಲ್ಲದೆ ಇರುವುದು. ಕಡಿಮೆ ಪ್ರಮಾಣದ ಮಳೆ, ತುಂತುರು ಮಳೆ ವಾತಾವರಣ ಇದ್ದುದರಿಂದ ಗಂಟುರೋಗದ ಕಣಗಳನ್ನು ನಿಗ್ರಹಿಸಲು ಕಷ್ಟವಾಗಿದೆ. ಈ ಬಗ್ಗೆ ಬಹಳಷ್ಟು ತೀವ್ರತೆಯಿಂದ ಆದೇಶವನ್ನು ಕೊಟ್ಟಿದೆ. ಮತ್ತು ವಿಶೇಷದಳ ಒಂದನ್ನು ರಚನೆ ಮಾಡಿ ಕಳುಹಿಸಿದ್ದೆ. ಆ ವಿಶೇಷದ ದಳದ ಬಗ್ಗೆ ವಿಶೇಷವಾಗಿ ಮುಂದೆ ಹೇಳುತ್ತೇನೆ. ಎಷ್ಟೇ ಡಿಸ್‌ಇನ್‌ಫೆಕ್ಟ್ ಮಾಡಿದರೂ ವಾತಾವರಣದ ಪರಿಣಾಮದಿಂದ ನಾವು ಸಿಂಪಡಿಸಿದ ಔಷಧಿ ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲವೆಂದು ಸೈಂಟಿಸ್ಟ್ ವರದಿ ಪ್ರಕಾರ ತಿಳಿದುಬಂದಿದೆ. ಇಂಥ ಒಂದು ವಾತಾವರಣದಲ್ಲಿ ರೋಗಾಣುಗಳು ಉಲಬಣಗೊಳ್ಳತಕ್ಕ ಶಕ್ತಿಯನ್ನು ಹೊಂದಿರುತ್ತವೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಗಂಟುರೋಗವನ್ನು ಹೋಗಲಾಡಿಸಲು ಆಗುವುದಿಲ್ಲವೆಂಬ ನಿರ್ಧಾರಕ್ಕೆ ಬರುತ್ತೀರಾ?

ಶ್ರೀ ವಿ. ಮುನಿಯಪ್ಪ : ಗಂಟುರೋಗವನ್ನು ಸಂಪೂರ್ಣವಾಗಿ ನಿಯಂತ್ರಿಸಲು ಆಗುವುದಿಲ್ಲವೆಂದು ಸೈಂಟಿಸ್ಟ್‌ಗಳು ರಿಪೋರ್ಟ್ ಮಾಡಿದ್ದಾರೆ. ತಡೆಹಿಡಿಯಲು ನಾವು ರೇಷ್ಮೆ ಬೆಳೆ ಬೆಳೆದುಕೊಳ್ಳಬಹುದು. ತೊಂದರೆ ಏನು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ರೋಗ ಬರುವಾಗ ಹೇಗೆ ಬಂತು ಎಂಬುದಕ್ಕೆ ನಿಮ್ಮ ವಿಜ್ಞಾನಿಗಳಿಗೆ ಗೊತ್ತಾಗಲಿಲ್ಲ, ಆದರೆ ರೋಗ ತಡೆಯುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ಕಾರಣಗಳಿವೆ ಎಂದು ಹೇಳಿದರೆ......

ಶ್ರೀ ವಿ. ಮುನಿಯಪ್ಪ : ತಡೆಯುವುದಕ್ಕಾಗುವುದಿಲ್ಲ ಎಂದು ಹೇಳಲಿಲ್ಲ, ಸಂಪೂರ್ಣವಾಗಿ ನಿರ್ಮೂಲನ ಮಾಡುವುದು ಕಷ್ಟ ಇದೆ ಎಂದು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಹೌದು, ಹೌದು ರೋಗ ಬರುವುದು ಅವರಿಗೆ ಗೊತ್ತಿತ್ತು. ನಿರ್ಮೂಲನ ಮಾಡುವುದು ಅವರಿಗೆ ಗೊತ್ತಿಲ್ಲವೇ?

ಶ್ರೀ ವಿ. ಮುನಿಯಪ್ಪ : ಅದರ ಬಗ್ಗೆ ರಿಸರ್ಚ್ ನಡೆಯುತ್ತಿದೆ. ಅದಕ್ಕೂ ಬರುತ್ತೇನೆ, ಇದು ಬಹಳ ಮಹತ್ವವಾದ ವಿಚಾರ ಇದಕ್ಕೆ ಬಹಳ ಸಹಕಾರ ಬೇಕಾಗಿದೆ. ಈ ರೇಷ್ಮೆ ರಾಜ್ಯದಲ್ಲಿ ಉಳಿಯಬೇಕಾದರೆ ತಮ್ಮ ಸಹಕಾರ ಮತ್ತು ರಾಜ್ಯದಲ್ಲಿರುವ ಎಲ್ಲಾ ರೈತರ ಸಹಕಾರ ಬೇಕು ಈವತ್ತು ಹೊಸ ರೇಷ್ಮೆ ಬೆಳೆಯನ್ನು ಹೊಸ ರೂಪ ಕೊಟ್ಟು ಶಾಶ್ವತವಾಗಿ ಬೆಳಸಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಇದು ಹದಿನಾರು ಲಕ್ಷ ಕುಟುಂಬಗಳ ಜೀವನಕ್ಕೆ ಸಂಬಂಧಪಟ್ಟಿರುವ ವಿಚಾರವಿರುವುದರಿಂದ ಪ್ರತಿಯೊಂದು ಅಂಶವನ್ನೂ ದೀರ್ಘವಾಗಿ ಆಲೋಚನೆ ಮಾಡಿ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಪರಿಹಾರ ಏನು ಎಂಬುದನ್ನು ತಿಳಿಸುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಅಲ್ಲದೆ ಬೇರೆ ರೋಗಗಳಾದ ಸಪ್ಪೆ, ಹಾಲು ಮತ್ತು ಸುಣ್ಣಕಟ್ಟು ರೋಗಗಳು ಬರುವುದಕ್ಕೆ ಕೂಡ ಕಾರಣವಾಗಿದೆ. ವಾತಾವರಣ ಅಡ್ವರ್ಸ್ ಆದಾಗ ಇದೆಲ್ಲಾ ಬರುತ್ತದೆ. ನಮ್ಮ ವ್ಯವಸಾಯದ ಕಂಡೀಷನ್ ಪೂರ್ ಆಗಿರುತ್ತದೆ. ಅದರಲ್ಲೂ ವಿಶೇಷವಾಗಿ ಬಿತ್ತನೆ ಪ್ರದೇಶದಲ್ಲಿ ಇರತಕ್ಕ ರೈತರ ವ್ಯವಸಾಯವಂತೂ ಖಂಡಿತ ವರ್ಷಕ್ಕೊಂದಾವರ್ತಿ ಬೇಸಾಯ ಮಾಡುತ್ತಾರೋ ಏನೋ ಗೊತ್ತಿಲ್ಲ. ವರ್ಷಕ್ಕೊಂದಾವರ್ತಿ ಭೂಮಿಯನ್ನು ಬಿಸಿಲಿಗೆ ಬಿಟ್ಟು ಅಲ್ಲಿರತಕ್ಕ ರೋಗಾಣುಗಳನ್ನು ನಾಶ ಮಾಡತಕ್ಕ ವ್ಯವಸ್ಥೆಯೂ ಸಹ ಸರಿಯಾಗಿಲ್ಲ ಇಲ್ಲ. ಅವರಿಗೆ ಎಷ್ಟೇ ತಿಳಿವಳಿಕೆಯನ್ನು ಕೊಟ್ಟರೂ ಬಹುಶಃ ಅವರದೇ ಆದ ವೈಯಕ್ತಿಕವಾದ ಸಮಸ್ಯೆಗಳು ಇರುವುದರಿಂದ ಅವರು ಸಕ್ರಮವಾಗಿ ಅದನ್ನು ಅನುಸರಿಸುತ್ತಾ ಇಲ್ಲ ಎಂಬ ವಿಚಾರವನ್ನು ನಾವು ಮನಗಂಡಿದ್ದೇವೆ. ಅದೂ ಒಂದು ಕಾರಣವಾಗಿದೆ. ಇವತ್ತು ಒಂದು ವಿಚಾರ ಹೇಳುತ್ತೇನೆ. ಕುಣಿಗಲ್ ತಾಲ್ಲೂಕಿನಲ್ಲಿ ಈ ವರ್ಷ ಆಗಸ್ಟ್ ಅಂತ್ಯದವರೆಗೆ ಕೇವಲ 20 ದಿವಸದ ಅವಧಿಯಲ್ಲಿ ಒಂದೇ ಬಾರಿ ಮಳೆ ಬಂತು. 352. 5 ಮಿಲಿಮಿಟರ್ ಮಳೆಯಾಗಿದೆ ಎರಡು ತಿಂಗಳಲ್ಲಿ. ಕಳೆದ ವರ್ಷ ಇದೆ ಅವಧಿಯಲ್ಲಿ 258.5 ಮಿಲಿಮೀಟರ್ ಮಳೆ ಆಗಿತ್ತು. ಮಾಗಡಿ ತಾಲ್ಲೂಕಿನಲ್ಲಿ ಈ ವರ್ಷ ಆಗಸ್ಟ್ ಅಂತ್ಯದವರೆಗೆ 540.2 ಮಿಲಿಮೀಟರ್ ಮಳೆಯಾಗಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ 181.68 ಮಿಲಿ ಮೀಟರ್ ಮಳೆಯಾಗಿದೆ. ಬೇಸಿಗೆ ಮುಗಿದು ತಕ್ಷಣ ಮಳೆಗಾಲ ಪ್ರಾರಂಭವಾದಾಗ ಒಂದೇ ಸಾರಿ ಮಳೆ ಕಂಟಿನ್ಯೂಯಸ್ಸಾಗಿ ಬಂದರೆ ಆ ಸಂದರ್ಭದಲ್ಲಿ ಈ ಒಂದು ರೋಗ ನಿಯಂತ್ರಣ ಕಾರ್ಯ ಫಲಕಾರಿಯಾಗುವುದಿಲ್ಲ ಎಂಬ ವಿಚಾರ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ ಗೊತ್ತಾಯಿತು. ಆ ಪೀರಿಯಡ್‌ನಲ್ಲಿ ಮಾತ್ರ. ಉಳಿದ ಸಂದರ್ಭದಲ್ಲಿ ಕ್ರಮ ಸೀರಿಯಸ್ ಆದಾಗ ತಕ್ಷಣ ಕಂಟ್ರೋಲ್ ಆಗುತ್ತದೆ. ಮಧ್ಯೆ ಒಂದು ತಿಂಗಳ ಅವಧಿಯಲ್ಲಿ ಆ ತರಹ ವಾತಾವರಣ ಬದಲಾವಣೆಯಾಗುತ್ತದೆ. ಬೇಸಿಗೆ ಮುಗಿಯುತ್ತದೆ. ಮಳೆಗಾಲ ಪ್ರಾರಂಭವಾಗುತ್ತದೆ. ಸಡನ್ನಾಗಿ ಮಳೆ ಕಂಟಿನ್ಯುಯಸ್ಸಾಗಿ ಬಿದ್ದಾಗ ಆಗ ವಾತಾವರಣದ ವೈಪರೀತ್ಯ ಇದರ ಮೇಲೆ ಪರಿಣಾಮ ಬೀರುತ್ತದೆ ಎಂಬ ವಿಚಾರವನ್ನು ಅಲ್ಲಿ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : 540 ಮಿಲಿಮೀಟರ್ ಮಳೆ ಯಾವಾಗ ಬಿತ್ತು?

ಶ್ರೀ ವಿ. ಮುನಿಯಪ್ಪ : 3 ತಿಂಗಳ ಅವಧಿಯಲ್ಲಿ, ಜೂನ್ ಜುಲೈ ಆಗಸ್ಟ್‌ನಲ್ಲಿ ಆಗಸ್ಟ್ 15ಕ್ಕೆ ಮಳೆ ನಿಂತಿದೆ. ಅಲ್ಲಿಂದೀಚೆಗೆ ಒಳ್ಳೆಯ ರಿಸಲ್ಟ್ ಬಂದಿದೆ. ಅದಕ್ಕೆ ಮುಂದೆ ಬರುತ್ತೇನೆ. ಮಳೆ ನಿಂತ ಮೇಲೆ ಚೆನ್ನಾಗಿದೆ. ಮಾನ್ಯ ಸಿಂಧ್ಯಾಜಿಯವರು ಅದನ್ನು ಚೆನ್ನಾಗಿ ಗಮನಿಸಿದ್ದಾರೆ. ಸುಮಾರು ಒಂದು ತಿಂಗಳಿಂದ ಒಳ್ಳೆಯ ಬೆಳೆ ಬರುತ್ತಿದೆ ಎಂದು ಹೇಳಿದ್ದೀರಿ. ಖಂಡಿತ ಬಂದಿದೆ. ನಾನು ರಿಸಲ್ಟ್ ತರಿಸಿದ್ದೇನೆ. ಒಂದು ತಿಂಗಳ ವಿಚಾರ ನನ್ನ ಹತ್ತಿರ ಇರಲಿಲ್ಲ, ತಾವು ಹೇಳಿದ ಮೇಲೆ ಆ ರಿಸಲ್ಟ್ ತರಿಸಿಕೊಂಡಿದ್ದೇನೆ. ಆಗಸ್ಟ್ 20 ರಿಂದೀಚೆಗೆ

ಒಳ್ಳೆ ಬೆಳೆ ಬರುತ್ತಿದೆ. ಮಧ್ಯ ಒಂದು ತಿಂಗಳಲ್ಲಿ ಒಂದೂವರೆ ತಿಂಗಳಲ್ಲಿ ತೊಂದರೆ ಏತಕ್ಕಾಯಿತು ಎಂಬುದನ್ನು ಹೇಳುತ್ತೇನೆ. 1991-92ರಲ್ಲಿ ಸಾಂಪ್ರದಾಯಕ ನಾಲ್ಕು ಜಿಲ್ಲೆಗಳಲ್ಲಿ ವಿಪರೀತ ಮೋಡ ಕವಿದ ವಾತಾವರಣವಿದ್ದು ಆಗಾಗ್ಗೆ ಮಳೆ ಬೀಳುತ್ತಿದ್ದು ಸೂರ್ಯನ ಪೂರ್ಣ ಬೆಳಕಿಲ್ಲದೆ ಅಥವಾ ಅತಿ ಕಡಿಮೆ ಬೆಳಕಿನ ವಾತಾವರಣ ಪರಿಸ್ಥಿತಿ ಇದ್ದಿತು. ಆದುದರಿಂದ ರೋಗಾಣುಗಳ ಸಂಖ್ಯೆಯನ್ನು ಪೂರ್ಣಹತೋಟಿಗೆ ತರಲಾಗಲಿಲ್ಲ. ಈ ರೋಗಾಣುಗಳನ್ನು ತಡೆಗಟ್ಟಲು ಸರ್ಕಾರ ಮತ್ತು ಇಲಾಖೆಯ ಅಧಿಕಾರಿಗಳು ಪರಿಣಾಮಕಾರಿಯಾದ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದಾರೆ. ಈಗ ತಾವು ಏನೇನು ವಿಚಾರಗಳನ್ನು ಹೇಳಿದ್ದೀರಿ ಅದಕ್ಕೆ ಏನೇನು ಸರ್ಕಾರ ಶ್ರಮಪಟ್ಟು ಯಾವರೀತಿ ಹೊಸದಾಗಿ ಜನವರಿ ಫೆಬ್ರವರಿಯಲ್ಲಿ ಇಂಟ್ರೊಡಕ್ಷನ್ ಮಾಡಿ ಈ ತರಹ ಮಾಡಿದರೆ ಸದ್ಯಕ್ಕೆ ರೋಗ ತಡೆಗಟ್ಟುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ವಿಚಾರ ಮಾಡಿ ಚರ್ಚೆ ಮಾಡಿ ಆ ವಿಚಾರಗಳನ್ನು ಜನವರಿ ಫೆಬ್ರವರಿಯಲ್ಲಿ ಅವರ' ಗಮನಕ್ಕೆ ಕೊಟ್ಟಿದ್ದೆ. ಅದರ ಬಗ್ಗೆ ಸಂಕ್ಷಿಪ್ತವಾಗಿ ನಿಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಬಿತ್ತನೆ ವಲಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ತಾಂತ್ರಿಕ ಕೆಲಸಗಾರರನ್ನು ಒದಗಿಸಲು 159 ವಲಯಗಳನ್ನು ಮಿಶ್ರತಳಿ ಪ್ರದೇಶದಿಂದ ಬಿತ್ತನೆ ವಲಯಕ್ಕೆ ಬದಲಾಯಿಸಿರುವುದು. ಈಗಾಗಲೇ ಅಲ್ಲಿ 75 ವಲಯಗಳಿದ್ದವು. ಈಗ 159 ವಲಯಗಳನ್ನು ನಾವು ಛೇಂಜ್ ಮಾಡಿದ್ದೇವೆ. ಅಲ್ಲಿ 350 ರಿಂದ 450ಕ್ಕೆ ಒಂದು ವಲಯ ಇತ್ತು. 130 ರಿಂದ 150 ರೈತರಿಗೆ ಒಂದು ವಲಯ ಎಂದು ಮಾಡಿ ಅದನ್ನು ಉಸ್ತುವಾರಿ ನೋಡುವುದಕ್ಕೆ ಶೀಘ್ರಗತಿಯಲ್ಲಿ ನಾವು ವ್ಯವಸ್ಥೆ ಮಾಡಿದೆವು. ಹುಳು ಕೋಶ ಮತ್ತು ಚಿಟ್ಟೆ ಪರೀಕ್ಷಿಸಲು ಹಾಗೂ ಮೇಲ್ವಿಚಾರಣಾ ಕಾರ್ಯವನ್ನು ತೀವ್ರಗೊಳಿಸಲು ಮೂರು ಸಹಾಯಕ ನಿರ್ದೇಶಕರುಗಳನ್ನು ನೇಮಿಸಲಾಯಿತು. ಬರೀ ಈ ಒಂದು ಕೆಲಸಕ್ಕೆ ಹುಳ, ಕೋಶ ಮತ್ತು ಚಿಟ್ಟೆ ಪರೀಕ್ಷೆ ಮಾಡಿ ನಂತರ ಇದನ್ನು ಕೊಡಬೇಕು ಎಂಬ ವಿಚಾರದಲ್ಲಿ ನೇಮಿಸಲಾಗಿದೆ.

12.55 ಪಿ.ಎಂ

ನಾವು ಅಲ್ಲಿ ಪಿ-ಒನ್ ಅನ್ನು ಮಾಡತಕ್ಕ ವ್ಯವಸ್ಥೆಗೆ ನಾವು ಅಲ್ಲಿ ಮಾಡುವುದಕ್ಕೆ ಆಗಲಿಲ್ಲ. ನಾವು ಉತ್ಪಾದನೆಗೆ ಅಧಿಕಾರಿಗಳಿಗೆ ಕೊಡುವ ಸೀಡ್ ಏನಿದೆ. ಅದನ್ನು ಮಾತ್ರ ಪರೀಕ್ಷೆ ಮಾಡುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ. ಒಂದೇ ಲಾಟಿನ ಮೊಟ್ಟೆಗಳು ಬೇರೆ ಬೇರೆ ಬೆಳೆಗಾರರಿಗೆ ವಿತರಣೆಯಾಗಿದ್ದು ಯಾವುದೇ ಒಬ್ಬ ಬೆಳೆಗಾರರ ಬೆಳೆಯಲ್ಲಿ ಗಂಟು ರೋಗ ಕಾಣಿಸಿದರೆ ಆ ಎಲ್ಲಾ ಬೆಳೆಗಾರರು ಉತ್ಪಾದಿಸಿದ ಗೂಡನ್ನು ನೂಲು ಬಿಚ್ಚಾಣಿಕೆಗೆ ಮಾರಾಟ ಮಾಡಲಾಗುತ್ತಿದೆ. ಇಂತಹ ಗೂಡೂ ಬಿತ್ತನೆಗೆ ಆಕಸ್ಮಾತಾಗಿ ಹೋಗವುದನ್ನು ತಪ್ಪಿಸಲು ಆ ಗೂಡನ್ನು ಮಾರುಕಟ್ಟೆಗಳಲ್ಲಿ, ಉಬ್ಬೆ ಕೊಡಲಾಗುತ್ತದೆ. ಈ ಗೂಡನ್ನು ರಾಮನಗರ ಮಾರುಕಟ್ಟೆಗೆ ಇಲಾಖೆ ಲಾರಿಯಲ್ಲಿ ಸಾಗಿಸಿ ಅಲ್ಲಿ ಮಾರಾಟವಾದ ಕೂಡಲೇ ಅಲ್ಲೇ ಉಬ್ಬೆಕೊಡಲಾಗುತ್ತಿದೆ. ರೇಷ್ಮೆ ಬೆಳೆಗಾರರ ಹುಳು ಸಾಕಾಣಿಕೆ ಮನೆಗಳನ್ನು ಹುಳುಸಾಕಣೆ ಉಪಕರಣಗಳನ್ನು ಶೇ. 2 ರಿಂದ 3ರ ಫಾರ್ಮಾಲಿನ್ ದ್ರಾವಣದಿಂದ ಶೇ. 3 ರಿಂದ 5ರ ಬ್ಲೀಚಿಂಗ್ ಪುಡಿ ದ್ರಾವಣದಿಂದ ಸಿಂಪಡಿಸಿ ಸೋಂಕು ನಿವಾರಿಸಲು ಮತ್ತು ಹುಳುಗಳನ್ನು ಪ್ರತಿ ಹಂತದಲ್ಲೂ ಪರೀಕ್ಷಿಸಲು 24 ತಂಡಗಳನ್ನು ನಿಯಮಿಸಲಾಗಿದೆ. ಡಿಸ್‌ಇನ್‌ಫೆಕ್ಷನ್ ಸ್ಕ್ವಾಡ್ ಅನ್ನು ನೇಮಕ ಮಾಡಿದ್ದು 24 ಜನರು ಹಳ್ಳಿಗಳಲ್ಲಿ ಓಡಾಡಿ ಯಾವ ರೈತರ ಮನೆಯಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಅದನ್ನು ತಿಳಿದು ಈ ಕೆಲಸ

ಪ್ರಾರಂಭ ಮಾಡಬೇಕೆಂದು ಮಾಡಿದ್ದೇವೆ. ಗಂಟು ರೋಗವಿರುವ ಗೂಡುಗಳೇನಾದರೂ ಆಕಸ್ಮಾತಾಗಿ ಬಿತ್ತನೆಗೆ ಹೋಗುವುದನ್ನು ತಪ್ಪಿಸಲು ಕೊನೆಯ ದಿನ ಹಣ್ಣು ಹುಳುಗಳನ್ನು ಮತ್ತು ಮಾರುಕಟ್ಟೆಗೆ ಗೂಡು ಬಂದ ನಂತರ ಅವುಗಳ ಕೋಶಗಳನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲಾಗುತ್ತಿದೆ. ಅಮೃತೂರು ಮತ್ತು ಎಡೆಯೂರು ಹೋಬಳಿಗಳಲ್ಲಿ ಹುಳು ಸಾಕಾಣಿಕೆದಾರರು ಹಳ್ಳಿಗಳಲ್ಲಿ ಬಹಳ ವಿರಳವಾಗಿರುವುದರಿಂದ ಆ ಹಳ್ಳಿಗಳನ್ನು ಮೂಲ ಬಿತ್ತನೆ ಗೂಡು ಉತ್ಪನ್ನ ಮಾಡಲು ಆಯ್ಕೆ ಮಾಡಲಾಗಿದೆ. ಕಡಿಮೆ ಬೆಳೆಯುವ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈಗಾಗಲೇ ಬೆಳೆಗಾರರು ಉತ್ಪನ್ನ ಮಾಡಿದ ಹೆಚ್ಚಿನ ಪ್ರಮಾಣದ ಗೂಡನ್ನು ಪಿ 1 ಮೊಟ್ಟೆ ತಯಾರಿಸಲು ಉಪಯೋಗಿಸಲಾಗುತ್ತಿದೆ. ಈಗ ಪಂಗಡವಾಗಿ ಹುಳು ಸಾಕಣಿ ಮಾಡುವ ಪದ್ಧತಿಯನ್ನು ಪರಿಣಾಮಕಾರಿಯಾಗಿ ಸೋಂಕು ನಿವಾರಣಾ ಕಾರ್ಯಕ್ರಮ ಕೈಗೊಂಡು ರೋಗ ನಿಯಂತ್ರಿಸಲು ಆಚರಣೆಗೆ ತರಲಾಗುತ್ತಿದೆ. ಇದು ಬಹಳ ಕಷ್ಟಕರವಾದ ಕೆಲಸ ನಾವು ಮಾಡುತ್ತಿರುವುದು. ಇವತ್ತು ಪಂಗಡ ಎಂದರೆ, ಯಾವ ಹಳ್ಳಿಯಲ್ಲಿ ಕನಿಷ್ಠ 10 ಜನ ರೈತರು ಬೆಳೆಯುತ್ತಿದ್ದರೆ. ಅಲ್ಲಿ 2 ಪಂಗಡ ಮಾಡಿ, 5 ಜನರಿಗೆ ಒಂದೇ ಸಾರಿ ಮೊಟ್ಟೆಯನ್ನು ಕೊಡುವುದು. ಇನ್ನೊಂದು 15-20 ದಿವಸದಲ್ಲಿ ಇನ್ನೊಂದು ಐದು ಜನರಿಗೆ ಮೊಟ್ಟೆ ಕೊಟ್ಟು ಒಂದು ಒಂದೂವರೆ ತಿಂಗಳ ಅವಧಿ ಮುಗಿದ ಮೇಲೆ ಈ ಎರಡೂ ಪಂಗಡಗಳು ಮುಗಿದು ಹೋದ ನಂತರ ಸಾಮೂಹಿಕ ಮಾಸ್ ಡಿಸ್ ಇನ್‌ಫೆಕ್ಷನ್ ಪ್ರೋಗ್ರಾಮ್ ತೆಗೆದುಕೊಳ್ಳಬೇಕು. ಪ್ರತಿಯೊಬ್ಬ ರೈತನ ಮನೆ, ಬೀದಿ, ತಿಪ್ಪೆ, ಅವರು ಹಾಕತಕ್ಕ ವಾತವರಣವನ್ನು ಡಿಸ್ ಇನ್‌ಫೆಕ್ಷನ್ ಮಾಡಿ ಮುಕ್ತವಾದ ವಾತಾವರಣ ನಿರ್ಮಾಣ ಮಾಡಬೇಕೆನ್ನುವ ಕೆಲಸಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಆದರೆ ಯಾವ ರೈತರಿಂದ ನಮಗೆ ಹೆಚ್ಚಿನ ಸಹಕಾರ ಸಿಕ್ಕುತ್ತಿಲ್ಲ. ನಮಗೆ ಇವತ್ತೇ ಮೊಟ್ಟೆ ಕೊಟ್ಟಬಿಡಿ ಎನ್ನುತ್ತಾರೆ. ನಮಗೆ ಗೊತ್ತಿಲ್ಲದೇ ಮೊಟ್ಟೆ ತಂದಿಟ್ಟು. ನಮ್ಮ ಅಧಿಕಾರಿಗಳ ಮೇಲೆಯೇ ಗಲಾಟೆ ಮಾಡುತ್ತಾರೆ. ಎಲ್ಲಾ ಹಂತದ ಹುಳ ಇರುವುದರಿಂದ ಒಂದೇ ಬ್ಯಾಚ್‌ಗೆ ಅವರನ್ನು ಅಳವಡಿಸುವುದು ಬಹಳ ಕಷ್ಟವಾಗಿದೆ. ನಮ್ಮ ಹತ್ತಿರ ತಟ್ಟೆ ಇಲ್ಲ, ಬುಟ್ಟಿ ಇಲ್ಲ, ನಾವು ಅಲ್ಲಿಂದ ಇಲ್ಲಿಂದ ತರುತ್ತೇವೆ, ನೀವು ಈ ಸಿಸ್ಟಮ್ ಅನ್ನು ಇಂಟ್ರಡ್ಯೂಸ್ ಮಾಡಿದರೆ ನಮಗೆ ಬಹಳ ಕಷ್ಟವಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಈ ಬಗ್ಗೆ ಅವರೂ ವಿಚಾರ ಮಾಡಬೇಕಾಗುತ್ತದೆ. ಒಂದು ಹಂತದಲ್ಲಿ ಒಂದು ಮನೆಗೆ ಔಷಧಿ ಹೊಡೆದು ಇನ್ನೊಂದು ಮನೆಯಲ್ಲಿ 2ನೇ ಹಂತ ಇದೆ ಎಂದು ಬಿಟ್ಟು ಇನ್ನೊಂದು ಊರಿಗೆ ಹೋದರೆ ನಮಗೆ ಬಹಳ ತೊಂದರೆಯಾಗುತ್ತದೆ. ಮತ್ತೆ ಅವನು 15 ದಿವಸದ ನಂತರ ಆ ಊರಿಗೆ ಬರುತ್ತಾನೆ. ಅಲ್ಲಿ ಮತ್ತೆ ವಾತಾವರಣದಲ್ಲಿ ರೋಗವನ್ನು ಖಂಡಿತಾ ತಡೆಗಟ್ಟಲು ಸಾಧ್ಯವಾಗುವುದಿಲ್ಲ. ಯಾರೇ ಬರಬಹುದು, ಯಾರೇ ಹೋಗಬಹುದು, ಆ ವಿಚಾರ ಬೇರೆ. ಈ ನ್ಯೂನ್ಯತೆಯನ್ನು ಸರಿಪಡಿಸಿ ಹೊಸ ಪದ್ದತಿ ಇಂಟ್ರಡ್ರೂಸ್ ಮಾಡದೇ ಹೋದರೆ ಖಂಡಿತ ಬಹಳ ಕಷ್ಟವಾಗುತ್ತದೆ. ಈ ವಿಚಾರದಲ್ಲಿ ನಾವು ನಮ್ಮ ಅಧಿಕಾರಿಗಳಿಗೆ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ರೈತರು ಬೈದರೂ ಚಿಂತೆ ಇಲ್ಲ, ಅವರ ಕೈಲಿ ಬೈಸಿಕೊಳ್ಳಿ, ಏನಾದರೂ ಅಂದರೆ ಅನಿಸಿಕೊಳ್ಳಿ. ಆದರೆ ಈ ಒಂದು ಸಿಸ್ಟಮ್ ಅನ್ನು ಕಡೇ ಪಕ್ಷ ಬಿತ್ತನೆಯ ವಲಯದಲ್ಲಿ ತರದೇ ಹೋದರೆ ರೋಗ ಸಾಮೂಹಿಕವಾಗಿ ನಿಯಂತ್ರಣ ಮಾಡುವುದು ಕಷ್ಟವಿದೆ ಎಂದು ಹೇಳಿದ್ದೇವೆ. ಆದ್ದರಿಂದ ಬಹಳ ಶ್ರಮಪಟ್ಟು ಕಡಿಮೆ ಬೆಳೆಗಾರರಿರುವ ಕೆಲವು ಹಳ್ಳಿಗಳಲ್ಲಿ

ಈ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಈ ವರ್ಷ ಪ್ರತಿಹಂತದ ಹುಳುಗಳ ಪರೀಕ್ಷೆಯನ್ನು ತೀವ್ರತರವಾಗಿ ಕೈಗೊಂಡು ಬಿತ್ತನೆ ವಲಯದಲ್ಲಿ ಗಂಟುರೋಗದ ಎಲ್ಲಾ ಬೆಳೆಗಳನ್ನು ಪೂರ್ಣವಾಗಿ ತ್ಯಜಿಸಲಾಗುತ್ತಿದೆ. ಬಹಳ ವರ್ಷಗಳ ನಿರ್ಲಕ್ಷ್ಯತನದಿಂದಾಗಿ ಇದು ಉಲ್ಬಣಗೊಂಡಿದೆ. ಇದು ನಿನ್ನೆ ಮೊನ್ನೆ ಬಂದಿರುವುದಂತೂ ಅಲ್ಲ, ಅದರ ಬಗ್ಗೆ ನಾನು ಎಲ್ಲಿ ಬೇಕಾದರೂ ಸಾಬೀತು ಮಾಡುವುದಕ್ಕೆ ತಯಾರು ಇದ್ದೇನೆ. ರೋಗ ತಪಾಸಣೆ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡಿದ್ದು ಈ ಬಗ್ಗೆ ವಿಶೇಷ ಸಿಬ್ಬಂಧಿಯ ಕೊರತೆ ಇದೆ ಎಂದು ಹೇಳಿದರು ಆ ಬಗ್ಗೆ ನಾನು ನೋಡಿ ಹೆಚ್ಚಿನ ಸಿಬ್ಬಂದಿ ಅಲ್ಲಿ ಹಾಕಿದ್ದೇನೆ. ಇದನ್ನು ನಿವಾರಣೆ ಮಾಡಬೇಕಾದರೆ ಕನಿಷ್ಠ ಸವಲತ್ತುಗಳನ್ನು ಕೊಡಲೇಬೇಕೆಂದು ತೀರ್ಮಾನ ಮಾಡಿ, ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಣೆ ಮನೆ ಕಟ್ಟಲು, ಹುಳು ಸಾಕಣೆ ಉಪಕರಣಗಳನ್ನು ಕೊಳ್ಳಲು ಮತ್ತು ಬಾವಿತೆಗೆಸಲು 11.13 ಕೋಟಿ ರೂ.ಗಳ 3 ವರ್ಷಗಳ ಅವಧಿಯ ಯೋಜನೆಯನ್ನು ತಯಾರಿಸಿ ನಬಾರ್ಡ್ ಸಂಸ್ಥೆಯ ಒಪ್ಪಿಗೆಗೆ ಕಳುಹಿಸಿಕೊಡಲಾಗಿತ್ತು. ನಬಾರ್ಡ್ ಸಂಸ್ಥೆ 1991-92ನೇ ಸಾಲಿಗೆ 1.26 ಕೋಟಿ ರೂ.ಗಳ ಯೋಜನೆಗೆ ಆಗಸ್ಟ್ ತಿಂಗಳಲ್ಲಿ ಒಪ್ಪಿಗೆ ನೀಡಿದೆ. ಈ ಯೋಜನೆಯನ್ನು ಕಾರ್ಯಗತಮಾಡಲು ಕೈಗೊಳ್ಳಲಾಗದೆ ಹೋದ ಸಮ್ಮೇಳನದಲ್ಲಿ ನಾವು ತೀರ್ಮಾನ ಮಾಡಿದ್ದನ್ನು ನಾವು ಕಳುಹಿಸಿಕೊಟ್ಟಿದ್ದೇವೆ. 1991-92 ಸಾಲಿಗೆ 1 ಕೋಟಿ 26 ಲಕ್ಷರೂ. ಮಂಜೂರು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಈ ಹಣವನ್ನು ನಾವು 1992 ರ ಮಾರ್ಚಿ 31ರೊಳಗೆ ಖರ್ಚು ಮಾಡಬೇಕು.

ಮೂರು ವರ್ಷಗಳ ಅವಧಿಯಲ್ಲಿ 11.13 ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಮನೆ ಕಟ್ಟಲಿಕ್ಕೆ ಯೋಜನೆ. ಅದರ ಜೊತೆಗೆ ಇವರಿಗೆ ಬೆಲೆ ಸ್ಥಿರೀಕರಣ ನಿಧಿಯಿಂದ ಅವರಿಗೆ ಬೇಕಾದ ಉಪಕರಣಗಳನ್ನು ಕೊಡತಕ್ಕ ಯೋಜನೆ ಇದೆ. ಅದರ ಜೊತೆಯಲ್ಲಿ ಬೆಲೆ ಸ್ಥಿರೀಕರಣ ನಿಧಿಯಿಂದ ಸಾಮಾನ್ಯ ರೈತನಿಗೆ 25 ಪರ್ಸೆಂಟ್ ಸಬ್ಸಿಡಿ ಕೊಡತಕ್ಕ ಕೆಲಸವನ್ನು ವಿಶೇಷವಾಗಿ ಹರಿಜನ-ಗಿರಿಜನರು ಯಾರು ರೇಷ್ಮೆ ಬೆಳೆಯಲ್ಲಿ ಬಿತ್ತನೆ ಪ್ರದೇಶದಲ್ಲಿ ನಿರತರಾಗಿದ್ದಾರೆ ಆ ಜನರಿಗೆ ಶೇಕಡ 50 ರಷ್ಟು ಸಬ್ಸಿಡಿ ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಿದೆ. ಈ ಹಣವನ್ನು ನಮ್ಮ ಇಲಾಖೆಯ ಅಭಿವೃದ್ಧಿ ನಿಧಿಯಿಂದ ಕೊಡತಕ್ಕ ಕೆಲಸ ಮಾಡಿದ್ದೇವೆ. ಈ ಹಣದ ಜೊತೆಯಲ್ಲಿಯೇ ಕೊಡತಕ್ಕ ಯೋಜನೆ ಇದೆ.

ಶ್ರೀ ಸಿ. ಬೈರೇಗೌಡ : ಈಗ ಪೇಮೆಂಟ್ ಆಗಿರತಕ್ಕದ್ದು ಎಷ್ಟು? ಈಗ ಸಬ್ಸಿಡಿಯನ್ನು ಶೇಕಡ 30ರಷ್ಟು ಮತ್ತು 50 ರಷ್ಟು ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ, ಅದರಲ್ಲಿ ನನಗೆ ಅನುಮಾನ ಇರತಕ್ಕದ್ದು ಅದು ಕಾಗದದ ರೂಪದಲ್ಲಿದೆ ಅದು ರೈತರಿಗೆ ಮುಟ್ಟಿದೆಯೇ ಎನ್ನುವುದನ್ನು ಮುಟ್ಟಿದ್ದಾರೆ, ಎಷ್ಟು ದಯವಿಟ್ಟು ಎಂಬುದನ್ನು ಹೇಳಿ. ಏಕೆಂದರೆ ನಮ್ಮ ಯೋಜನೆಗಳೆಲ್ಲಾ ಬಹಳ ಚೆನ್ನಾಗಿರುತ್ತದೆ ಕಾಗದದ ಮೇಲೆ. ಅವು ಕಾರ್ಯಗತವಾಗದಿದ್ದರೆ ಇಂತಹ ತಾಪತ್ರಯ ಬರತಕ್ಕದ್ದು ಕಾರ್ಯಗತವಾಗಿದ್ದರೆ ಬಹಳ ಸಂತೋಷ.

ಶ್ರೀ ಮುನಿಯಪ್ಪ : ಅದನ್ನು ನಾನು ಹೇಳುತ್ತೇನೆ. 1991-92ನೇ ಸಾಲಿಗೆ ನಬಾರ್ಡ್‌ನಿಂದ 22-7-91ರಲ್ಲಿ ಮಂಜೂರಾತಿಯಾಗಿ ಬಂದಿದೆ. 11 ಕೋಟಿ ರೂಪಾಯಿ ಯೋಜನೆಯನ್ನು ನಾವು ಕಳುಹಿಸಿದ್ದು ಅದರಲ್ಲಿ 1.26ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಮಾರ್ಚಿ 31ರೊಳಗೆ ಖರ್ಚುಮಾಡಿ ಅದಕ್ಕೆ

ಮಂಜೂರಾತಿಯನ್ನು ಕೊಟ್ಟಿದ್ದೇವೆ ಎಂಬುದರ ಬಗ್ಗೆ ನಮಗೆ ಪತ್ರ ಬಂದಿದೆ. ನಮ್ಮ ಅಧಿಕಾರಿಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ನಿರ್ದೇಶನ ಕೊಟ್ಟಿದ್ದೇವೆ. ಅದಕ್ಕೆ ನಾನು ಒಂದು ಸಮಿತಿಯನ್ನು ಮಾಡತಕ್ಕ ಮಾತನ್ನು ನಿನ್ನೆ ರೈತರ ಸಮ್ಮೇಳನದಲ್ಲಿ ಅನೌನ್ಸ್‌ಮಾಡಿದ್ದೇನೆ. ಎಲ್ಲಾ ಪಕ್ಷಗಳ ರೈತರ ಮುಖಂಡರನ್ನು ಒಳಗೊಂಡಂತೆ, ಅದರಲ್ಲೂ ವಿಶೇಷವಾಗಿ ರೇಷ್ಮೆ ಬಿತ್ತನೆ ವಲಯ ಪ್ರದೇಶದ ರೈತರ ಮುಖಂಡರ ಹಾಗೂ ರಾಜಕೀಯ ಮುಖಂಡರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ ಅಲ್ಲಿರತಕ್ಕ ಈ ಸಮಸ್ಯೆಗಳ ಬಗ್ಗೆ ಅಮೂಲಾಗ್ರವಾಗಿ ಚರ್ಚೆಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಒಂದು ಸಮಿತಿಯನ್ನು ಮಾಡಬೇಕೆಂದು ರೈತರ ಸಮ್ಮೇಳನದಲ್ಲಿ ಹೇಳಿದ್ದೇನೆ.

ಆ ಸಭೆಯಲ್ಲಿ ಸುಮಾರು ಐದಾರು ಸಾವಿರ ಜನ ಸೇರಿದ್ದರು. ಹಿಂದಿನ ರೇಷ್ಮೆ ಖಾತೆಯ ಸಚಿವರಾದ ಮಾನ್ಯ ವೈ.ಕೆ. ರಾಮಯ್ಯ ನವರು ಈ ಸಭೆಯನ್ನು ಏರ್ಪಾಟು ಮಾಡುವುದರಲ್ಲಿ ತುಂಬಾ ಆಸಕ್ತಿಯನ್ನು ವಹಿಸಿಕೊಂಡಿದ್ದರು. ಸ್ಥಳೀಯ ಶಾಸಕರಾದ ಹಾಗು ಮುಖಂಡರುಗಳಾದ ಮಾನ್ಯ ಹುಚ್ಚುಮಾಸ್ತಿಗೌಡರು ಮತ್ತು ಮಾನ್ಯ ಲಕ್ಕಪ್ಪನವರು, ಮಾಗಡಿ ತಾಲ್ಲೂಕಿನ ಶಾಸಕರಾದ ಮಾನ್ಯ ರೇವಣ್ಣನವರು ಎಲ್ಲಾ ಸೇರಿ ಈ ಸಮ್ಮೇಳನಕ್ಕೆ ಬೆಂಬಲ ಕೊಟ್ಟು ಸಹಕರಿಸಿದರು. ಸಮ್ಮೇಳನ ಬಹಳ ಚೆನ್ನಾಗಿ ಆಯಿತು. ಬಹಳ ಮುಕ್ತವಾಗಿ ಚರ್ಚೆಯಾಗಿ ಒಂದು ತೀರ್ಮಾನ ಮಾಡಿ ಈ ಇಂಪ್ಲಿಮೆಂಟ್ ಯಾವರೀತಿ ಮಾಡಬೇಕು ಯಾವರೀತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂಬುದನ್ನು ಆ ಸಮಿತಿಯವರು ಚರ್ಚೆಮಾಡಿ ತೀರ್ಮಾನ ಮಾಡಲಾಗುವುದು.

ಶ್ರೀ ಸಿ. ಬೈರೇಗೌಡ : ಅಲ್ಲಿಗೆ ಈ ಹಣದಲ್ಲಿ ಇನ್ನು ಒಂದು ಪೈಸೆ ಕೂಡ ರೈತರಿಗೆ ಮುಟ್ಟಿಲ್ಲ.

ಶ್ರೀ ವಿ. ಮುನಿಯಪ್ಪ : ಮುಟ್ಟಿಲ್ಲ. ಮಾರ್ಚಿನಲ್ಲಿ ಬಂದಿರತಕ್ಕದ್ದನ್ನು ಈಗ 22ನೇ ಜುಲೈ 91 ರಲ್ಲಿ ಕೇಂದ್ರ ಸರ್ಕಾರದ ನಬಾರ್ಡ್ ಬ್ಯಾಂಕಿನಿಂದ ನಮಗೆ ಅಪ್ರೂವಲ್ ಕೊಟ್ಟಿದ್ದಾರೆ. ಅದರ ಜೊತೆಗೆ ತಕ್ಷಣ 25ಪರ್ಸೆಂಟ್ ಸಬ್ಸಿಡಿ ಕೊಡತಕ್ಕದ್ದನ್ನು ನಮ್ಮ ನಿಧಿಯಿಂದ ಮಂಜೂರು ಮಾಡತಕ್ಕ ಕೆಲಸವನ್ನು ನಾವು ಮಾಡಿದ್ದೇವೆ. ಈ ಕೆಲಸ ಮಾಡುವಾಗ ಇದರ ಜೊತೆಗೆ ಸೇರಿಸಿ ಮಾರ್ಚಿ 31ರೊಳಗೆ ಹಣವನ್ನು ಖರ್ಚುಮಾಡುತ್ತೇವೆ ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಪ್ರೈಸ್ ಸ್ಟೆಬಿಲೈಸೇಷನ್ ಫಂಡ್‌ನಿಂದ ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಾವು ಮಾರ್ಕೆಟ್ ಫೀ ಕೊಡುತ್ತೇವೆ ಆ ಮಾರ್ಕೆಟ್ ಫೀಯನ್ನು ಅದಕ್ಕೆ ಉಪಯೋಗಿಸಿಕೊಳ್ಳಬೇಕೆಂಬುದು ನಿಮ್ಮ ಆಕ್ಟ್‌ನಲ್ಲಿಯೇ ಇದೆ. ಈಗಾಗಲೇ ನಿಮ್ಮ ಹತ್ತಿರ ಆ ಹಣವಿದೆ. ಆ ಫಂಡ್‌ನಲ್ಲಿ ಹಿಂದೆ 18-20 ಕೋಟಿ ಇತ್ತು. ಈಗ ಅದು ಇನ್ನು ಜಾಸ್ತಿಯಾಗಿರಬೇಕು ಅನಿಸುತ್ತದೆ. ಇವತ್ತಿನ ತಾರೀಖಿನಲ್ಲಿ ಎಷ್ಟು ಹಣ ಇದೆಯೆಂಬುದು ನನಗೆ ಗೊತ್ತಿಲ್ಲ. ಈ ಮಾರ್ಕೆಟ್ ಫೀನಲ್ಲಿ ಬರತಕ್ಕ ಪೂರ್ತಿ ಹಣ it is for the development of the industry ಅದನ್ನು ಬೇರೆಯದಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ ದಯವಿಟ್ಟು ಅದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವುದನ್ನು ತಿಳಿಸಿ.

ಶ್ರೀ ವಿ. ಮುನಿಯಪ್ಪ : ವಿಶೇಷವಾಗಿ ಬಿತ್ತನೆ ಪ್ರದೇಶಗಳಲ್ಲಿರತಕ್ಕ ರೈತರಿಗೋಸ್ಕರ ಪ್ರಪ್ರಥಮವಾಗಿ ಹಾಕಿಕೊಂಡಿರತಕ್ಕ ಹೊಸ ಕಾರ್ಯಕ್ರಮ ಇರುವರೆಗೆ

ನಮ್ಮ ರಾಜ್ಯದಲ್ಲಿ ರೈತರಿಗೋಸ್ಕರ ಇಂತಹ ಕಾರ್ಯಕ್ರಮವನ್ನು ರೇಷ್ಮೆ ಇಲಾಖೆಯಲ್ಲಿ ಹಾಕಿಕೊಂಡಿರಲಿಲ್ಲವೆನ್ನತಕ್ಕ ಮಾತನ್ನು ಹೇಳುತ್ತೇನೆ. 1.26 ಕೋಟಿ ರೂಪಾಯಿ ಸಾಲ ರೈತರಿಗೆ ಮಂಜೂರಾಗಿ ಬಂದಿದೆ....

ಶ್ರೀ ಎಸ್. ಹುಚ್ಚಮಾಸ್ತಿಗೌಡ : ದಯಮಾಡಿ ಒಂದು ನಿಮಿಷ ಮಂತ್ರಿಗಳು ಈಲ್ಡ್ ಆಗಬೇಕು. ಮಾನ್ಯ ಭೈರೇಗೌಡರು ಹೇಳಿದಹಾಗೆ ಈ ರೋಗ ನಿವಾರಣಾ ಕಾರ್ಯಕ್ರಮವನ್ನು ಮೂರು ವರ್ಷಗಳಿಗೆ ಹರಡಿ ಕೆಲಸ ಮಾಡುವುದಕ್ಕೆ ಬದಲಾಗಿ ಸಾಧ್ಯವಾದ ಮಟ್ಟಿಗೆ ಹೆಚ್ಚು ಹಣವನ್ನು ಮೊದಲನೆಯ ವರ್ಷವೇ ಒದಗಿಸಿ ಈ ಕೆಲಸವನ್ನು ತ್ವರಿತವಾಗಿ ಕಡಿಮೆ ಅವಧಿಯೊಳಗೆ ಕೆಲಸ ಪೂರೈಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿರತಕ್ಕ ಹಣಕಾಸಿನ ಮುಗ್ಗಟ್ಟಿನ ಬಗ್ಗೆ ನಾನು ಯಾರಿಗೂ ಹೇಳಬೇಕಾಗಿಲ್ಲ. ಮಾನ್ಯ ಭೈರೇಗೌಡರು ಹೇಳಿದಹಾಗೆ ನಮ್ಮ ಅಭಿವೃದ್ಧಿ ನಿಧಿಯಿಂದ ಬೆಲೆ ಸ್ಥಿರೀಕರಣ ನಿಧಿಯಿಂದ ಸ್ವಲ್ಪಮಟ್ಟಿಗೆ ಸಬ್ಸಿಡಿಯನ್ನು ಕೊಡಬಹುದೇ ಹೊರತು ಸಂಪೂರ್ಣವಾಗಿ ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ಒಂದೇ ಸಾರಿ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಬ್ಯಾಂಕಿನವರ ಸಹಾಯ ಬೇಕೇ ಬೇಕಾಗುತ್ತದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ : ಈ ಖಾಯಿಲೆ ಪೂರ್ಣ ಹೋಗಬೇಕಾದರೆ ಮೂರು ವರ್ಷಗಳು ಹಿಡಿದರೆ ಎಷ್ಟು ಕೋಟಿ ರೂಪಾಯಿ ಹಣ ರೈತನಿಗೆ ನಷ್ಟವಾಗುತ್ತದೆ ಎನ್ನುವುದನ್ನು ದಯಮಾಡಿ ಯೋಚನೆ ಮಾಡಿ ಸರ್ವ ಪ್ರಯತ್ನ ಮಾಡಿ, ನಮ್ಮ ಸರ್ಕಾರದಿಂದ ಹೆಚ್ಚು ಹಣವನ್ನು ಒದಗಿಸುವ ರೀತಿಯಲ್ಲಿಯಾದರೂ ಮಾಡಿ ಒಂದು ಒಂದೂವರೆ ವರ್ಷಗಳಲ್ಲಿ ಈ ಕಾಯಿಲೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಹೇಳಿ.

ಶ್ರೀ ಸಿ. ಭೈರೇಗೌಡ : ಶ್ರೀ ಹುಚ್ಚಮಾಸ್ತಿಗೌಡರು ಹೇಳುವುದರಲ್ಲಿ ಅರ್ಥ ಇದೆ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ, ಈ ರೋಗವನ್ನು ಇದೇ ರೀತಿ ತಡೆಗಟ್ಟದೆ ಬಿಟ್ಟರೆ ಈ ಉದ್ಯಮವೇ ಹೋಗಿಬಿಡುತ್ತದೆ ಎಂದು. ಈ ರೋಗವನ್ನು ತಡೆಗಟ್ಟುವುದಕ್ಕೆ ಮೂರು ವರ್ಷ ಕಾರ್ಯಕ್ರಮ ಎಂದಿದ್ದಾರೆ. ಈ ಮೂರು ವರ್ಷಗಳಲ್ಲಿ ಈ ಉದ್ಯಮವೇ ಇಲ್ಲದಿದ್ದರೆ ಹಣ ಖರ್ಚುಮಾಡಿ ಆಗತಕ್ಕಂಥ ಪ್ರಯೋಜನ ಏನು? ಆದ್ದರಿಂದ ಈ ಹಣವನ್ನು ತಕ್ಷಣ ಬಿಡುಗಡೆ ಮಾಡಿ ರೋಗ ನಿರ್ಮೂಲನ ಮಾಡುವಂಥ ಅವಶ್ಯಕತೆ ಇದೆ. ಈಗಾಗಲೇ ಮಾರುಕಟ್ಟೆಗೆ ಬರತಕ್ಕಂಥ ಗೂಡಿನ ಪ್ರಮಾಣ ದಿನೆದಿನೇ ಕಡಿಮೆಯಾಗುತ್ತಿದೆ. ಇದು ಕಡಿಮೆಯಾಗುತ್ತಿರುವುದಕ್ಕೆ ಇದೇ ಕಾರಣ. ಉತ್ತಮವಾದ ಬಿತ್ತನೆ ಬೀಜ ರೈತರಿಗೆ ದೊರೆಯದೇ ಇರುವುದು ಒಂದು ಕಾರಣ. ಇವತ್ತು ತತ್‌ಕ್ಷಣ ಈ ರೋಗವನ್ನು ತಡೆಗಟ್ಟುವುದಕ್ಕೆ ನೀವು 11 ಕೋಟಿನೋ ಅಥವಾ 111 ಕೋಟಿನೋ ಖರ್ಚುಮಾಡಿ. ಅದು ನಮಗೆ ಮುಖ್ಯ ಅಲ್ಲ. ನೀವು ಹಣವನ್ನು ಬ್ಯಾಂಕ್‌ನಿಂದ ತರುತ್ತೀರೋ, ನಬಾರ್ಡ್‌ನಿಂದ ತರುತ್ತೀರೋ, ನಿಮ್ಮ ಖಜಾನೆಯಿಂದ ತರುತ್ತೀರೋ ಅದೂ ಕೂಡ ಮುಖ್ಯ ಅಲ್ಲ. ಇವತ್ತು ನಮಗೆ ಇರತಕ್ಕಂಥ ಆಪತ್ತು ಏನಿದೆ, ಅದನ್ನು ತಡೆಗಟ್ಟುವುದಕ್ಕೆ, ಮತ್ತು ಪಾರುಮಾಡತಕ್ಕದ್ದು ಅತಿ ಮುಖ್ಯವಾಗಿ ಇರತಕ್ಕದ್ದು. ಇದರ ಬಗ್ಗೆ ದಯವಿಟ್ಟು ತಿಳಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮಗೆ ಹಣಕಾಸಿನ ಒತ್ತಡ ಅಥವಾ ತೊಂದರೆ ಇದೆಯೆಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ತಮಗೆ ವಿಶ್ವಬ್ಯಾಂಕ್ ಯೋಜನೆಯ ಕೆಳಗಡೆ ಬೇಕಾದಷ್ಟು ಹಣ ಬಂದಿದೆ. ನನಗೆ ತಿಳಿದಮಟ್ಟಿಗೆ 180ರಿಂದ 182 ಕೋಟಿಯಷ್ಟು ಹಣ ನಿಮಗೆ ಬಂದಿದೆ. ಸಿರಿಕಲ್ಚರ್‌ಗೆ ಫಂಡ್ಸ್ ಕನ್‌ಸ್ಟೆಂಟ್ ಇದೆ ಎಂಬ ಮಾತನ್ನು ಇಲ್ಲಿ ಹೇಳಬಾರದು. ರೈತರಿಗೆ ಅನುಕೂಲವಾಗುವ ಸ್ಕೀಮ್‌ನ್ನು ಮಾಡಿಲ್ಲ. ಡಿಸ್‌ಇನ್‌ಫೆಕ್ಷನ್ ಮಾಡುವ ಒಂದು ಮನೆಗೆ 40 ರೂಪಾಯಿ ನಿಗದಿ ಮಾಡಿದ್ದೀರಿ. ಈ ಕಾರ್ಯಕ್ರಮವನ್ನು ಸ್ವಲ್ಪ ಶಿಫ್ಟ್‌ಮಾಡಿ, ಅಧಿಕಾರಿಗಳಿಗೆ ಕೊಡುವ ಕಾರು, ಬಂಗಲೆಗಳನ್ನು ಕಡಿಮೆ ಮಾಡಿ ಅದನ್ನು ಡೈವರ್ಟ್ ಮಾಡಿದ್ದರೆ ಈ ಕಾರ್ಯಕ್ರಮ ಸಫಲವಾಗುತ್ತಿತ್ತು. ನೀವು ಕೊಡುವ ಧಾರಣೆಯಲ್ಲಿ ಸೀಡ್ ಪ್ರೊಡೆಕ್ಷನ್ ಮಾಡಿ ಕೊಡುವುದಕ್ಕೆ ಯಾವ ರೈತರೂ ಒಪ್ಪುತ್ತಿಲ್ಲ. ಅದನ್ನೇನಾದರೂ ಸ್ವಲ್ಪ ಇನ್‌ಸೆಂಟಿವ್ಸ್ ಜಾಸ್ತಿ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಸೇರಿಸಿ ನೀವು ಉತ್ತರ ಕೊಡುವಾಗ ತಿಳಿಸಬೇಕು. ಇದು ಸರ್ಕಾರದ ದುಡ್ಡು ಅಲ್ಲ. ಏಕೆಂದರೆ ವಿಶ್ವಬ್ಯಾಂಕ್‌ನ ದುಡ್ಡು ಬೇಕಾದಷ್ಟು ನಮ್ಮ ಹತ್ತಿರ ಇದೆ.

ಡಾ. ಎನ್.ಬಿ. ನಂಜಪ್ಪ : ಈಗ ಅವರು ಹೇಳತಕ್ಕಂಥ ರೋಗದ ಕ್ರಿಮಿಗಳು ಏನಿವೆ, ಅದು ವೈರಸ್ ಇನ್‌ಫೆಕ್ಷನ್ನೋ ಅಥವಾ ಬ್ಯಾಕ್ಟೀರಿಯಾ ಎನ್ನುವುದು ಕ್ಲಾರಿಫೈ ಆಗಿಲ್ಲ. will you please tell me.

ಶ್ರೀ ಸಿ. ಬೈರೇಗೌಡ : ಅದು ಪ್ರೊಟೋಜೋವಾ.

ಶ್ರೀ ವಿ. ಮುನಿಯಪ್ಪ : ಈಗ ಹಿರಿಯರಾದಂಥ ಶ್ರೀ ಹುಚ್ಚಮಾಸ್ತಿಗೌಡರು, ಬೈರೇಗೌಡರು ಏನು ಹೇಳಿದ್ದಾರೆ, ಅದರ ಬಗ್ಗೆ ಈ ಕಾರ್ಯಕ್ರಮವನ್ನು ಸ್ವಲ್ಪ ಶೀಘ್ರವಾಗಿ ತಂದುಕೊಳ್ಳುವ ದಿಸೆಯಲ್ಲಿ ಯೋಚನೆ ಮಾಡಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಮಾಡಿ ಇದಕ್ಕ...

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಸುಧೀರ್ಘವಾಗಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಈಗ ಈ ಸಮಸ್ಯೆ ಬಹಳ ದೀರ್ಘವಾಗಿದೆ ಮತ್ತು ಸುಮಾರು ಲಕ್ಷಜನ ರೈತರು ಇದರ ಮೇಲೆ ಅವಲಂಬಿಸಿಕೊಂಡಿದ್ದಾರೆ, ಅವರು ಸಾಯುತ್ತಿದ್ದಾರೆ ಎಂಬುದು ತಮಗೆ ಗೊತ್ತಿದೆ. ಬೆಳೆ ಹಾಳಾಗಿ ಹೋಗಿದೆ ಎನ್ನುವುದು ಸಹಿತ ತಮಗೆ ಗೊತ್ತಿದೆ. ಇದನ್ನು ಡಿಸ್‌ಇನ್‌ಫೆಕ್ಷನ್ ಮಾಡುವುದಕ್ಕೆ ಮತ್ತೇ ಸೀಡೀ ಏರಿಯಾದಲ್ಲಿ ನೀವು ಕಾರ್ಯಕ್ರಮ ತೆಗೆದುಕೊಂಡು ಒಳ್ಳೆಯ ಬಿತ್ತನೆ ಬೀಜ ಕೊಡಬೇಕು. ಅದಕ್ಕೆ ನಬಾರ್ಡ್‌ಗೆ ಕಳಿಸಿ 13 ಕೋಟಿ ಸಾಲ ತಂದು ಮಾಡುತ್ತೇವೆ, ಎಂದು ತಾವು ಹೇಳುತ್ತಿದ್ದೀರಿ. ಈಗ ಮಾನ್ಯ ಹುಚ್ಚಮಾಸ್ತಿಗೌಡರು, ಬೈರೇಗೌಡರು ಮತ್ತು ಮಾಧುಸ್ವಾಮಿಯವರು ಸಲಹೆಗಳನ್ನು ಕೊಟ್ಟಮೇಲೆ ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಇದಕ್ಕೆ ಹೆಚ್ಚಿಗೆ ಹಣ ತೆಗೆದುಕೊಳ್ಳಲಿಕ್ಕೆ ಎಂದು ಹೇಳಿದರೆ, ನಾನು ನಿಮಗಲ್ಲ, ಈ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಏನಾದರೂ ಕಳಕಳಿ ಇದೆಯಾ? ಆರು ತಿಂಗಳಿಂದ ಇದುವರೆಗೆ ಏನು ಮಾಡಿದ್ದೀರಿ? ನೀವು ಮಾಡಿರತಕ್ಕಂಥ ಕಾರ್ಯಕ್ರಮ ಏನು? ಅದನ್ನು ನೀವು ಹೇಳಿ. ಸಾಲ ತರುತ್ತೇನೆ, ಮಾಡುತ್ತೇನೆ ಎಂದು ಹೇಳಿದರೆ, ಈ ಮೂರು ವರ್ಷ ಮುಗಿಯುವ ಹೊತ್ತಿಗೆ ನಿಮಗೇ ಗೊತ್ತಿದೆ, ನಿಮ್ಮ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ ಮತ್ತು ನಿಮ್ಮ ಮಾರುಕಟ್ಟೆಗಳನ್ನೆಲ್ಲಾ ನಿಲ್ಲಿಸಬೇಕಾಗುತ್ತದೆ. ನಿಮ್ಮ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಕ್ಕೆ ಅಲ್ಲಿ

ಯಾವನೂ ಬರುವುದಿಲ್ಲ, ಒಂದು ನೊಣವು ಬರುವುದಿಲ್ಲ. ಮೂರು ವರ್ಷಗಳಲ್ಲಿ ಮಾಡುತ್ತೇನೆ ಎಂದರೆ ಬೆಳೆ ಅಲ್ಲಿ ಉಳಿಯುತ್ತದೆ?

ಇನ್ನು ಆರು ತಿಂಗಳಲ್ಲಿ ಇದನ್ನು ನಿಲ್ಲಿಸದೇ ಹೋದರೆ, ಯಾರು ಮೊಟ್ಟೆ ಇಡುವುದಕ್ಕೂ ಸಹಿತ ಹೋಗುವುದಿಲ್ಲ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಏನು ಸಮಸ್ಯೆ ಬಂದಿದೆ, ಅದನ್ನು ಯಾವ ರೀತಿಯಿಂದಲಾದರೂ ಎಕ್ಸ್‌ಪ್ಯಾಂಡ್ ಮಾಡಿ ಮಾತನಾಡುವುದಕ್ಕೆ ಅವಕಾಶ ಇದೆ. ಅದನ್ನು ನಿರಾಕರಿಸುವುದಿಲ್ಲ ನಾನು ಒಂದು ವಿಚಾರ ಮಾತ್ರ ಹೇಳುತ್ತೇನೆ. ಬಹುಶಃ ಈ ರೋಗ ಬಹಳ ಕಾಲದಿಂದ ಇದೆ, ಅದನ್ನು ತಡೆಗಟ್ಟುವ ವಿಷಯದಲ್ಲಿ ಬಹಳ ಕಾಲದಿಂದಲೂ ಯೋಜನೆಗಳನ್ನು ಹಾಕಿಕೊಂಡು ಬರಬೇಕಾಗಿತ್ತು. ಅದು ಆಗಲಿಲ್ಲ ಎಂಬ ಮಾತನ್ನು ನಾನು ಆಗಲೇ ತಿಳಿಸಿದ್ದೇವೆ. ನೂರಾರು ವರ್ಷಗಳಿಂದ ಈ ರೋಗ ಇದೆ. ಅದರ ಬಗ್ಗೆ ಚರ್ಚೆ ಬೇಡ, ನಾನು ಆಗಲೇ ಹೇಳಿದ್ದೇನೆ. ಈ ದಿಸೆಯಲ್ಲಿ ಹಿಂದಿನ ಸರ್ಕಾರಗಳು ಚಿಂತನೆ ಮಾಡಲಿಲ್ಲ, ಎನ್ನತಕ್ಕ ಮಾತನ್ನು ಮುಕ್ತವಾಗಿ ಈ ಮಾತನ್ನು ಹೇಳಿದ್ದೇನೆ. ಅದರ ಬಗ್ಗೆ ಚರ್ಚೆ ದಯಮಾಡಿ ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಹತೋಟಿ ಮಾಡತಕ್ಕ ಕೆಲಸ ಮಾಡಬೇಕು, ಆದರೆ ಯಾರು ಮಾಡುತ್ತಾ ಇಲ್ಲ. ಕುಣಿಗಲ್ ಏರಿಯಾದಲ್ಲಿ ನೋಡಬೇಕಾಗಿತ್ತು. ಅಲ್ಲಿ ಟೆಂಪರೇಚರ್, 25 ಡಿಗ್ರಿ ಸೆಂಟಿಗ್ರೇಡ್‌ಗಿಂತ ಕಡಿಮೆ ಬಂದಿತ್ತು, ಎನ್ನುವ ಮಾತನ್ನು ಈ ದೇಶದಲ್ಲಿ ಯಾರೂ ಒಪ್ಪುವುದಕ್ಕಾಗುವುದಿಲ್ಲ. ನಿಮ್ಮವರು ಯಾರೂ ಅಲ್ಲಿ ಹೋಗಲಿಲ್ಲ. ನಾವು ತುಮಕೂರು ಜಿಲ್ಲೆಯಿಂದ ಬರುವವರು, ನಮಗೆ ಎಷ್ಟು ಮಳೆಯಾಗಿದೆ ಎಂಬುದು ಗೊತ್ತು, ನಾವು ಇಲ್ಲಿ ಸಬ್ಜೆಕ್ಟ್ ಕೂಡ ಕೊಟ್ಟಿದ್ದೇವೆ, ಬರ ಬಂದಿದೆ, ಚರ್ಚೆ ಮಾಡಿ ಎಂದು. ಕುಣಿಗಲ್‌ನಲ್ಲಿ ನೀವು ಹೇಳಿದಹಾಗೆ ಮಳೆ ಆಗಲೇ ಇಲ್ಲ. ಈ ರೋಗಗಳನ್ನು ಕಂಟ್ರೋಲ್ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಹೇಳಬೇಕು.

Dr N.B. NANJAPPA : Other than formalin and bleaching powder, is there any other medicine to destroy the protozoa from the origin? Protozoa means, it is only a parasite. It has to come from some source. Can it be possible to destroy the organism from where it actually come? ಪೂರ್ಣವಾಗಿ ಸರ್ವನಾಶ ಮಾಡುವುದಕ್ಕಾಗುತ್ತದೆಯೇ?

ಶ್ರೀ ವಿ. ಮುನಿಯಪ್ಪ : ಇದು ಸಾಧ್ಯವೇ ಇಲ್ಲದ ವಿಚಾರ ಎಂಬ ಮಾತನ್ನು ಆಗಲೇ ತಮಗೆ ಸಂಕ್ಷಿಪ್ತವಾಗಿ ಹೇಳಿದೆ.

ಶ್ರೀ ಸಿ. ಭೈರೇಗೌಡ : ಅದು ಆಗುವುದಿಲ್ಲ. Not only the silk worms, there are other worms also. It is in the nature. It is in the environment also. So, it cannot be totally eradicated.

ಶ್ರೀ ವಿ. ಮುನಿಯಪ್ಪ : ಇದನ್ನು ಹೆರಾಡಿಕೇಟ್ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಸಂಶೋಧನೆ ಪ್ರಕಾರ ಬಹಳ ಸೂಟಬಲ್ ಮೆಡಿಸಿನ್ ಎಂದರೆ, formaldehide ಆಮೇಲೆ ಬ್ಲೀಚಿಂಗ್ ಪೌಡರ್ ಮಾತ್ರ ಸದ್ಯಕ್ಕೆ ತಡೆಹಿಡಿಯತಕ್ಕ

ಕೆಲಸ. ನಮ್ಮ ಮನೆ ಮಠದಲ್ಲಿ, ಒಳಗಡೆ ಇರತಕ್ಕ ರೋಗವನ್ನು ತಡೆದುಕೊಂಡು, ನಾವು ಬೆಳೆ ತೆಗೆದುಕೊಳ್ಳಬೇಕು, ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ.

(ಪ್ರೇಕ್ಷಕರ ಗ್ಯಾಲರಿಯಿಂದ 3-4 ಜನ ಕರಪತ್ರಗಳನ್ನು ಎಸೆದು ಸರ್ಕಾರಕ್ಕೆ ಧಿಕ್ಕಾರ, ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ರೇಷ್ಮೆ ಉತ್ತರ ಸ್ವಲ್ಪ ನವಿರಾಗಿರುತ್ತದೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಸಿಂಧ್ಯಾಜಿಯವರು, ಮಾನ್ಯ ಹುಚ್ಚಮಾಸ್ತಿಗೌಡರು ಮತ್ತು ನಮ್ಮ ಮಾನ್ಯ ಬೈರೇಗೌಡರು ತಿಳಿಸಿದಹಾಗೆ ಬಹಳ ಅವಶ್ಯಕತೆ ಇದೆ, ಇಲ್ಲ ಎಂದು ಹೇಳತಕ್ಕಂಥ ಮಾತು ಬೇರೆ ಇಲ್ಲ. ಆದರೆ, ಈಗಾಗಲೇ ಒಂದು ಯೋಜನೆಯನ್ನು ನಿರೂಪಣೆ ಮಾಡಿ, ಮೂರು ವರ್ಷದ ಅವಧಿಗೆ ಕಳುಹಿಸಿಕೊಟ್ಟಿದ್ದೆವು. ಈಗ ಒಂದು ಕೋಟಿ ಇಪ್ಪತ್ತಾರು ಲಕ್ಷ ಏನು ಬಂದಿದೆ, ಅದಕ್ಕೆ ಸಬ್ಸಿಡಿ ಕೊಟ್ಟು, ಕ್ರಮ ಕೈಗೊಳ್ಳುತ್ತೇವೆ. ಮಾರ್ಚಿಯೊಳಗೆ ಈ ಕೆಲಸ ಕನ್‌ಸ್ಟ್ರಕ್ಷನ್ ಆಗಬೇಕು. ಏಕ್‌ದಮ್ ಹಣ ಕೊಟ್ಟುಕೊಂಡು ಮಾಡುವುದು ಇಲಾಖೆಗೆ ಬಹಳ ಕಷ್ಟವಾಗುತ್ತದೆ. ಮುಂದೆ ಬರತಕ್ಕ ಸಾಲಿನಲ್ಲಿ ಬಹಳ ಶೀಘ್ರಗತಿಯಲ್ಲಿ ಕ್ರಮಗಳನ್ನು ತೆಗೆದುಕೊಂಡು ಈ ಕೆಲಸಕ್ಕೆ ಹೆಚ್ಚಿನ ಸೌಲಭ್ಯ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ ಎಂಬ ಮಾತನ್ನು ಹೇಳಿ ಈ ರೋಗ ನಿವಾರಣೆ ಕಾರ್ಯಕ್ರಮ, ಇಲ್ಲಿರತಕ್ಕಂಥ ಫೆಬ್ರಿಸ್ ರೋಗ ಯಾವರೀತಿ ಬಂತು ಎನ್ನತಕ್ಕಂತಾದ್ದು, ಇದನ್ನು ನಿಯಂತ್ರಣ ಮಾಡುವುದಕ್ಕೆ ಇರತಕ್ಕ ಕಷ್ಟಗಳು ಏನೇನು ತಾಂತ್ರಿಕವಾದ ತೊಂದರೆಗಳೇನು ಈ ಎಲ್ಲಾ ವಿಚಾರಗಳನ್ನೂ ಸವಿಸ್ತಾರವಾಗಿ ನಾನು ನಿಮ್ಮ ಮುಂದೆ ಇಟ್ಟಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ರೇಷ್ಮೆ ಬೆಳೆ ನಷ್ಟವಾಗಿರತಕ್ಕಂಥ ಒಂದು ವಿಚಾರಕ್ಕೆ ಬಹುಶಃ ಫೆಬ್ರಿನ್ ರೋಗ ಒಂದೇ ಕಾರಣ ಎಂದು ಹೇಳುತ್ತಾರೆ. ಇದೊಂದು ಕಾರಣವಾದರೂ ಇತರ ಅನೇಕ ಕಾರಣಗಳೂ ಇವೆ. ಇವತ್ತು ಸಪ್ಪೆರೋಗ, ಹಾಲುರೋಗ ಇವು ಬಹಳ ಜಾಸ್ತಿಯಾಗಿವೆ. ಇವು ಒಂದು ರೀತಿ ಸಾಂಕ್ರಾಮಿಕವಾಗಿ ಹಬ್ಬುತ್ತಿವೆ. ಅದನ್ನು ತಡೆಗಟ್ಟುವ ದಿಸೆಯಲ್ಲಿ ಗ್ರೂಪ್ ಸಿಸ್ಟಮ್ ಏನಿದೆ ರೈತರ ಬ್ಯಾಚ್ ರಿಯರಿಂಗ್ ಸಿಸ್ಟಮ್ ಮಾಡಿ, ಹಳ್ಳಿಯಲ್ಲಿ ಸಾಮೂಹಿಕವಾಗಿ ಡಿಸ್‌ಇನ್‌ಫೆಕ್ಷನ್ ಕಾರ್ಯಕ್ರಮ ಹಾಕಿಕೊಂಡು, ಮನೆಗೆ, ಬೀದಿಗೆ ಮತ್ತು ತಿಪ್ಪೆಗೆ ಎಲ್ಲಾ ತೆಗೆದು ಚೆನ್ನಾಗಿ ಮಾಡುವ ಕೆಲಸಗಳನ್ನು ಮಾಡಲು ಬಹಳ ಪ್ರಯತ್ನ ಪಟ್ಟಿದ್ದೇವೆ. ಇದನ್ನೇ ಅಚ್ಚು ಹಾಕಿಸಿ ಮಾರ್ಕೆಟ್‌ಗಳಲ್ಲಿ ಬಿತ್ತನೆ ಕೂಠಿಗಳಲ್ಲಿ ರೈತರಿಗೆ ಕೊಟ್ಟು ಈ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಬೇಕು, ವೈಜ್ಞಾನಿಕವಾಗಿ ಈ ಪದ್ಧತಿಯಲ್ಲಿ ಹುಳು ಸಾಧ್ಯವಾದಷ್ಟು ಮಿಶ್ರತಳಿ ಪ್ರದೇಶದಲ್ಲಿ ಗುಂಪುಗುಂಪಾಗಿ ನೂರಾರು ಜನ ರೈತರು ರೇಷ್ಮೆ ಸಾಕಾಣಿಕೆ ಮಾಡುತ್ತಿದ್ದಾರೆ, ಅಂತಹ ಪ್ರದೇಶದಲ್ಲಿ ಇದನ್ನು ಅನುಸರಿಸಿದರೆ ಮಾತ್ರ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದೇವೆ. ಇತ್ತೀಚೆಗೆ ನಾನು ನೋಡಿದಂಥ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ ಬೈರೇಗೌಡರಿಗೆ ಇದು ಚೆನ್ನಾಗಿ ಗೊತ್ತಿದೆ. ರಾಜ್ಯದಲ್ಲಿ ಇಷ್ಟು ಹೆಚ್ಚಾಗಿ ಬೆಳೆ ಕಳೆದುಕೊಳ್ಳುತ್ತಿದ್ದರೂ, ಇವತ್ತು ಸಹ ನಮ್ಮ ಮಳ್ಳೂರು ಗ್ರಾಮದಲ್ಲಿ ರೈತರಲ್ಲಿರತಕ್ಕಂಥ ಒಗ್ಗಟ್ಟು, ಅವರಲ್ಲಿರತಕ್ಕಂಥ ಅವೇರ್‌ನೆಸ್‌ನಿಂದ ಅವರು ತಾವೇ ತಾವಾಗಿ ಮುಂದೆ ಬಂದು ಗಂಟು ರೋಗ ಇದ್ದರೂ ಕೂಡಾ ಗೂಡು ಕಟ್ಟಿಸುತ್ತಿದ್ದಾರೆ. ಎರಡನೇ ಹಂತ, ಮೂರನೇ ಹಂತದಲ್ಲಿ ರೋಗ ಬಂದರೂ ಸಹ ಗೂಡು ಕಟ್ಟಿಸಬಹುದು. ಆದರೆ ಅದರ ಗುಣಮಟ್ಟ ಕಡಿಮೆಯಾಗುತ್ತದೆ

ಅಷ್ಟೆ. ಆದರೂ ಇಂತಹ ಕೆಲಸ ಮಾಡಿ, ಸಾಹಸ ಮಾಡಿ, ಅಲ್ಲಿರತಕ್ಕಂಥ ರೈತರು ಬಹಳ ಜಾಗ್ರತೆಯಿಂದ ಒಳ್ಳೆಯ ಬೆಳೆ ತೆಗೆಯುತ್ತಿದ್ದಾರೆ. ಇವತ್ತು ಬೇರೆ ಗ್ರಾಮಗಳಿಗೆ ಹೋಲಿಕೆ ಮಾಡಿ ನೋಡಿದಾಗ ಈ ಗ್ರಾಮದಲ್ಲಿ ಪ್ರಗತಿದಾಯಕವಾದ, ಉತ್ತಮ ಬೆಳೆ ತೆಗೆಯುತ್ತಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಮನಗಂಡು ಹೊಸ ಪದ್ಧತಿಯನ್ನು ಜಾರಿಗೆ ಕೊಡುವ ದಿಸೆಯಲ್ಲಿ ರೈತರ ಸಹಕಾರ ಬಹಳ ಮುಖ್ಯವಾನಾನಾದರೂ ಅಧ್ಯಕ್ಷರ ಮುಖಾಂತರ ಇಲ್ಲಿರತಕ್ಕಂಥ ಎಲ್ಲಾ ರೈತ ಮುಖಂಡರನ್ನು ವಿಶೇಷವಾಗಿ ರೇಷ್ಮೆ ಬೆಳೆಗಾರರ ಮುಖಂಡರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ, ಈ ವಿಚಾರದಲ್ಲಿ ಕೂಲಂಕಷವಾಗಿ ವೈಜ್ಞಾನಿಕವಾಗಿ ಪರೀಕ್ಷೆ ಮಾಡಿಸುವ ಪದ್ಧತಿಯನ್ನು ಜಾರಿಗೆ ತಂದು, ಸಾಮೂಹಿಕವಾಗಿ ರೋಗ ನಿಯಂತ್ರಣ ಕಾರ್ಯಕ್ರಮವನ್ನು ತಂದು ಸದಾ ಕಾಲ ಇರತಕ್ಕಂಥ ಈ ಫೆಬ್ರಿನ್ ರೋಗವನ್ನು ತಡೆಗಟ್ಟುವ ಒಂದು ವ್ಯವಸ್ಥೆ ಮಾಡಿದರೆ ನಾವು ರೋಗವನ್ನು, ತಡೆದು ಒಳ್ಳೆಯ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಈ ಬೆಳೆ ಹೆಚ್ಚಿನ ಕಾಲ ನಮ್ಮ ರಾಜ್ಯದಲ್ಲಿ ಇರುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಬೃಹದಾಕಾರವಾದ ಈ ಸಮಸ್ಯೆಯ ಅರಿವು ಸರಕಾರಕ್ಕೆ ಇದೆ, ಎಲ್ಲಾ ರೈತರಿಗೆ ತೊಂದರೆ ಆಗಿದೆ ಎಂದು ಈ ಮನೆಯಲ್ಲಿರತಕ್ಕಂಥ ಎಲ್ಲಾ ಸದಸ್ಯರು ಆತಂಕ ವ್ಯಕ್ತಮಾಡಿರುತ್ತಾರೆ. ಇದಕ್ಕಾಗಿ ನಾನು ಬಹಳ ಸಂತೋಷ ಪಡುತ್ತೇನೆ. ಈ ದಿಸೆಯಲ್ಲಿ ನಾವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇದರ ಜೊತೆಯಲ್ಲಿ ವರ್ಗಾವರ್ಗಿಗಳನ್ನು ಮಾಡಿರುತ್ತಾರೆ. ಬಿತ್ತನೆ ಪ್ರದೇಶದಲ್ಲಿರತಕ್ಕಂಥವರನ್ನು ಯದ್ವಾತದ್ವಾ ವರ್ಗಾವಣೆ ಮಾಡಿದರು ಎಂದು ಯಾರು ಪರಿಣಿತರು ಇದ್ದರು ಅವರನ್ನು ತೆಗೆದರು, ಬೇರೆಯವರನ್ನು ಹಾಕಿದರು ಎಂಬ ಹಲವಾರು ಜನ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರಗಳ ಬಗ್ಗೆ ಸಂಕ್ಷಿಪ್ತವಾಗಿ ಒಂದೆರಡು ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಬಿತ್ತನೆ ವಲಯಕ್ಕೆ ಒಬ್ಬ ಜಂಟಿ ನಿರ್ದೇಶಕರು, ಒಬ್ಬ ಉಪ ನಿರ್ದೇಶಕರು, ನಾಲ್ಕು ಜನ ಸಹಾಯಕ ನಿರ್ದೇಶಕರನ್ನು ನೇಮಿಸಲಾಗಿದೆ. ಈ ಹಿಂದೆ ಈ ಪ್ರದೇಶದಲ್ಲಿ ಒಬ್ಬರೇ ಒಬ್ಬರು ಸಹಾಯಕ ನಿರ್ದೇಶಕರು ಇದ್ದರು. ಈಗ ನಾಲ್ಕು ಜನ ಸಹಾಯಕ ನಿರ್ದೇಶಕರು ಜೊತೆಯಲ್ಲಿದ್ದು ಪರಿಣಾಮಕಾರಿಯಾಗಿ ರೋಗ ನಿಯಂತ್ರಣ ಮಾಡಿ ಎಂದು ಇನ್ನೂ ಮೂರು ಜನ ಸಹಾಯಕ ನಿರ್ದೇಶಕರನ್ನು ನೇಮಿಸಲಾಗಿದೆ. ಬಿತ್ತನೆ ಪ್ರದೇಶದಲ್ಲಿ 9 ರೇಷ್ಮೆ ಕೃಷಿ ಕ್ಷೇತ್ರಗಳು, 12 ಗ್ರೈನೇಜ್‌ಗಳು ಮತ್ತು 69 ವಲಯಗಳನ್ನು ಸ್ಥಾಪಿಸಲಾಗಿದೆ. ವಿಶ್ವಬ್ಯಾಂಕ್ ಮೊದಲನೇ ಹಂತದಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿದರು. ಇದೆಲ್ಲಾ ಆದ ಮೇಲೆ ಎರಡನೇ ವಿಶ್ವಬ್ಯಾಂಕ್ ಕಾರ್ಯಕ್ರಮವನ್ನು ರೇಷ್ಮೆ ಕೃಷಿ ಯೋಜನೆಯಲ್ಲಿ ಮಾಡಿರುತ್ತೇವೆ. ಎರಡನೇ ಹಂತದಲ್ಲಿ ಇತ್ತೀಚೆಗೆ ನಾನು ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, 88-89ರ ಎರಡನೇ ಯೋಜನೆಯ ನಿರೂಪಣೆ ಮತ್ತು ಪ್ಲಾನ್ ಮಾಡಿ ಕಳುಹಿಸಿಕೊಟ್ಟಿದ್ದು ಅಪ್ರೂವಲ್ ಕೂಡ ತೆಗೆದುಕೊಂಡಿದ್ದಾರೆ. ಅದು ಇಂಪ್ಲಿಮೆಂಟ್ ಸ್ಟೇಜ್‌ಗೆ ಬಂದಿದೆ. ಆದರೆ ಮಧ್ಯದಲ್ಲಿ ಈ ಬಿತ್ತನೆ ಪ್ರದೇಶಕ್ಕೆ ಈ ಯೋಜನೆಯಲ್ಲಿಯೇ ನೀವು ಏನಾದರೂ ಹಣ ಒದಗಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್‌ಗೆ ಬಹಳ ತೊಂದರೆಯಾಗುತ್ತದೆ. ಅಲ್ಲಿರತಕ್ಕಂಥ ಗ್ರೈನೇಜ್‌ಳು ಈವತ್ತೂ ಬಾಡಿಗೆ ಬಿಲ್ಡಿಂಗ್‌ನಲ್ಲಿವೆ, ಅದಕ್ಕೆ ಮಿನಿಮಮ್ ಆಗಿ ಸೈಂಟಿಫಿಕ್ ಆಗಿ ಏನೇನು ಕಂಡೀಷನ್ ಇರಬೇಕೋ ಅದು ಇಲ್ಲ, ಅದುದರಿಂದ ನೀವು ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಹೇಳಿ ನಾನು ಸುಮಾರು 14 ಕೋಟಿ ರೂಪಾಯಿಗಳನ್ನು ಬಿತ್ತನೆ

ವಲಯಕ್ಕೆ ಮಾತ್ರ ಇಟ್ಟು ಕಾರ್ಯಕ್ರಮಹಾಕಿ, ಸರಕಾರಿ ಗ್ರೈನೇಜ್‌ಗಳನ್ನು ಕಟ್ಟಿಸಬೇಕೆಂದೂ, ಎರಡನೇ ಹಂತದಲ್ಲಿ ಏನು ಮಂಜೂರಾಗಿ ಬಂದಿದೆ, ಈ ಮಂಜೂರಾಗಿರತಕ್ಕಂಥ ಸ್ಕೀಮ್‌ನ್ನು ಡೈವರ್ಟ್ ಮಾಡಿ, ಅಡಿಷನಲ್ ಸ್ಕೀಮ್ ಮಾಡಬೇಕೆಂದು, ಈ ಹಣವನ್ನು ವಿಶೇಷವಾಗಿ ಬಿತ್ತನೆ ಪ್ರದೇಶಕ್ಕೆ ಕೊಡಬೇಕೆಂದು ಹೇಳಿ ನಾವು ಒಂದು ಯೋಜನೆ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಅದು ಅತೀ ಶೀಘ್ರದಲ್ಲಿ ಮಂಜೂರಾಗಿ ಬರುತ್ತದೆ. ಇದು ಬಿತ್ತನೆ ವಲಯಕ್ಕೆ ಮಾತ್ರ. ವಿಶ್ವಬ್ಯಾಂಕ್ ಎರಡನೇ ಯೋಜನೆ ಹಂತದಲ್ಲಿ ಈ ಪ್ರದೇಶದಲ್ಲಿ ಇನ್ನೂ 12 ಗ್ರೈನೇಜುಗಳನ್ನು, 20 ಚಾಕಿ ಕೇಂದ್ರಗಳನ್ನು ಮೂರು ಮಾರುಕಟ್ಟೆಗಳ ಅಭಿವೃದ್ಧಿ ಮತ್ತು 7ರೇಷ್ಮೆ ಕೃಷಿ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಎರಡನೆಯ ಯೋಜನೆಯಲ್ಲಿ ನಾವು ಅಡಿಷನಲ್ ಸ್ಕೀಮ್ ಆಗಿ ನಾವು ಡೈವರ್ಟ್ ಮಾಡಿದ್ದೇವೆ. ಆಮೇಲೆ ವಿಶೇಷವಾಗಿ ಮಾನ್ಯ ಸದಸ್ಯರಾದ ಭೈರೇಗೌಡರು ಒಂದು ನಿರ್ದಿಷ್ಟವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಹೇಳಿದ ಹಾಗೆ ಸಂತೆಮಾವತ್ತೂರು ನಲ್ಲಿ 8 ಲಾಟ್‌ನಲ್ಲಿ 7 ಲಾಟ್‌ಗಳನ್ನು ಹುಲಿಯೂರು ದುರ್ಗದಲ್ಲಿ 82 ಲಾಟ್‌ನಲ್ಲಿ 62 ಲಾಟ್‌ಗಳನ್ನು ಬಿತ್ತನೆಗೆ ಯೋಗ್ಯ ಅಲ್ಲ ಅಂತ ಹೇಳಿ ನೂಲು ಬಿಚ್ಚಲಿಕ್ಕೆ ಕೊಡಲಾಗಿದೆ. ಅದು ನಿಜ, ಇದು ಒಂದು ಪರ್ಸೆಂಟ್ ಅಲ್ಲ ಪಾಯಿಂಟ್ 5 ಪರ್ಸೆಂಟ್, ಅಲ್ಲಿ ಸ್ವಲ್ಪ ಪರ್ಸೆಂಟ್ ಕಂಡರೂ ಸಹ ಕೊಡಬೇಕೆಂದು ನಾವು ತೀರ್ಮಾನವನ್ನು ಕಟ್ಟುನಿಟ್ಟಾಗಿ ಆದೇಶ ಕೊಟ್ಟಿದ್ದೇವೆ. ಅದರ ಪ್ರಕಾರ ಇದರಲ್ಲಿ ಸ್ವಲ್ಪ ನಿರ್ಲಕ್ಷ್ಯ ಆಗುತ್ತಿತ್ತು ಏನು ಬಿತ್ತನೆ ಗೂಡಿನಲ್ಲಿ ಒಂದು ಒತ್ತಡ ಇದ್ದಂತಹ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ರೋಗ ಇದ್ದರೂ ನಿರ್ಲಕ್ಷ್ಯ ಮಾಡಿ ಆ ಬಿತ್ತನೆಗೆ ಕೊಟ್ಟುಬಿಡುತ್ತಿದ್ದರು, ನಾವು ಬಹಳ ಕಟ್ಟುನಿಟ್ಟಾಗಿ ಕೆಲವು ನಿಯಮಗಳನ್ನು ಇಂಪೋಸ್ ಮಾಡಿರುವುದರಿಂದ ಬಹಳ ಅನುಕೂಲವಾಗಿದೆ. ಇದೇ ಸಂದರ್ಭದಲ್ಲಿ ತಾವು ಮೊಟ್ಟೆಗಳನ್ನು ಚಡ್ಲಪುರ ಮಾದರಿ ಬಿತ್ತನೆ ಕೋಠಿಯಲ್ಲಿ 81 ಸಾವಿರ ಮೊಟ್ಟೆಯನ್ನು ಸುಡಲಾಗಿದೆ ಎನ್ನತಕ್ಕಂಥ ಒಂದು ಮಾತನ್ನು ಪ್ರಸ್ತಾಪ ಮಾಡಿದ್ದೀರಿ. ಅದರ ವಿಚಾರದಲ್ಲಿ ನೀವು ನೂರಕ್ಕೆ ನೂರರಷ್ಟು ಚೆಕ್ ಮಾಡಿ ಗೂಡು ತಂದು ಮೊಟ್ಟೆ ಮಾಡಿಸಲಿಲ್ಲ, ಮೊಟ್ಟೆ ಮಾಡುವುದಕ್ಕಿಂತ ಮುಂಚೆ ಈ ಕೆಲಸವನ್ನು ಎತಕ್ಕೆ ಮಾಡಲಿಲ್ಲ ಎನ್ನತಕ್ಕಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. 81 ಸಾವಿರ ಮೊಟ್ಟೆ ನೀವು ಸುಟ್ಟಿದ್ದೀರಿ ಇದು ಯಾರಿಗೆ ನಷ್ಟ? ಯಾರ ಹಣ ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ಮಾಡಿದಿರಿ. ಈಗ ಮೂಲ ತಳಿ ಲರತಕ್ಕಂಥದ್ದರಲ್ಲಿ ನೂರಕ್ಕೆ ನೂರರಷ್ಟು ಚೆಕ್ ಮಾಡಿ ನಾವು ಅಲ್ಲಿ ಬೆಳೆಯತಕ್ಕಂಥ ರೈತರಿಗೆ ನಾವು ಗೂಡನ್ನು ಕೊಡುತ್ತೇವೆ. ಪಿ-1 ಬೆಳೆಯತಕ್ಕ ರೈತರಿಗೆ ನಾವು ಗೂಡನ್ನು ಕೊಡುತ್ತೇವೆ. ಪಿ-1 ಬಂದಂತಹ ಗೂಡನ್ನು ನಾವು ನಮ್ಮ ಒಂದು ಕ್ರಾಸ್‌ಗೆ ತಂದು ಬೈವೂಲ್ಟೀನ್ ಜೊತೆ ಕ್ರಾಸ್ ಮಾಡಿ ಬೈ ಮಿಶ್ರತಳಿ ಮಾಡತಕ್ಕಂಥಾದ್ದು ಮೊಟ್ಟೆ ಮಾಡತಕ್ಕಾಂಥಾದ್ದು ಒಂದು ವ್ಯವಸ್ಥೆ ಇರತಕ್ಕಂಥಾದ್ದು. ಬಂದಂತಹ ಗೂಡು ಸೆಕೆಂಡರಿ ಕಂಟಾಮಿನೇಷನ್ ಆದರೆ, 4 ದಿನ 5 ದಿನ ರೈತನ ಮನೆಯಲ್ಲಿ ಕಂಟಾಮಿನೇಷನ್ ಆದರೆ ಅವನು ವರ್ಷ ಸ್ಟೇಜ್ ಮತ್ತು ಲಾರ್ವ ಸ್ಟೇಜ್‌ನಲ್ಲಿ ಚೆಕ್ ಮಾಡುತ್ತಾನೆ. ಪೀಪಾ ಸ್ಟೇಜ್‌ಗೆ ಬರುತ್ತದೆ ಅಲ್ಲಿ ಕೂಡ ಚೆಕ್ ಮಾಡುತ್ತಾನೆ. ಅಲ್ಲಿ ಚೆಕ್‌ಮಾಡಿದಾಗ ಅಲ್ಲಿ ಈ ರೋಗ ಇರುವುದಿಲ್ಲ. ಅಲ್ಲಿಂದ ರೋಗ ಅಮೀಬಾ ಸ್ಟೇಜ್‌ನಲ್ಲಿ ಇರುತ್ತದೆ.

ಅಲ್ಲಿ ಸೂಕ್ಷವಾಗಿ ರೋಗ ಇರತಕ್ಕಂಥಾದ್ದು, 5 ಸಾವಿರ ಲಕ್ಷದಲ್ಲಿ ಒಂದು ಸ್ಕೋರ್ ಕಾಣಿಸುವುದು ಎನ್ನತಕ್ಕಂಥ ಮಾತನ್ನು ನಾನು ಆಗಲೇ ಹೇಳಿದ್ದೇನೆ. ಈ ಒಂದು ಸ್ಟೇಜ್‌ನಲ್ಲಿ ಕಾಣಿಸದಿದ್ದಾಗ ಗೂಡನ್ನು ತರುತ್ತಾರೆ. ರ್‍ಯಾಂಡಮ್ ಆಗಿ ಬಹಳ ವೀಕಾಗಿರತಕ್ಕಂಥ ಅಥವಾ ಮೆಲ್ಟ್ ಆಗಿರತಕ್ಕಂಥ ಕುಕೂನ್, ವೀಕ್ ಆಗಿರತಕ್ಕಂಥ ಕುಕೂನ್ ಸ್ಯಾಂಪಲ್ಸ್ ಒಂದಷ್ಟು ತಂದು ರ್‍ಯಾಂಮ್ ಆಗಿ ಚೆಕ್ ಮಾಡುತ್ತಾರೆ. ಉಳಿದಿದ್ದು ಕ್ವಾಂಟಿಟಿಯನ್ನು ನೂರರಷ್ಟು ಚೆಕ್ ಮಾಡಿದರೆ ಗೂಡೇ ಬರುವುದಿಲ್ಲ. ನಮಗೆ ದಯವಿಟ್ಟು ತಾವು ಹೇಳಿದ ರೀತಿಯಲ್ಲಿ ನೂರಕ್ಕೆ ನೂರರಷ್ಟು ಗೂಡನ್ನು ಪಿ-1ರಲ್ಲಿ ನೂರು ಪರ್ಸೆಂಟ್ ಚೆಕ್ ಮಾಡಲೂ ಕಾನೂನು ಇಲ್ಲ. ಕಾನೂನು ಇದೆ ಪಿ-2ಗೆ ನೂರಕ್ಕೆ ನೂರರಷ್ಟು ಆ ಕೆಲಸವನ್ನೇ ಮಾಡುತ್ತಿದ್ದೇವೆ. ಪಿ-2ನಲ್ಲಿ ನಾವು ಎಲ್ಲಿ ರೇಷ್ಮೆ ಬಿತ್ತನೆ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಗೂಡನ್ನು ಕೊಡುತ್ತೇವೆ ಅವರಿಗೆ ಕೊಡತಕ್ಕಂಥ ಮೊಟ್ಟೆ ಅವರಿಗೆ ಕೊಡತಕ್ಕಂಥ ಚಿಟ್ಟೆಯನ್ನು ನೂರಕ್ಕೆ ನೂರರಷ್ಟು ಚೆಕ್ ಮಾಡಿ ಕೊಡುವಂತಹ ಕೆಲಸ ಕಾನೂನಿನಲ್ಲಿದೆ. ಪಿ-2ನಲ್ಲಿ ಕೊಡಲಿಕ್ಕೆ ಇರತಕ್ಕಂಥಾದ್ದುರಲ್ಲಿ ರ್‍ಯಾಂಡಮ್ ಆಗಿ ಚೆಕ್ ಮಾಡುತ್ತಾರೆ. ವೀಕ್ ಇರತಕ್ಕಂಥ ಕುಕೂನ್ಸ್ ಕಲೆಕ್ಟ್ ಮಾಡಿ ನೋಡುತ್ತೇವೆ. ಅದರಲ್ಲಿ ಸಿಕ್ಕದೆ ಹೋದರೆ ಮೊಟ್ಟೆ ಮಾಡುತ್ತಾರೆ. ಚಿಟ್ಟೆ ಅವಸ್ಥೆಗೆ ಬರುವಷ್ಟರಲ್ಲಿ ಅಮೀಬಾ ಸ್ಟೇಜ್‌ನಲ್ಲಿ ಸೆಕೆಂಡರಿ ಕಂಟಾಮಿನೇಷನ್ ಆಗಿ ಅಷ್ಟು ಹೊತ್ತಿಗೆ 11-12 ದಿವಸ ಆಗಿ ಮೇಲೆ ಸ್ವಲ್ಪ ಮಟ್ಟಿಗೆ ಡವಲಪ್ ಆಗಿರುತ್ತದೆ ಅಲ್ಲಿ ಚೆಕ್ ಮಾಡಿದಾಗ ಸಿಕ್ಕಿದರೆ ಆಗ ಮೊಟ್ಟೆ ಸುಡತಕ್ಕಂಥ ಕೆಲಸಕ್ಕೆ ನಾವು ಕೈ ಹಾಕಿದ್ದೇವೆ. ಎಲ್ಲಿ ಸಿಕ್ಕದೆ ಹೋದರೂ ಚಿಟ್ಟೆಯಲ್ಲಿ ಸಿಕ್ಕುತ್ತದೆ. ಅಲ್ಲಿ ಚೆಕ್ ಮಾಡಿದಾಗ ಸಿಕ್ಕಿದರೆ ಆಗ ಆ ಮೊಟ್ಟೆಯನ್ನು ಸುಡುವ ಕೆಲಸಕ್ಕೆ ಕೈ ಹಾಕಿದ್ದೇವೆ. ಅಂತಹ ಮೊಟ್ಟೆಯನ್ನು ರೈತರಿಗೆ ಕೊಡಬಾರದು ಎನ್ನತಕ್ಕಂಥ ನಿರ್ದಿಷ್ಟ ನಿರ್ದೇಶನವನ್ನು ಕೊಟ್ಟಿದ್ದೇವೆ. ಅದಕ್ಕೋಸ್ಕರ ಮೊಟ್ಟೆಯನ್ನು ಸುಡುತ್ತೇವೆ. ಎಲ್ಲಾ ಕಡೆ ಸುಟ್ಟಿದ್ದಾರೆ. ರೋಗ ಕಂಡಾಗ ಸುಡಬೇಕು. ಎಂದು ನಿರ್ದಿಷ್ಟವಾದ ಆದೇಶ ನಾವು ಕೊಟ್ಟಿದ್ದೇವೆ. ಈ ರೋಗ ಬಹಳ ಬೃಹದಾಕಾರವಾಗಿ ಹರಡುತ್ತಿರುವುದರಿಂದ ಸಾಧ್ಯವಾದ ಮಟ್ಟಿಗೆ ಎಲ್ಲಾ ಹಂತಗಳಲ್ಲೂ ಕಂಟ್ರೋಲ್ ಮಾಡಬೇಕೆಂಬ ದಿಸೆಯಲ್ಲಿ ಆ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನು ಪ್ರೊ|| ನಂಜುಂಡಸ್ವಾಮಿಯವರು ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಅವು ಒಳ್ಳೆಯ ಸಲಹೆಗಳು ಅವರು ಜುಯಾಲಜಿ ಪ್ರೊಫೆಸರ್ ಅವರು ಹೇಳಿದರು. ಒಂದು ಪರ್ಸೆಂಟ್ ಗಂಟು ರೋಗ ಇದ್ದರೂ.....

ಶ್ರೀ ಬಿ.ಎಸ್. ಯಂಕಾನಾಯಕ್ : ಮಾನ್ಯ ಸಚಿವರು ಮಾನ್ಯ ಭೈರೇಗೌಡರ ಕಡೆ ನೋಡಿ ಹೇಳುತ್ತಿದ್ದಾರೋ ಅಥವಾ ತಮ್ಮ ಕಡೆ ನೋಡಿ ಹೇಳುತ್ತಿದ್ದಾರೋ ಎಂಬುದನ್ನು ತಿಳಿಸಬೇಕು. ಅವರು ಮಾನ್ಯ ಬೈರೇಗೌಡ ಕಡೆ ಕೈ ತೋರಿಸಿ ಹೇಳುತ್ತಿದ್ದಾರೆ. ಏಕೆಂದರೆ ಅವರು ಯಾವಾಗ ಅಧ್ಯಕ್ಷರಾದರು ಎಂಬುದನ್ನು ತಿಳಿಸಬೇಕು. ಅವರ ಕಡೆ ಕೈ ತೋರಿಸುತ್ತಿದ್ದಾರೆ.

ನಿಮ್ಮ ಕಡೇ ಲಕ್ಷ್ಯವೇ ಇಲ್ಲ.

ಶ್ರೀ ವಿ. ಮುನಿಯಪ್ಪ : ಅವರು ಪ್ರಸ್ತಾಪ ಮಾಡಿದಂತಹ ಸದಸ್ಯರು. ಶೀಘ್ರವಾಗಿ ತೀಕ್ಷ್ಣವಾಗಿ ಟೀಕೆ ಮಾಡಿರತಕ್ಕಂಥ ಸದಸ್ಯರು. ಅವರಿಗೆ ಉತ್ತರ

ಕೊಡಬೇಕಾದರೂ ತಮ್ಮ ಮೂಖಾಂತರ ನಾವು ಉತ್ತರ ಕೊಡತಕ್ಕಂಥ ಪದ್ಧತಿ ಇದೆಯೇ ಹೊರತು ನಾನು ನೇರವಾಗಿ ಅವರಿಗೆ ಹೇಳುತ್ತಿಲ್ಲ.

ಶ್ರೀ ಬಿ.ಎಚ್. ಯಂಕಾನಾಯಕ್ : ಮಾನ್ಯ ಸಚಿವರು ನೇರವಾಗಿ ತಮ್ಮ ಕಡೆ ನೋಡಿ ಮಾತನಾಡಬೇಕು. ಅವರು ಮಾನ್ಯ ಭೈರೇಗೌಡರ ಕಡೆ ನೋಡಿ ಹೇಳುತ್ತಿದ್ದಾರೆ. ಅವರು ಯಾವಾಗ ಅಧ್ಯಕ್ಷರಾದರು ಎಂಬುದನ್ನು ತಿಳಿಸಬೇಕು.

ಛೇರ್ಮನ್ : ತಾವು ಹೇಳುವುದು ಸರಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಪ್ರೊ|| ನಂಜುಂಡಸ್ವಾಮಿಯವರು ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಈ ಒಂದು ಗಂಟು ರೋಗ ಶೇಕಡ ಒಂದು ಪರ್ಸೆಂಟ್ ಬಂದರೂ ಸಹ ಇದನ್ನು ಮೊಟ್ಟೆಗೆ ಕೊಡಬಾರದು ಎಂಬ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಬಹಳ ಸೂಕ್ತವಾದದ್ದು. ಅದಕ್ಕೆ ಇಲಾಖೆಯವರೂ ಸಹ ಶೇಕಡ 0.5 ಪರ್ಸೆಂಟ್ ಇದ್ದರೂ ಸಹ ಕೊಡಬಾರದು ಎಂದು ಸೈಂಟಿಸ್ಟ್‌ಗಳು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಮಿನಿಮಮ್ 0.5 ಪರ್ಸೆಂಟ್ ಒಳಗಡೆ ಇದ್ದರೆ ಮಾತ್ರ ಕೊಡಬಹುದು. ಅದರ ಮೇಲೆ ಬಂದರೆ ಕೊಡಬಾರದು ಎಂದು ಮಾಡಿದ್ದೇವೆ. ನಾವು 0.5 ಪರ್ಸೆಂಟ್ ಇದ್ದರೆ ಮಾತ್ರ ಮೊಟ್ಟೆ ವಿತರಣೆ ಮಾಡತಕ್ಕಂಥ ಕೆಲಸ ಮಾಡುತ್ತಿದ್ದೇವೆ, ಅದಕ್ಕಿಂತ ಜಾಸ್ತಿ ಇದ್ದರೆ ಖಂಡಿತವಾಗಿ ಮೊಟ್ಟೆ ವಿತರಣೆ ಮಾಡುತ್ತಿಲ್ಲ ಆಮೇಲೆ ನಾವು ಬಿತ್ತನೆ ವಲಯದಲ್ಲಿ ಮೊಟ್ಟೆ ಮಾಡಿರತಕ್ಕಂಥ ಸಂದರ್ಭದಲ್ಲಿ ಹೆಣ್ಣು ಚಿಟ್ಟೆ ಗಂಡು ಚಿಟ್ಟೆ ಬೇರೆ ಮಾಡತಕ್ಕಂಥ ಸಂದರ್ಭದಲ್ಲಿ ಗಂಡು ಚಿಟ್ಟೆಯನ್ನು ಎರಡೆರಡು ಭಾರಿ ಮೂರು ನಾಲ್ಕು ಭಾರಿ ಮಾಡುತ್ತಿದ್ದಾರೆಂಬ ಮಾತನ್ನು ಹೇಳಿದರು. ಅದು ಖಂಡಿತವಾಗಿ ಮಾಡುವುದಿಲ್ಲ. ನಾವು 2 ಭಾರಿ ಮಾತ್ರ ಕೊಡತಕ್ಕಂಥ ಕೆಲಸ ಮಾಡುತ್ತಿದ್ದೇವೆ.

1.25 ಪಿ.ಎಂ

ಮಾನ್ಯ ಭೈರೇಗೌಡರು ಕಳೆದ ವರ್ಷ ಗೂಡಿನ ಉತ್ಪನ್ನ ಕಡಿಮೆಯಾಗಿದೆಯೆಂದು ತಿಳಿಸಿದರು. 1991 ರಲ್ಲಿ ಉತ್ಪನ್ನವಾಗಿರತಕ್ಕಂಥ ಗೂಡು ಸುಮಾರು 59 ಸಾವಿರ ಟನ್. ಹಿಂದಿನ ವರ್ಷ ಉತ್ಪಾದನೆ ಆಗಿರತಕ್ಕಂಥಾದ್ದು 57 ಸಾವಿರದ 700 ಟನ್. ಈ ಹಿಂದಿನ ವರ್ಷ 89-90 ರಲ್ಲಿ ಬಂದಿರತಕ್ಕಂಥ ಗೂಡಿನ ಪ್ರಮಾಣ 48 ಸಾವಿರ 980 ಟನ್‌ಗಳು. ಆದ್ದರಿಂದ 91ರಲ್ಲಿ ಉತ್ಪನ್ನವಾದ ಗೂಡಿನ ಪ್ರಮಾಣ ಹಾಗೂ ಮಾರಾಟವಾದ ಗೂಡಿನ ಪ್ರಮಾಣ ಕಡಿಮೆಯಾಗಿಲ್ಲ. ಆಮೇಲೆ, ಇವರು ಹೇಳಿರತಕ್ಕಂಥ ಮತ್ತು ಇತ್ತೀಚಿನ ವರದಿ ಬಂದಿರತಕ್ಕಂಥ ಪ್ರಕಾರ ಇತ್ತೀಚಿನ ವರ್ಗಾವಣೆಗಳನ್ನು ಮಾಡಿರುವುದರಿಂದಲೇ ಈ ರೋಗ ಬಂತು ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಮುನಿಯಪ್ಪನವರು ಬಂದು ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದರಿಂದ ಫೆಬ್ರಿನ್ ರೋಗ ಬಂದುಬಿಡ್ತು ಎಂದು ಕೆಲವರು ಹೇಳಿದರು. ನಾನು ಈ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಅಲ್ಲಿ ಇದ್ದಂಥ ಅಧಿಕಾರಿಗಳು ಯಾರು ಯಾರು ಎಷ್ಟೆಷ್ಟು ದಿವಸ ಕೆಲಸ ಮಾಡಿದರು ಎಂಬುದನ್ನು ಹೇಳುತ್ತೇನೆ. ಒಬ್ಬ ಜಂಟಿ ನಿರ್ದೇಶಕರು ಇದ್ದರು. ಮೂರು ಜಿಲ್ಲೆ ಅವರಿಗೆ ಬರುತ್ತಿತ್ತು. ನಾನು ಹೋದಾಗ, ಬೆಳಗಾಂನಿಂದ ಇಲ್ಲಿಯವರೆಗೂ ಜಂಟಿ ನಿರ್ದೇಶಕರನ್ನು ಹಾಕಿ ಬಿತ್ತನೆ ವಲಯವನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಇದೆಯಾ ಎಂದು ತಕ್ಷಣ ಹೇಳಿ ಅವರನ್ನು ಕೇವಲ ಹಾಸನ ಜಿಲ್ಲೆಗೆ ಮಾತ್ರ ಹಾಕಲಾಯಿತು. ಈ ರೋಗ ಉಲ್ಬಣಗೊಂಡಾಗ ಬಹುಶಃ ನಾವು ಮೇ ತಿಂಗಳಲ್ಲಿ

ಎಲೆಕ್ಷನ್ ಆದ ಮೇಲೆ ನಾವು ವಿಚಾರಿಸಿದಾಗ ಇದು ತಿಳಿಯಿತು. ಅವರು ಆ ಕಡೆ ಹೋಗುತ್ತಾರೆ, ಈ ಕಡೆ ಹೋಗುತ್ತಾರೆ, ನಮ್ಮ ಒಂದು ಪ್ರದೇಶದಿಂದ ಎಲ್.ಎಸ್.ಪಿ.ಗಳು ನನಗೆ ದೂರು ಕೊಟ್ಟಾಗ, ನಾನು ಅವರಿಗೆ ತಕ್ಷಣ ನಿರ್ದೇಶನ ಕೊಟ್ಟೆ. ಜಂಟಿ ನಿರ್ದೇಶಕರು ಕೇವಲ ಎರಡೇ ತಾಲ್ಲೂಕುಗಳಲ್ಲಿ ಇದ್ದು ಬಿತ್ತನೆ ಪ್ರದೇಶದಲ್ಲಿ ಟೂರ್ ಮಾಡಿ ಪ್ರತಿಯೊಂದು ಹಳ್ಳಿಹಳ್ಳಿಗೂ ವಿಸಿಟ್ ಮಾಡಬೇಕು ಅನ್ನತಕ್ಕಂಥ ಒಂದು ಕೆಲಸಕ್ಕೆ ನಾನು ನಿರ್ದೇಶನ ಕೊಟ್ಟೆ. ಅಲ್ಲಿಗೆ ಬಂದಂಥ ಒಬ್ಬ ಜಂಟಿ ನಿದೇಶಕರು 11-6-90 ರಲ್ಲೇ ಬಂದರು. ನಾನು ಆ ನಿರ್ದೇಶಕರನ್ನು ಹಾಕಿದ್ದಲ್ಲ, ಚೇಂಜ್ ಕೂಡ ಮಾಡಿಲ್ಲ, ಇನ್ನೂ 161 ಜನ ಹೊಸ ಅಧಿಕಾರಿಗಳನ್ನು ಹಾಕಿದ್ದೇವೆ. ಈ ಎಲ್ಲಾ ವರ್ಗಾವಣೆಗಳನ್ನು ಬಿತ್ತನೆವಲಯದ ಹಿತದೃಷ್ಟಿಯಿಂದ ಹಾಕಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದಲ್ಲ ಅಥವಾ ರೋಗವನ್ನು ಬೆಳೆಸಬೇಕೆಂಬ ದೃಷ್ಟಿಯಿಂದಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಆ ಮೇಲೆ ಹಲವಾರು ಸದಸ್ಯರು ಈ ಬೆಳೆಯನ್ನು ಏಕೆ ವಿಮೆಗೆ ಒಳಪಡಿಸಬಾರದೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಈ ನಿಯಮ ಹಿಂದೆ ಇತ್ತು. ಬೈ-ಓಲ್ಟೇಜ್ ಹುಳ ಸಾಕಾಣಿಗೆ ಈ ನಿಯಮ ಇತ್ತು. ಈ ನಿಯಮದ ತಂದಂಥ ಸಂದರ್ಭದಲ್ಲಿ ಬೈ-ಓಲ್ಟೇನ್ ಬೆಳೆಗಾರರು ಏನು ಪ್ರೀಮಿಯಂ ಕೊಡುತ್ತಿದ್ದರೋ ಆ ಪ್ರೀಮಿಯಂಗಿಂತ ಅವರು ಪಡೆದುಕೊಳ್ಳತಕ್ಕಂಥ ದುಡ್ಡು ಇದೆಯಲ್ಲಾ ಅದ ಡಬಲ್ ಆಗಿಹೋಯಿತು. ಇನ್‌ಶೂರೆನ್ಸ್ ಕಂಪನಿಯವರು, ಇದು ಖಂಡಿತಾ ನಮಗೆ ವಯಬಲ್ ಅಲ್ಲ ಎಂದು ಹೇಳಿದರು. ಕೇವಲ 24 ದಿವಸದಲ್ಲಿ ಬೆಳೆ ಬರುತ್ತದೆ. ಇದು ಒಂದು ತಾಂತ್ರಿಕವಾದ ಬೆಳೆ. ನಾವು ಇನ್‌ಷೂರೆನ್ಸ್ ಕೊಡುವುದಕ್ಕೆ ಆಗುವುದಿಲ್ಲ ವೆಂಬ ಒಂದು ಒಪೀನಿಯನ್ ಕೊಟ್ಟಿದ್ದಾರೆ. ಇವತ್ತು ಎಲ್ಲಾ ಬೆಳೆಗಳಿಗೂ ವಿಮೆಯನ್ನು ಅಳವಡಿಸಬಾರದೆಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ ಮಂತ್ರಿಗಳ ಉತ್ತರ ಇನ್ನು ಎಷ್ಟು ಹೊತ್ತು ಆಗುತ್ತದೋ ನಮಗೆ ಗೊತ್ತಿಲ್ಲ. ಕೃಷಿ ಸಚಿವರು ಊಟಕ್ಕೆ ಕರೆದಿದ್ದರು. ಈಗ ನಮ್ಮ ನಮ್ಮ ಊಟದ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಬೇಕಾಗಿದೆ. ಈಗ ನಾವು ಒಂದೇ ಸಲ ಹೋಗುವುದು ನಾವು ಅಲ್ಲಿಗೆ ಹೋಗುವ ಹೊತ್ತಿಗೆ ಊಟವೂ ಇಲ್ಲ ನಮಗೆ ಇಲ್ಲಿ ಕೆಲಸವೂ ಇಲ್ಲದ ರೀತಿಯಾಗುತ್ತದೆ. ಮಂತ್ರಿಗಳು ಇನ್ನೂ ಎಷ್ಟು ಹೊತ್ತು ಎಂದು ಹೇಳಿದರೆ ಕುಳಿತುಕೊಳ್ಳಬಹುದು. ಇನ್ನೂ ಒಂದು ಗಂಟೆ ಬೇಕು ಅಂಥಾ ಹೇಳಿದರೆ ನಮಗೆ ಊಟಕ್ಕೆ ಸ್ವಲ್ಪ ಸಮಯ ಕೊಟ್ಟರೆ ಒಳ್ಳೆಯದು. ಇನ್ನೂ ತ್ತರ ಪ್ರಾರಂಭ ಆಗಲೇ ಇಲ್ಲ. ಮೂಲ ಸಮಸ್ಯೆಗಳ ಬಗ್ಗೆ ಇನ್ನೂ ಮುಟ್ಟಲೇ ಇಲ್ಲ.

ಶ್ರೀ ವಿ. ಮುನಿಯಪ್ಪ : ತಾವು ಅಪ್ಪಣೆ ಕೊಟ್ಟರೆ ಬೇಗ ಮುಗಿಸಿಬಿಡುತ್ತೇನೆ. ತಾವು ಪ್ರಸ್ತಾಪ ಮಾಡಿದ ಎಲ್ಲಾ ವಿಚಾರಗಳ ಬಗ್ಗೆ ಹಾಗೂ ನೀವು ಇದರ ಬಗ್ಗೆ ಗಲಾಟೆ ಮಾಡಿದ್ದರಿಂದ ಸವಿಸ್ತಾರವಾಗಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಯಾವುದನ್ನು ಕ್ಲಿಯರ್ ಮಾಡಿದ್ದೀರಿ?

ಶ್ರೀ ವಿ. ಮುನಿಯಪ್ಪ : ನಿಮ್ಮ ಮನಸ್ಸಿಗೆ ಆ ರೀತಿಯಾದರೆ ನಾನು ಏನು ಮಾಡಲಿಕ್ಕೆ ಆಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮಂತ್ರಿಗಳೇ ಗಂಟು ರೋಗದ ಗಂಟು ಬಿಡಿಸುವುದಕ್ಕಾಗಿ ಒಂದು ಸದನ ಸಮಿತಿ ಮಾಡಿ ಎಂದು ಹೇಳಿದ್ದೆವು. ಗಂಟು ರೋಗದ ಗಂಟು ಇದೆಯಲ್ಲಾ ಇದು ನಿಘಂಟಿಗಿಂಥಾ ದೊಡ್ಡದಾಗಿದೆ. ಅದಕ್ಕಾಗಿ ಅದನ್ನು ಬಿಡಿಸುವುದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ ಅದನ್ನು ಏನಾದರೂ ಹೇಳಿ. ಅದು ಬಿಟ್ಟು ಸುಮ್ಮನೆ ಉತ್ತರ ಹೇಳುತ್ತಾ ಹೋದರೆ ಏನು ಪ್ರಯೋಜನ?

ಶ್ರೀ ವಿ. ಮುನಿಯಪ್ಪ : ಸ್ವಾಮಿ ಈ ರೋಗವನ್ನು ತಡೆಗಟ್ಟುವ ದಿಸೆಯಲ್ಲಿ ನಾವು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮಿಶ್ರತಳಿ ಪ್ರದೇಶದಲ್ಲಿ ಈ ಫಾರ್ಮಲಿನ್ ದ್ರಾವಣವನ್ನು ನಾವು ಇಲಾಖಾವತಿಯಿಂದ ಮೊದಲು ಕೊಡುತ್ತಿರಲಿಲ್ಲ. ಈಗ ಇಲಾಖೆಯಿಂದ ಎಲ್ಲಾ ಗೂಡು ಮಾರ್ಕೆಟ್‌ಗಳಲ್ಲಿ ರೈತರಿಗೆ ಸಮಯಕ್ಕೆ ಸರಿಯಾಗಿ ಈ ಫಾರ್ಮಲಿನ್ ದ್ರಾವಣವನ್ನು ಕೊಟ್ಟು ರೋಗ ನಿಯಂತ್ರಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆಮೇಲೆ ಬಿತ್ತನೆ ವಲಯದಲ್ಲಿ ಚಂದ್ರಿಕೆಗಳ ಸ್ವಲ್ಪ ಕಷ್ಟವಿದೆ. ಇದರ ಚಂದ್ರಿಕೆ ಅವರು ತರುತ್ತಾರೆ. ಅವರದ್ದು ತರುತ್ತಾರೆ. ಕಂಟಾಮಿನೇಷನ್ ಆಗುವ ಕಷ್ಟಗಳಿರುವುದರಿಂದ ನಾವು ಇಲಾಖೆಯ ವತಿಯಿಂದ ಎಲ್ಲಾ ಕಡೆ ಒಂದೊಂದು ರೇಂಜೆಗ್ ಚಂದ್ರಿಕೆಗಳನ್ನೂ ಇಟ್ಟು ರೈತರಿಗೆ ಕೊಟ್ಟು ಅವರ ಮುಖಾಂತರ ಬಾಡಿಗೆಗೆ ಕೊಟ್ಟು ಅವರಿಗೆ ಸಮಯಕ್ಕೆ ಸರಿಯಾಗಿ ಒದಗಿಸಿ ಮತ್ತೆ ನಾವೇ ಡಿಸ್ ಇನ್‌ಫೆಕ್ಷನ್ ಮಾಡತಕ್ಕ ಕೆಲಸಕ್ಕೆ ನಾವು ಕೈಹಾಕಿದ್ದೇವೆ. ನಾನು ಎಲ್ಲಾ ವಿಚಾರದ ಬಗ್ಗೆ ವಿಶೇಷವಾಗಿ ಗಂಟುರೋಗದ ಬಗ್ಗೆ ಇರತಕ್ಕ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ ಚರ್ಚೆಗೆ ಗಂಟುರೋಗದ ಬಗ್ಗೆ ಒಂದು ಸದನ ಸಮಿತಿ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ವಿಚಾರ ಮಾಡುವುದಾದರೆ ನುರಾರು ವರ್ಷದಿಂದ ಇರತಕ್ಕ ರೋಗಕ್ಕೂ ಇಲ್ಲಿನ ಸದನ ಸಮಿತಿ ರಚನೆ ಮಾಡಿ ಇಲ್ಲಿ ನಾವು ಯಾರೂ ತಜ್ಞರು ಇಲ್ಲದೇ ಇರುವುದರಿಂದ ಸದನ ಸಮಿತಿ ರಚನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಈ ದಿಸೆಯಲ್ಲಿ ಕೆಲವು ವಿಚಾರ ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಗುಡ್ಡ ಅಗೆದು ಇಲಿ ಹಿಡಿದ ಎಂಬ ಗಾದೆ ಇದೆ ನಮ್ಮಲ್ಲಿ ಇವತ್ತು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಏನೂ ಇಲ್ಲ. ಉತ್ತರದಿಂದ ಸಮಸ್ಯೆ ಶೇಕಡಾ ಒಂದರಷ್ಟಾದರೂ ಕೂಡ ಬಗೆಹರಿಸತಕ್ಕ ಸಲಹೆ ಆಗಲೀ ಅಥವಾ ಕಾರ್ಯಕ್ರಮದ ಬಗ್ಗೆ ಆಗಲೇ ಏನೂ ಕೂಡ ಹೇಳಲಿಲ್ಲ. ಇವರು ಹೇಳಿರತಕ್ಕದ್ದು ಏನು ಇದೆ ಇದು ಬಾಲ್ಡ್ ಉತ್ತರ ಇದನ್ನು ಒಪ್ಪುವುದಕ್ಕೆ ತಯಾರು ಇಲ್ಲ. ಈಗ 129 ವಲಯಗಳನ್ನು ಮಾಡಿದ್ದೀರಿ ಎಂದು ಹೇಳಿದರು ಅಲ್ಲಿ ಕಾಗದದಲ್ಲಿ ಮಾಡಿದ್ದೀರಿ. ಅಧಿಕಾರಿಗಳು ಹೋಗಿದ್ದಾರಾ? ಅಲ್ಲಿಗೆ ಅಧೀಕಾರಿಗಳು ಎಲ್ಲರೂ ಕೂಡ ಹೋಗಿಲ್ಲ

ಶ್ರೀ ವಿ. ಮುನಿಯಪ್ಪ : ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾವು ವರ್ಗಾವರ್ಗಿ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೂ ಇದಕ್ಕೂ ಸಂಬಂಧ ಇದೆ ಎಂದು ಹೇಳಿದ್ದೇವೆ. ಹೌದು ಅದನ್ನು ಸಾಬೀತು ಮಾಡುತ್ತೇವೆ. ಕಾರಣ ಏನು ಎಂಬುದನ್ನು ಅವರೇ ಹೇಳಿದ್ದಾರೆ. ಇದು ಬಿತ್ತನೆ ವಲಯದಲ್ಲಿರತಕ್ಕ ಪ್ರತಿ ಒಂದು ಹಂತದಲ್ಲೂ ಕೂಡ ಕಣ್ಣಲ್ಲೇ ಕಣ್ಣಿಟ್ಟು ಹುಳುವನ್ನು ನೋಡಬೇಕಾಗುತ್ತದೆ. ಆ ಕೆಲಸ ಆಗಿಲ್ಲ. ಆ ಕೆಲಸ

ಆಗದೇ ಇರುವುದರಿಂದ ಈ ರೋಗ ಉಲ್ಬಣ ಆಗಿರತಕ್ಕದ್ದು. ಲೋಪ ಮಾಡಿದ್ದಾರೆ ಎಂದು ಅವರು ಕೂಡ ಹೇಳಿದ್ದಾರೆ. ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಕೆಲವು ಅಧಿಕಾರಿಗಳು ಲೋಪ ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಅವರುಗಳು ಮಾಡಿರತಕ್ಕ ಲೋಪದಿಂದ ಸುಮಾರು 100 ಕೋಟಿಗಿಂತಲೂ ಹೆಚ್ಚು ಹಣ ರೈತರಿಗೆ ನಷ್ಟ ಆಗಿದೆ. ಇವತ್ತಿನ ದಿವಸ ಇಷ್ಟು ನಷ್ಟ ಮಾಡಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ನಿವಾರಣೆಗೋಸ್ಕರವಾಗಿ ಮೂರು ವರ್ಷದ ಕಾರ್ಯಕ್ರಮ ಹಾಕಿದ್ದೀರಿ. ನಾನು ಹೇಳುತ್ತೇನೆ. ಮೂರು ವರ್ಷದ ಈ ಕಾರ್ಯಕ್ರಮ ಹಾಕಿ ಇದನ್ನು ನಿವಾರಣೆ ಮಾಡುತ್ತೇವೆ ಎಂದರೆ ಅಷ್ಟರೊಳಗೆ ಈ ಉಧ್ಯಮ ಇರುತ್ತದೆಯೇ? ಉದ್ಯಮ ನಿರ್ನಾಮ ಆದ ಮೇಲೆ ಇವರ ಕಾರ್ಯಕ್ರಮ ಏತಕ್ಕೆ ಬೇಕಾಗುತ್ತದೆ? ಇವತ್ತು ಪ್ರೈಸ್ ಸ್ಟೆಬಿಲೈಷೇಷನ್ ಫಂಡ್ ಇದೆ. ಅದರಲ್ಲಿ ಇದಕ್ಕೋಸ್ಕರ ಎಷ್ಟು ಹಣ ಕೊಟ್ಟಿದ್ದೀರಿ? ಈವತ್ತು ಉದ್ಯಮ ಸರ್ವನಾಶದ ಹಂತದಲ್ಲಿರತಕ್ಕ ಪರಿಸ್ಥಿತಿಯಲ್ಲಿದೆ ಇದು ಸರ್ಕಾರದಲ್ಲಿರತಕ್ಕ ಹಣ ಇವರ ಕೈಯಲ್ಲಿರತಕ್ಕ ಹಣ ಅದು ಯಾರದ್ದೂ ಅಲ್ಲ. ರೈತರಿಂದ ಬಂದಿರತಕ್ಕ ಹಣ ಅದು ಅಲ್ಲಿರತಕ್ಕ ರೈತರ ಉದ್ಯಮದ ಅಭಿವೃದ್ಧಿಗೆ ಉಪಯೋಗಿಸಬೇಕಾಗಿರತಕ್ಕದ್ದಕ್ಕೆ ಮೀಸಲಾಗಿಟ್ಟಿರತಕ್ಕ ಹಣ. ಆ ಹಣವನ್ನು ಇದಕ್ಕೋಸ್ಕರವಾಗಿ ಉಪಯೋಗಿಸಿ. ಎಷ್ಟು ಹಣ ಉಪಯೋಗಿಸಿದ್ದೀರಿ ಎಂದರೆ ಅದಕ್ಕೆ ಉತ್ತರ ಇಲ್ಲ. ಮೂರು ವರ್ಷದ ಕಾರ್ಯಕ್ರಮ ಹಾಕಿದ್ದೀರಿ. ಸುಮಾರು 11 ಕೋಟಿ ಅಥವಾ 13 ಕೋಟಿ ರೂಪಾಯಿ ಆಗುತ್ತದೆ. ಎಲ್ಲಾ ಆದ ಮೇಲೆ 11 ಕೋಟಿ ಅಲ್ಲ 111ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಏನು ಪ್ರಯೋಜನ ಆಗುತ್ತದೆ? ಇವತ್ತು ನಾವು ಹೇಳತಕ್ಕದ್ದು ತತ್‌ಕ್ಷಣ ತೆಗೆದುಕೊಳ್ಳಬೇಕಾಗಿರತಕ್ಕ ಕಾರ್ಯಕ್ರಮಗಳು ಇವೆ. ತತ್‌ಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಮಾಡಿದ್ದೀರಿ? ಇದಕ್ಕೆ ಕೂಡ ಏನೂ ಉತ್ತರ ಇಲ್ಲ. ನಾವು ಉದಾಹರಣೆ ಕೊಟ್ಟಿದ್ದೇವೆ. ಇಂತಿಂಥ ಕಡೆ ಬಿತ್ತನೆ ಪ್ರದೇಶದಲ್ಲಿ ಇಷ್ಟು ಲಾಟ್‌ನಲ್ಲಿ ಇಷ್ಟು ಬಿತ್ತನೆ ಹೋಗಿದೆ ಎನ್ನತಕ್ಕ ವಿಷಯವನ್ನು ಉದಾಹರಣೆ ಕೊಟ್ಟು ನಾನು ಹೇಳಿದ್ದೇವೆ. ಲೋಪ ಮಾಡಿರತಕ್ಕ ಅಧಿಕಾರಿಗಳು ಯಾರು? ಅವರ ಮೇಲೆ ಏನೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಬಿತ್ತನೆ ಪ್ರದೇಶದಲ್ಲಿ ಶೇಕಡಾ 90ರಷ್ಟು ನಷ್ಟ ಆಗಿರತಕ್ಕದ್ದು ಪ್ಯಾಬ್ರಿನ್ ಕಂಡು ಬಂದಿರತಕ್ಕ ಉದಾಹರಣೆಗಳು ಇದ್ದಾವೆ. ನಾನು ಹೇಳಿರತಕ್ಕದ್ದು ನಿಜ ಎಂದು ಮಂತ್ರಿಗಳು ಹೇಳಿದ್ದಾರೆ. ನಿಜ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಯಾರು ಅಧೀಕಾರಿಗಳು ಇಲ್ಲಿ ಇದಕ್ಕೆ ಕಾರಣಕರ್ತರು ಆಗಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕರ್ತವ್ಯ ಲೋಪ ಇದೆ ಎಂಬಂದನ್ನು ಅವರೇ ಒಪ್ಪಿದ್ದಾರೆ. ನಾವು ಅದನ್ನು ಹೇಳಬೇಕಾಗಿರತಕ್ಕದ್ದು ಅನಾವಶ್ಯಕ. ಆದರೂ ಕೂಡ ಇವತ್ತಿನ ದಿವಸ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ವರ್ಗಾವರ್ಗಿಯಿಂದ ಅಧಿಕಾರಿಗಳ ಲೋಪದಿಂದ ಇವತ್ತು ರೋಗ ಉಲ್ಬಣ ಆಗಿದೆ ಎನ್ನತಕ್ಕದ್ದು ಅವರ ಮೇಲೆ ನಮ್ಮ ಛಾರ್ಜ್ ಇದೆ. ಅದನ್ನು ಅವರೂ ಒಪ್ಪಿದ್ದಾರೆ. ಅದನ್ನು ಒಪ್ಪಿದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಏನು ಕ್ರಮ ತೆಗೆದುಕೊಂಡಿದ್ದೀರಿ? ಅದನ್ನು ಹೇಳಲಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ತತ್‌ಕ್ಷಣ ಮಾಡತಕ್ಕ ತೆಗೆದುಕ್ಕೊಂಡಿರತಕ್ಕ ಕ್ರಮ ಏನು? ಅದರ ಬಗ್ಗೆ ಕೂಡ ಉತ್ತರ ಹೇಳಲಿಲ್ಲ. ಇದರಲ್ಲಿ ಅನೇಕ ಲೋಪಗಳು ಇದ್ದಾವೆ. ಸರಿ ನಾವು ಎಲ್ಲದಕ್ಕೂ ಕೂಡ ನ್ಯಾಯಾಂಗ ತನಿಖೆ ಬೇಕು ಮತ್ತೊಂದು ಬೇಕು ಎಂದು

ಹೇಳತಕ್ಕದ್ದು ಅಲ್ಲ. ಆದರೆ ಇವತ್ತು ಅವಶ್ಯಕತೆ ಇದೆ. ಇಲ್ಲಿ ಯಾವ ಹಂತದಲ್ಲಿ ಕರ್ತವ್ಯ ಲೋಪವಾಗಿದೆ. ಇದು ಯಾರು ಎಂದು ಚರ್ಚೆ ಮಾಡವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ನಾವು ಇಲ್ಲಿ ಸದನದ ಸಮಿತಿ ರಚನೆ ಆಗಬೇಕು ಮತ್ತು ಈ ಉದ್ಯಮ ಇಲ್ಲಿ ಶಾಶ್ವತವಾಗಿ ಇರಬೇಕು ಎಂದು ಹೇಳುತ್ತೇವೆ. ಶಾಶ್ವತವಾಗಿ ಉದ್ಯಮ ಇರಬೇಕಾಗಿದ್ದರೆ ಅದಕ್ಕೆ ನಾವು ಕೂಡ ಇವತ್ತು ಸಲಹೆಗಳನ್ನು ಕೊಡಬೇಕಾಗಿರತಕ್ಕ ಅವಶ್ಯಕತೆ ಕೂಡ ಇದೆ. ಯಾರ್‍ಯಾರು ಲೋಪ ಮಾಡಿದ್ದಾರೆ ಎಲ್ಲೆಲ್ಲಿ ಮಾಡಿದ್ದಾರೆ. ಅದನ್ನು ತೋರಿಸಿಕೊಡತಕ್ಕ ಅವಶ್ಯಕತೆ ಇದೆ. ಮುಂದೆ ಆಗತಕ್ಕಂಥ ಕೆಲಸಕಾರ್ಯಗಳಿವೆ ಈ ಉದ್ಯಮದಲ್ಲಿ ಸಾರೋದ್ಧಾರವಾಗಿ ಮುನ್ನಡೆಸ ಬೇಕಾಗಿದೆ. ಮತ್ತು ಇವೊತ್ತು ಆಗಿರತಕ್ಕಂಥ ನಷ್ಟವನ್ನು ತೊರೆದು ಹಾಕುವುದಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬುದಕ್ಕಾಗಿ ಒಂದು ಸದನದ ಸಮಿತಿಯನ್ನು ಮಾಡಬೇಕು. ಅದರ ಮೂಲಕ ಅಧ್ಯಯನ ಮಾಡಿ ಒಂದು ವರಿದಿಯನ್ನು ತರಿಸಿಕೊಂಡರೆ ಸರಕಾರಕ್ಕೆ ಅದರಿಂದ ತುಂಬಾ ಉಪಯೋಗವಾಗುತ್ತದೆ. ಸರಕಾರದಲ್ಲಿರುವ ಲೋಪವನ್ನು ಕಂಡುಹಿಡಿಯುವುದು ಸಮಿತಿಯ ಉದ್ದೇಶ ಅಲ್ಲ. ಎಲ್ಲಿ ಇದನ್ನು ಮಾರ್ಪಾಡು ಮಾಡಬೇಕು, ಉತ್ತಮಗೊಳಿಸಬೇಕು......

ಛೇರ್ಮನ್ : ಇದನ್ನೆಲ್ಲಾ ತಾವುಗಳು ನಿನ್ನೆ ಹೇಳಿದ್ದೀರಿ.

ಶ್ರೀ ಸಿ. ಬೈರೇಗೌಡ : ವಿಶ್ವಬ್ಯಾಂಕ್‌ನ ಯೋಜನೆ ಇದ್ದು ಅದನ್ನು ಮಾಡಿಷ್ಟೆ ಮಾಡಬೇಕೆಂದು ಉದ್ದೇಶ ಇದೆ ಎಂದು ಸಚಿವರು ಹೇಳಿದ್ದಾರೆ. ಹಿಗೆ ಮಾಡಿಷ್ಟೆ ಮಾಡುವಂಥ ಉದ್ದೇಶ ಇರುವಾಗ ಬೇಕಾದರೆ ನಾವು ಒಂದಷ್ಟು ಜನರು ಆ ವಲಯದಿಂದ ಬಂದಿರತಕ್ಕಂಥವರು ಬಿತ್ತನೆ ಗೂಡು ಬಿತ್ತನೆ ಪ್ರದೇಶ ಮತ್ತು ಕ್ರಾಸ್‌ಬ್ರೀಡ್ ಬೆಳೆಯತಕ್ಕ ಪ್ರದೇಶಗಳಲ್ಲಿ ಇರತಕ್ಕಂಥವರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿದರೆ ಅವರು ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡುವಂಥ ಅವಶ್ಯಕತೆ ಇದೆ. ಭಿತ್ತನೆ ವಲಯದಲ್ಲಿರತಕ್ಕಂಥ ರೈತರಿಗೆ ಕೂಡ ಭಾರಿ ತೊಂದರೆಯಾಗಿದೆ ಎನ್ನುವುದನ್ನು ಕೂಡ ಅವರೂ ಒಪ್ಪಿಕೊಂಡಿದ್ದಾರೆ. ಆ ತೊಂದರೆಯನ್ನು ನಿವಾರಿಸ ಬೇಕಾದುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಸದನದ ಸಮಿತಿಯನ್ನು ಮಾಡುವ ಅವಶ್ಯಕತೆಯು ಇದೆ ಆದ್ದರಿಂದ ದಯಮಾಡಿ ಸದನದ ಸಮಿತಿಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು. ನಾವು ಸರಕಾರದ ಮೇಲೆ ಆರೋಪವನ್ನು ಹೊರಿಸಬೇಕು. ಅಥವಾ ಕುಂದುಕೊರತೆಗಳನ್ನು ಮಾತ್ರ ಹೇಳಬೇಕೆಂಬ ಇಚ್ಛೆಯುಳ್ಳವರಲ್ಲ. ನಾವು ಸೂಕ್ತವಾದಂಥ ಸಲಹೆಗಳನ್ನು ಕೊಟ್ಟರೆ ಅದನ್ನು ಉಪಯೋಗಿಸಿಕೊಂಡು ಆ ಜನರನ್ನು ರಕ್ಷಿಸಿತಕ್ಕಂಥ ಮತ್ತು ಆ ಉದ್ಯಮವನ್ನು ಉಳಿಸತಕ್ಕಂಥ ಒಂದು ಪ್ರಯತ್ನ ನಿಮ್ಮಿಂದ ಆಗಬೇಕಾಗಿದೆ. ದಯಮಾಡಿ ಮತ್ತೊಮ್ಮೆ ತಮ್ಮ ಮೂಲಕ ಸರಕಾರಕ್ಕೆ ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಈ ಕುರಿತು ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ನಾನು ಅವರು ತಿಳಿದುಕೊಂಡಿಲ್ಲ ಎಂದು ಹೇಳುವುದಿಲ್ಲ. ಅಥವಾ ಅವರು ಸಮರ್ಪಕವಾಗಿ ಉತ್ತರವನ್ನು ಕೊಟ್ಟಿಲ್ಲ ಎಂದು ಕೂಡ ಹೇಳುವುದಿಲ್ಲ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಸಮಸ್ಯೆ ತೀರಾ ಗಂಭೀರವಾಗಿದೆ ಆದಕಾರಣ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತಿದ್ದೇನೆ. ಏಕೆಂದರೆ ಸಚಿವರ ಕೈನಲ್ಲಿ ಆ

ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಒಂದು ಸದನಸಮಿತಿಯನ್ನು ಮಾಡುವುದರಿಂದ ಏನೋ ಹೊಸದಾಗಿ ಪತ್ತೆಯಾಗಿ ಬಿಡುತ್ತದೆ ಎಂದು ನಾನು ಹೇಳುವುದಿಲ್ಲ. ನೀವು ನಿನ್ನೆಯ ದಿವಸ ಬಿತ್ತನೆ ಬೀಜದ ಪ್ರದೇಶಕ್ಕೆ ಹೋಗಿದ್ದೀರಿ. ಆ ಸಂದರ್ಭದಲ್ಲಿ ರೈತರ ಜೊತೆಯಲ್ಲಿ ರೈತಮುಖಂಡರ ಜೊತೆಯಲ್ಲಿ ರಾಜಕೀಯ ಮುಖಂಡರುಗಳು ಜೊತೆಯಲ್ಲಿ ಮಾತನಾಡಿದ್ದೀರಿ. ಅದೇ ರೀತಿಯಲ್ಲಿ ನೀವು 5-10 ಜನ ಸರ್ಕಾರ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದರೆ ಆದರಿಂದ ನಿಮಗೆ ಉಪಯೋಗವಾಗುತ್ತದೆಯೇ ಹೊರತು ಬೇರೆ ಏನೂ ತೊಂದರೆಯೂ ಆಗುವುದಿಲ್ಲ. ನಾನು ಬಹಳ ಪ್ರಾಮಾಣಿಕವಾಗಿ ಮಾತನಾಡುತ್ತಿದ್ದೇನೆ. ಇದರಲ್ಲಿ ನಾವು ರಾಜಕೀಯವನ್ನು ಬೆರೆಸುತ್ತಾ ಇಲ್ಲ. ತಮಗೆ ಗೊತ್ತಿರುವ ಹಾಗೆ 50-60 ಲಕ್ಷ ಜನ ರೇಷ್ಮೆ ಬೆಳೆಗಾರರು they are at the verge of collapse. ಇನ್ನು ಆರು ತಿಂಗಳಲ್ಲಿ ನಾವು ಹಾಳಾಗಿ ಹೋಗಿ ಬಿಡುತ್ತೇವೆ. ನಮ್ಮ ಐದಾರು ಜಿಲ್ಲೆಗಳಲ್ಲಿ ನಮ್ಮ ಯಾವ ಹಳ್ಳಿಗಳಲ್ಲಿಯೂ ಎರಡು ಹೊತ್ತು ಊಟಕ್ಕೆ ಗತಿ ಇಲ್ಲದ ಒಂದು ಪರಿಸ್ಥಿತಿಯು ಬರುತ್ತವೆ. ಉದ್ಯಮವು ಸರ್ವನಾಶವಾಗುವ ಅಂಚಿನಲ್ಲಿದೆ. ಈ ಬಗ್ಗೆ ಯೋಜನೆಯನ್ನು ಮಾಡಿ 13 ಕೋಟಿ ರೂಪಾಯಿಗಳ ಸಾಲ ತೆಗೆದುಕೊಳ್ಳುವುದಕ್ಕೆ ಬರೆದು ಕಳುಹಿಸಿದ್ದಾರೆ. ನಬಾರ್ಡ್‌ನವರು ನಾವು ಸಾಲ ಕೊಡುತ್ತೇವೆ. ಈ ವರ್ಷ ನೀವು ಒಂದೂವರೆ ಕೋಟಿ ರೂಪಾಯಿಗಳನ್ನು ಆ ಬಗ್ಗೆ ಖರ್ಚು ಮಾಡಿ ಎಂದು ಹೇಳಿದ್ದಾಜಣ. ಅದಕ್ಕೆ ಮಾನ್ಯ ಮಂತ್ರಿಗಳು ಮತ್ತು ಅಧಿಕಾರಿಗಳು ಮೂರು ವರ್ಷಗಳಲ್ಲಿ ಆದಷ್ಟು ಡಿಸ್‌ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಅಲ್ಲಿ ಇರುವ ಸಮಸ್ಯೆಯನ್ನು ಕಂಟ್ರೋಲ್ ಮಾಡುವುದಕ್ಕೆ ಮತ್ತು ಸಬ್ಸಿಡಿ ಕೊಡುವುದಕ್ಕೆ ನಾವು ಹಣ ಕೊಡುತ್ತೇವೆ ನಮ್ಮಲ್ಲಿ ಹಣದ ಕೊರತೆ ಇದೆ ಎಂದು ಹೇಳಿದ್ದಾರೆ. ರೇಷ್ಮೆ ಬೆಳೆಗಾರರ ಪರವಾಗಿ ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ ದಯವಿಟ್ಟು ಈ ವರ್ಷ ಏನಾದರೂ ಮಾಡಿ ಈ ಬಾಬಿಗೆ ಐದಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇನ್ನು ಮೂರು ನಾಲ್ಕು ತಿಂಗಳಲ್ಲಿ ರೋಗದ ನಿಯಂತ್ರಣ ಆಗದೆಹೋದರೆ ತಮಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಹೆಚ್ಚಿಗೆ ಹಣವನ್ನು ದಯಮಾಡಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ಬೇಗ ಈ ರೋಗವನ್ನು ನಿವಾರಣೆ ಮಾಡದಿದ್ದರೆ ಇನ್ನು ಮೂರು ವರ್ಷಗಳಲ್ಲಿ ಆ ಉದ್ಯಮವೇ ಹೊರಟು ಹೋಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಅವರೇ ನೋಡಿ ತಿಳಿದುಕೊಂಡು ಬಂದು ಹೇಳಿದ್ದಾರೆ. ಈ ಉದ್ಯಮವು ಹಾಳಾದರೆ ಎಷ್ಟು ಲಕ್ಷ ಕುಟುಂಬಗಳು ಜೀವನ ಮಾಡುವುದಕ್ಕೆ ಸಾಧ್ಯವಾಗದೇ ಹಾಳಾಗುತ್ತವೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಅವರ ಮನಸ್ಸಿಗೆ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ವಿಶ್ವ ಯೋಜನೆಯಡಿಯಲ್ಲಿ ಈ ಕೈಗಾರಿಕೆಗಳನ್ನು ಬೆಳೆಸಬೇಕೆಂಬ ಒಂದು ದೊಡ್ಡ ಆಸೆಯನ್ನು ಇಟ್ಟುಕೊಂಡಿರುವುದರಿಂದ ಇದೊಂದು ಮನೆ ಮನೆಗೂ ಇರತಕ್ಕಂಥ ಗೃಹಕೈಗಾರಿಕೆ ಆಗಿರುವುದರಿಂದ ಇದನ್ನು ಉಳಿಸಿಕೊಳ್ಳುವುದಕ್ಕೆ ಈ ಕೂಡಲೇ ಹಣ ಕೊಡಬೇಕು ಈಗ ಕೊಟ್ಟಿರತಕ್ಕಂಥ ಒಂದು ಕೋಟಿ ಹಣ ಸಾಕಾಗುವುದಿಲ್ಲ. 10-15 ಕೋಟಿ ರೂಪಾಯಿಗಳನ್ನು ತ್ವರಿತವಾಗಿ ಒದಗಿಸಿ ಮೂರು ವರ್ಷದೊಳಗಾಗಿ ನಿಗದಿತ ಸಮಯದಲ್ಲಿ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಅದಕ್ಕೆ ಈ ವರ್ಷವೇ ಇನ್ನೂ ಮೂರು ನಾಲ್ಕು ಕೋಟಿ ಆದರೂ ಖರ್ಚು ಮಾಡಬೇಕು. ಈಗಿನ 11 ಕೋಟಿ ಜೊತೆಗೆ

ಇನ್ನೂ 10 ಕೋಟಿ ಆದರೂ ಕೊಟ್ಟು ಈ ಉದ್ಯಮವನ್ನು ಪೂರ್ತಿ ಉಳಿಸಿ ಲಕ್ಷಾಂತರ ಮಂದಿ ಜೀವನೋಪಾಯಕ್ಕೆ ಮಾರ್ಗ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ನಾನು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ರೇಷ್ಮೆ ಸಚಿವರು ಉತ್ತರ ಕೊಡುವಾಗ ಸಮಗ್ರವಾಗಿ ಚಿಂತನೆ ಮಾಡಿದ್ದಾರೆ. ಅವರು ಚಿಂತಾನೆ ಮಾಡಿಲ್ಲ, ಗಮನಪರಿಸಿಲ್ಲ ಎಂದು ನಾನು ಹೇಳುವುದಿಲ್ಲ. ವಿಶಿಷ್ಟವಾಗಿ ಚಿಂತನೆ ಏನೋ ಮಾಡಿದ್ದಾರೆ ಆದರೆ ಪರಿಹಾರ ಏನು ಎಂಬುದು ದೊಡ್ಡಸಮಸ್ಯೆಯಾಗಿದೆ. ಈವತ್ತು ತಮಗೆ ಹೇಳುವುದಾದರೆ ಈ ಉದ್ಯಮದಲ್ಲಿ ಒಂದು ಕೋಟಿ ಜನ ಬದುಕುತ್ತಿದ್ದಾರೆ. ಕರ್ನಾಟಕದಲ್ಲಿ ಇದು ಸಮಾನ್ಯ ಉದ್ದಿಮೆಯಲ್ಲ. ಇವತ್ತಿನ ಪರಿಸ್ಥಿತಿ ಮುಂದುವರೆದರೆ ಇನ್ನು 6 ತಿಂಗಳಲ್ಲಿ ಈ ಉದ್ಯಮ ಕರ್ನಾಟಕದಲ್ಲಿ ನಾಶವಾಗುತ್ತದೆಂಬುದರಲ್ಲಿ ಏನೂ ಅನುಮಾನ ಇಲ್ಲ. ಮತ್ತೆ ನೀವು ಈ ಉದ್ಯಮವನ್ನು ಪ್ರತಿಷ್ಠಾಪನೆ ಮಾಡಬೇಕೆಂದರೆ ನಿಮ್ಮ ಕೈಲಿ ಸಾಧ್ಯವಿಲ್ಲ. ಆದ್ದರಿಂದ ಈಗಲೇ ಈ ಗಂಟುರೋಗವನ್ನು ತಡೆಯುವುದಕ್ಕೆ ಬೇಕಾದ ಹಣವನ್ನು ಸರ್ಕಾರ ಕೊಡಬೇಕು. ಕೇವಲ ಒಂದು ಕೋಟಿಯಿಂದ ಇದು ಸಾಧ್ಯವಾಗುವುದಿಲ್ಲ. ಹೆಚ್ಚಿನ ರೀತಿಯಲ್ಲಿ ಹಣ ಕೊಡಬೇಕು ಮತ್ತು ಈ ಸದನ ಸಮಿತಿಗೆ ನಾವು ಏಕೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆಂದರೆ ಅದರ ಮೂಲಕ ಸಚಿವರಿಗೆ ಮತ್ತು ಸರ್ಕಾರಕ್ಕೆ ಅಮೂಲ್ಯವಾದ ಸಲಹೆ ಕೊಡಲು ಅವಕಾಶವಾಗುತ್ತದೆ. ನಿಮ್ಮನ್ನು ಪೇಚಿಗೆ ಸಿಕ್ಕಿಸುವ ಸ್ಥಿತಿಗೂ ನಾವು ಹೋಗುವುದಿಲ್ಲ ಹಾಗೂ ಇದು ಯಾವುದೇ ಪ್ರತಿಷ್ಠೆಯ ಪ್ರಶ್ನೆಯಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಒಂದು ಕೋಟಿ ಏನು ಕೊಡುತ್ತೀರೆಂದು ಹೇಳುತ್ತಿದ್ದೀರಿ ಅದನ್ನು ಕನಿಷ್ಠ 5 ಕೋಟಿಯಾದರೂ ಮಾಡಬೇಕು. ಮಾತೆತ್ತಿದರೆ ಎಲ್ಲಕ್ಕೂ ಸದನದ ಸಮಿತಿ ಕೇಳುತ್ತೇವೆ ಎಂಬ ಭಾವನೆ ಮುಖ್ಯಮಂತ್ರಿಗಳಿಗೆ ಬರಬಾರದು. ಸದನದ ಸಮಿತಿಗಾಗಿ ಒತ್ತಾಯಿಸುವುದರಲ್ಲಿ ರಾಜ್ಯಕೀಯ ಇಲ್ಲ, ಈ ಗಂಭೀರಪರಿಸ್ಥಿತಿಯಲ್ಲಿ ಈ ಸದನದ ಸಮಿತಿ ಅಮೂಲ್ಯವಾದಂತಹ ಸಲಹೆಗಳನ್ನು ಕೊಡುತ್ತದೆ. ಆದ್ದರಿಂದ ಇದನ್ನು ದಯವಿಟ್ಟು ತಾವು ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಇಂದು ಎಷ್ಟು ಕೊಟ್ಟರೂ ಮೊಟ್ಟೆ ಸಿಗುತ್ತಿಲ್ಲ. ಎಲ್ಲಾ ಕಡೆ ಸೊಪ್ಪು ಬೆಳೆದು ನಿಂತಿದೆ ಹುಳು ಸಾಕುವುದಕ್ಕೆ ಮೊಟ್ಟೆ ಬೇಕು ಎಲ್ಲಿದೆ ಮೊಟ್ಟೆ? ನಾನು ನಿನ್ನೆ ಚಾಮರಾಜನಗರದಲ್ಲಿದ್ದೆ. ಅಲ್ಲಿ ಮೊಟ್ಟೆಗಾಗಿ ರೈತರು ಪರದಾಡುತ್ತಿದ್ದಾರೆ. ಬೀದಿ ಬೀದಿಗಳಲ್ಲಿ ಪಕ್ಕದ ತಾಲ್ಲೂಕುಗಳಲ್ಲಿ ಈ ಮೊಟ್ಟೆ ಸಿಗುವುದಕ್ಕೆ ಪರಿಣಾಮಕಾರಿಯಾಗಿ ಸರ್ಕಾರ ಇನ್ನೂ ಶ್ರಮ ಹಾಕಿಕೊಂಡಿಲ್ಲ. ಈವತ್ತು ಬೆಲೆ ಜಾಸ್ತಿ ಮಾಡುತ್ತಾರೆ. ಬೆಲೆ ಜಾಸ್ತಿಯಾಗಿರುವಾಗ ನಮಗೆ ಸಂತೋಷವಾಗುತ್ತದೆ ಎಂದು ರೈತರು ಹೆಚ್ಚು ಬೆಳೆದು ಗೂಡು ಮಾರಿದರೆ ನಮಗೆ ಹೆಚ್ಚು ಹಣ ಬರುತ್ತದೆ ಎಂದು ಆಸೆಯಿಂದ ಇದ್ದಾರೆ. ಕರ್ನಾಟಕದಲ್ಲಿ ಇದು ಪ್ರಮುಖ್ಯವಾದ ಉದ್ಯಮ ಇದರಲ್ಲಿ ಆಗಲೇ ನಾನು ಹೇಳಿದಂತೆ ಜೀವನ ಮಾಡುವ ಕೋಟ್ಯಾಂತರ ರೈತರಿದ್ದಾರೆ. ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪರಿಣಾಮಕಾರವಾಗಿ ಯೋಜನೆಯಾಗಬೇಕು ಮತ್ತು ಎಲ್ಲೆಲ್ಲಿ ಅಧಿಕಾರಿಗಳಲ್ಲಿ ಅದಕ್ಷಣೆ ಇದ್ದರೆ ಕೂಡಲೇ ಅವರನ್ನು ಬದಲಾವಣೆ ಮಾಡಬೇಕು. ಇದಕ್ಕೆ ವಿಶ್ವದ ನೆರವು ಬಂದಿದೆ. ಅದರ ಮೂಲಕ ರೇಷ್ಮೆ ರೈತರಿಗೆ ಸರಿಯಾದ ಮಾರ್ಗದರ್ಶನ ಸಿಕ್ಕಬೇಕು. ವೈಜ್ಞಾನಿಕವಾಗಿ ಬೆಳೆಯಬೇಕು ಎಂದು ಹೇಳುತ್ತಾರೆ. ಯಾವ ರೈತರಿಗೆ ನೀವು ವೈಜ್ಞಾನಿಕವಾಗಿ

ಒಂದು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ? ಯಾವುದೇ ಅನುಕೂಲಗಳು ಇವತ್ತು ರೈತರಿಗೆ ಇಲ್ಲ. ಶೇಕಡ ಒಂದು ಅಥವಾ ಎರಡು ಭಾಗ ವೈಜ್ಞಾನಿಕವಾಗಿ ಬೆಳೆಯಲು ಅನುಕೂಲ ಮಾಡಿಕೊಡುತ್ತಿದ್ದಾರೆ ಅಷ್ಟೆ ಇದು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಈ ಒಂದು ಗಂಟುರೋಗದಿಂದ ಚಾಮರಾಜನಗರ ತಾಲ್ಲೂಕು ಒಂದರಲ್ಲೇ 5 ಕೋಟಿ ನಷ್ಟ. ಇಡೀ ಮೈಸೂರು ಜಿಲ್ಲೆಯಲ್ಲಿ ಕನಿಷ್ಠ 20 ಕೋಟಿ ನಷ್ಟವಾಗಿದೆ. ನಾನು ಮೊನ್ನೆ ಹೇಳಿದ ಹಾಗೆ 100 ಕೋಟಿಯಷ್ಟು ಕನಿಷ್ಠ ನಷ್ಟವಾಗಿದೆ. ನಷ್ಟವನ್ನು ಅನುಭವಿಸಿರುವ ರೈತರು ಇಂದು ಮನೆಯಲ್ಲಿರುವ ಸಾಮಾನುಗಳನ್ನು ಗಿರಿವಿಗಿಟ್ಟು ಹಣ ಪಡೆಯುವ ಪರಿಸ್ಥಿತಿ ಬಂದಿದೆ. ಮೊದಲು ಧಾರಾಳವಾಗಿ ಜನರಿಗೆ ದಾನ ಕೊಡುತ್ತಿದ್ದ ರೇಷ್ಮೆ ರೈತರುಗಳು ಅಂದರೆ ಒಂದು ರೀತಿ ಚಿನ್ನವನ್ನೇ ಉತ್ಪಾದನೆ ಮಾಡುವವರು ಎಂದು ಹೇಳುತ್ತಿದ್ದೆವು. ಈಗ ಅವರುಗಳು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನೀವು ಏನಾದರೂ ಮಾಡಿ ಈಗ 100 ಕೋಟಿ ರೂ ನಷ್ಟು ಬೆಳೆ ನಷ್ಟವಾಗಿದೆ. ಕೊನೆಪಕ್ಷ ನೀವು 25 ಕೋಟಿ ರೂ ಗಳ ಪರಿಹಾರವನ್ನಾದರೂ ಸರ್ಕಾರದಿಂದ ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಿ. ರಾಜುಗೌಡ (ಹನೂರು) : ಈಗ ಮಾನ್ಯ ಮಂತ್ರಿಗಳು ಅವರ ಹೇಳಿಕೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡಿದರು. ಏನೆಂದರೆ ವಾತಾವರಣದಲ್ಲಿ ಗಂಟು ರೋಗಗಳ ಕ್ರಿಮಿಗಳು ಇದೆ ಅದು ನಾಲ್ಕೈದು ತಿಂಗಳ ಕಾಲ ಬದುಕತಕ್ಕಂಥ ಶಕ್ತಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಎಲ್ಲಿ ಬಿತ್ತನೆ ವಲಯ ಪ್ರದೇಶ ಇದೆ ಅಲ್ಲಿ ಜಾಸ್ತಿ ಆ ವಾತಾವರಣದಲ್ಲಿ ಕ್ರಿಮಿ ಇದೆ ಎನ್ನತಕ್ಕಂಥದ್ದನ್ನು ಅವರು ಒಪ್ಪಕೊಂಡರು ಎಂದಮೇಲೆ ಎಲ್ಲಿ ಕ್ರಿಮಿ ಇಲ್ಲವೋ ಅಂಥ ವಾತಾವರಣಕ್ಕೆ ಏತಕ್ಕೆ ಬಿತ್ತನೆ ಪ್ರದೇಶವನ್ನು ಬದಲಾವಣೆ ಮಾಡಬಾರದು ಎನ್ನತಕ್ಕಂಥದ್ದು ಒಂದು. ಸ್ವಾಮಿ ಮಳೆ ಬೀಳತಕ್ಕಂಥ ಕಾಲದಲ್ಲಿ ಮೋಡ ಇರತಕ್ಕಂಥ ಕಾಲದಲ್ಲಿ ತುಂತುರು ಮಳೆ ಬೀಳತಕ್ಕಂಥ ಕಾಲದಲ್ಲಿ ಏನೊಂದು ಮೊಟ್ಟೆಯನ್ನು ತಯಾರು ಮಾಡುತ್ತಾರೆ ಆ ಮೊಟ್ಟೆ ಆ ರೋಗವನ್ನು ಸಹಿಸತಕ್ಕಂಥ ಶಕ್ತಿ ಇಲ್ಲ ಎನ್ನುತಕ್ಕಂಥದ್ದನ್ನೂ ಕೂಡ ಅವರು ಒಪ್ಪಿಕೊಂಡರು. ಆ ಶಕ್ತಿಯನ್ನು ಹೊಂದತಕ್ಕಂಥ ಮೊಟ್ಟೆಯನ್ನು ತಯಾರು ಮಾಡುವುದಕ್ಕೆ ಆಗುತ್ತವೆಯೋ? ಇಲ್ಲ ಒಂದು ವೇಳೆ ಆ ಒಂದುಕಾಲದಲ್ಲಿ ಏತಕ್ಕೆ ತಾವು ಬೈವೋಲ್ಟಿನ್ ಗೂಡಿನ ಮೊಟ್ಟೆಯನ್ನು ಮಾಡಬಾರದು? (ಶೈತ್ಯಾಗಾರದಲ್ಲಿ ಮಳೆ ಇಲ್ಲದೇ ಇರತಕ್ಕಂಥ ಕಾಲದಲ್ಲಿ ತಾವು ಮೊಟ್ಟೆಯನ್ನು ಮಾಡಿ ಶೈತ್ಯಾಗಾರದಲ್ಲಿ ಇಟ್ಟು ನಂತರ ಸರಬರಾಜು ಮಾಡಿದಾಗ ಈ ರೋಗವನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೇ? ದಯಮಾಡಿ ಈ ಎರಡು ವಿಷಯಕ್ಕೂ ತಾವು ಉತ್ತರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧೂಸ್ವಾಮಿ : ಮಾನ್ಯ ಅಧ್ಯಕ್ಷರೇ ಬಹುಶಃ ಇದನ್ನು ಪ್ರಸ್ತಾಪ ಮಾಡಬೇಕಾದರೆ ಉದ್ದಿಮೆಯನ್ನು ಅವಲಂಬನೆ ಮಾಡಿರುವ ಜನರಿಗೆ ಆಗಿರುವ ನಷ್ಟದ ಬಗ್ಗೆ ಮಂತ್ರಿಗಳು ಏನಾದರೂ ಮಾತನಾಡುತ್ತಾರೆ ಎನ್ನತಕ್ಕಂಥ ಒಂದು ಕಳಕಳಿಯನ್ನು ನಾವು ಇಟ್ಟುಕೊಂಡಿದ್ದೆವು. ಖಾಯಿಲೆ ಹೇಗೆ ಬರುತ್ತದೆ ಇದು ಎಷ್ಟು ದಿವಸ ಇರುತ್ತದೆ? ಇದಕ್ಕಿಂತ ಪ್ರಮುಖವಾಗಿ ಈ ಉದ್ದಿಮೆ ಹೇಗೆ ಮುಂದುವರಿಯಬೇಕು. ಇವತ್ತಿನವರೆಗೂ ಈ ಉದ್ದಿಮೆಯನ್ನು ನಂಬಿಕೊಂಡಿರತಕ್ಕಂಥ ಜನಗಳ ಗತಿ ಏನು? ಇವತ್ತು ಸತ್ತು ಹೋಗುತ್ತಿರುವ ಜನಗಳಿಗೆ ಏನಾದರೂ ಮಾಡುವುದಕ್ಕೆ ಸರ್ಕಾರದಿಂದ ಆಗುತ್ತದೆಯೇ ಎಂಬ ಬಗ್ಗೆ ಹೇಳುವುದಕ್ಕಾಗುತ್ತದೆಯೇ?

ಅವರಿಗೆ ಏನಾದರೂ ಆಶ್ರಯವನ್ನು ಸರ್ಕಾರ ನೀಡುವುದಕ್ಕಾಗುತ್ತದೆಯೇ ಎನ್ನತಕ್ಕಂಥ ಪ್ರಮುಖವಾದ ಉದ್ದೇಶವಾಗಿತ್ತು. ಸನ್ಮಾನ್ಯ ಮಂತ್ರಿಗಳು ಆ ಕಡೆ ಪ್ರಸ್ತಾಪ ಮಾಡಲಿಲ್ಲ. ಬಿತ್ತನೆ ಬೀಜ ಮಾಡಿದವರ ಗತಿಯೇನು? ಅದನ್ನು ಕೊಂಡುಕೊಂಡು ಹೋಗಿ ಬೆಳೆ ಹಾಕಿದರೆ ಗತಿಯೇನು? ಅದನ್ನೇ ನಂಬಿಕೊಂಡಿರತಕ್ಕಂಥ ರೀರಸ್ಸ್ ಗತಿಯೇನು? ಇದರಿಂದ ಮಾರ್ಕೆಟ್‌ನಲ್ಲಿ ಆಗಿರುವ ಪರಿಣಾಮವೇನು? ಇದರ ಬಗ್ಗೆ ಸರ್ಕಾರದಿಂದ ಉತ್ತರ ಬರಲಿಲ್ಲ. ಎರಡನೆಯದಾಗಿ, ನಾವು ಮೂಲಭೂತವಾಗಿ ನಾವು ಪ್ರಶ್ನೆ ಮಾಡಿದ್ದು ತಮ್ಮನ್ನು ತಮಗೆ ಏನು ವಿಶ್ವಬ್ಯಾಂಕ್ ಯೋಜನೆಗಳು ಇರಬಹುದು, ಅಥವಾ ಸಬ್ಸಿಡಿ ಕೊಡುವ ಐ.ಆರ್.ಡಿ.ಪಿ. ಯೋಜನೆಗಳು ಇರಬಹುದು, ರೈತರಿಗೆ ಇವತ್ತಿನವರೆಗೂ ತಲುಪಿಲ್ಲ ಸ್ವಾಮಿ. ನಾನು ನಿನ್ನೆ ಕೂಡಾ ಸನ್ಮಾನ್ಯ ಹುಚ್ಚ ಮಾಸ್ತಿಗೌಡರ ಎದುರಿಗೆ ಪ್ರಸ್ತಾಪ ಮಾಡಿದೆವು. 40 ರೂಪಾಯಿ ಒಂದು ಕುಟುಂಬಕ್ಕೆ ತಾವು ಕೊಡುತ್ತೀರಿ, ಫಾರ್ಮಲಿನ್ ಕೊಳ್ಳುವುದಕ್ಕೆ ಹಾಗೂ ಅದನ್ನು ಡಿಸ್-ಇನ್‌ಫೆಕ್ಟ್ ಮಾಡುವುದಕ್ಕೆ ಎಂದು ಹೇಳಿ, ಇಂಥ ಕಾರ್ಯಕ್ರಮಗಳನ್ನು ಎಷ್ಟು ವರ್ಷಗಳು ತಾವು ಇಟ್ಟುಕೊಂಡು ಹೋದರೂ ಈ ಖಾಯಿಲೆಯನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಎಲ್ಲಾ ಒಪ್ಪುತ್ತೇವೆ. ಆ ಭಾಗದ ಜನ, ಇದು ನಿರ್ಮೂಲನ ಆಗುವುದಿಲ್ಲ. ಹತೋಟಿ ಮಾಡುವುದಕ್ಕೆ ಸರ್ಕಾರಗಳು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದವು. ಈ ವರ್ಷ ಪ್ರೀ ಮಾನ್‌ಸೂನ್ ಚೆನ್ನಾಗಿತ್ತು. ಕುಣಿಗಲ್ ಭಾಗದಲ್ಲಿ ಅಥವಾ ಹೆಬ್ಬೂರು ಭಾಗದಲ್ಲಿ ಎಂದು ಹೇಳಿ, ಈ ಖಾಯಿಲೆ ಹತೋಟಿಗೆ ಬರಲಿಲ್ಲ ಎನ್ನುವುದನ್ನು ಬಿಟ್ಟರೆ ಬಹಳ ವ್ಯಾಪಕವಾಗಿ ಮೋಡ ಮುಚ್ಚಿದ ವಾತಾವರಣ. 25 ಡಿಗ್ರಿ ಸೆಂಟಿ ಗ್ರೇಡ್‌ಗಿಂತ ಕಡಿಮೆ ಉಷ್ಣ ಇರತಕ್ಕಂಥ ಕಾಲ ಏನೂ ಇರಲಿಲ್ಲ. ತುಮಕೂರು ಜಿಲ್ಲೆಯ ಮಟ್ಟಿಗಂತೂ ಇರಲಿಲ್ಲ. ಇಲ್ಲಿ ನಿರ್ಲಕ್ಷ್ಯವೇ ಎದ್ದು ಕಾಣುತ್ತಿದೆ. ತಾವು ಒಪ್ಪಿದ್ದೀರಿ. ಇದನ್ನು ಸ್ವಲ್ಪ ಬಿಗಿ ಮಾಡಿ. ರೇಷ್ಮೆ ಬೆಳೆಗಾರರ ಬಗ್ಗೆ ತಮಗೆ ಕಳಕಳಿ ಇದೆ. ಆದರೆ ಹತೋಟಿ ಮಾಡಬೇಕಾಗುತ್ತದೆ. ತಾವು ಸಚಿವರು ಇದ್ದೀರಿ. ಇದನ್ನು ಹತೋಟಿ ಮಾಡುವುದಕೇಕೊ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ಇದಕ್ಕೆ ಪರಿಹಾರರನ್ನು ಏನು ಕೊಡುತ್ತೀರಿ ಎಂಬುದನ್ನು ಹೇಳಬೇಕು. ಮತ್ತೆ ನಾಳೆ ಇದನ್ನು ಮಾಡಬೇಕು ಎನ್ನುವವರಿಗೆ ಇವತ್ತು ಆಗಲೇ ಮನಸ್ಸಿಗೆ ಬಂದುಬಿಟ್ಟಿದೆ. ಇದನ್ನು ಮಾಡಬೇಕೇ ಬೇಡವೇ ಮಾರುಕಟ್ಟೆಗೆ ನನ್ನ ಗೂಡು ಹೋದರೆ ಏನಾದರೂ ವಾಪಸ್ ಬರುತ್ತದೆಯೇ, ಬರುವುದಿಲ್ಲವೇ ಅಥವಾ ಅಲ್ಲಿಯೇ ಮುಳುಗಿ ಹೋಗುತ್ತವೆಯೇ ಎನ್ನುವುದು. ಈ ಕಡೆ ತಮ್ಮ ಕಾರ್ಯಕ್ರಮ ಏನು ಎನ್ನುವುದನ್ನು ತಾವು ಸ್ಪೆಸಿಫಿಕ್ ಮಾಡಬೇಕಾಗುತ್ತದೆ. ತಾವು ಹೇಳಬೇಕಾಗುತ್ತದೆ. ಇಲ್ಲಾ ಈ ಕಾರ್ಯಕ್ರಮಗಳನ್ನು ಮುಂದುವರಿಸಿ ನಾವು ಇಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಸರ್ಕಾರದವರು, ನೀವು ಮುಂದುವರಿಯಬಹುದು. ಈ ಸಿರಿಕಲ್ಚರ್ ಕಾರ್ಯಕ್ರಮದಲ್ಲಿ ಎಂದು ಹೇಳದೇ ಹೋದರೆ ಇಂಥ ಉತ್ತರಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ನಮಗೆ ಗೊತ್ತು. ತಮಗೆ ಕಳಕಳಿ ಇದೆ. ಕಾರ್ಯಕ್ರಮ ಏನು ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ರೈತರ ಗತಿಯೇನು? ಅವನು ಬೆಳೆಯಬೇಕೇ ಬೇಡವೇ ಎನ್ನತಕ್ಕಂಥ ಯೋಚನೆ ಮಾಡುವ ಸ್ಥಿತಿಯನ್ನು ನಿರ್ಮಾಣ ಮಾಡಿ ಇಟ್ಟರೆ ಮುಂದೆ ಏನು ಆಗಬೇಕಾಗಿದೆ. ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ ತಮ್ಮ ಅನುಷ್ಠಾನ ಎನ್ನುವುದನ್ನು ತಾವು ಯೋಚನೆ ಮಾಡಿ ಹೇಳಬೇಕು. ಎರಡನೆಯದು ಬಿತ್ತನೆ ಮಾಡುತ್ತಿರುವ ರೈತನಿಗೆ ಏನೂ ಗಿಟ್ಟುತ್ತಿಲ್ಲ. ತಾವು ಒಪ್ಪಿಕೊಂಡಿದ್ದೀರಿ. ಐದು ರೂಪಾಯಿ ಇನ್‌ಸೆಂಟೀವ್ ಒಂದು ಕಾಲದಲ್ಲಿ ಕೊಟ್ಟಿದ್ದರು. ಆದಾದಮೇಲೆ ಸನ್ಮಾನ್ಯ ಕೃಷ್ಣ ಅವರು ಬಂದು ಒಂದೂವರೆ-ಎರಡು ರೂಪಾಯಿ ಜಾಸ್ತಿ ಮಾಡಿದರು. ರಾಮಯ್ಯ ಕಾಲ, ಕೃಷ್ಣ ಅವರ ಕಾಲ ಆಯಿತು

ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ. ನಿಮಗೂ ಗೊತ್ತು. ಇನ್ನು ಜಾಸ್ತಿ ಇನ್‌ಸೆಂಟೀವ್ ಮಾಡಿ ಒಳ್ಳೆಯ ಬೀಜಕ್ಕೆ ತಾವು ಬೆಲೆಯನ್ನು ಜಾಸ್ತಿ ಕೊಟ್ಟು ರಿಜೆಕ್ಷನ್ ಅಲೊ ಮಾಡಬೇಕಾಗುತ್ತದೆ ಯಾರದೋ ಒತ್ತಡ ತಂದರು, ರಿಜೆಕ್ಷನ್ ಅಲೋ ಆಗಲಿಲ್ಲ ಅಥವಾ ಇನ್ನೊಬ್ಬರ ಒತ್ತಡಕ್ಕೆ ಮಣಿದು ಅಧಿಕಾರಿಗಳು ಅದನ್ನು ಅಕ್ಸೆಪ್ಟ್ ಮಾಡಿಕೊಂಡು ಅದನ್ನೇ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ ಎನ್ನತಕ್ಕಂಥ ಸತ್ಯವನ್ನು ಒಪ್ಪಿಕೊಳ್ಳಬೇಕು. ಸ್ವಲ್ಪ ಬೀಜ ಅಂದಮೇಲೆ ಅದಕ್ಕೆ ಹೆಚ್ಚಿನ ಬೆಲೆಯನ್ನು ತಾವು ನಿಗದಿ ಮಾಡಬೇಕಾಗುತ್ತದೆ. ಆ ಕಾರ್ಯಕ್ರಮವನ್ನೇನಾದರೂ ಹಾಕಿಕೊಳ್ಳುತ್ತೀರಾ ಎಂದು ಸ್ಪಷ್ಟವಾಗಿ ತಾವು ಇವುಗಳ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದಲ್ಲಿ ಏನು ರೇಷ್ಮೆ ಬೆಳೆಯುತ್ತೇವೆ. ಅದರಲ್ಲಿ ನಾಲ್ಕನೇ ಒಂದು ಭಾಗದಷ್ಟನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ಬೆಳೆಯುತ್ತಿದ್ದೇವೆ. ಎರಡನೆಯದು ಇದು ಮೈಸೂರು ಜಿಲ್ಲೆ, ಬೆಂಗಳೂರು ಜಿಲ್ಲೆಯಲ್ಲಿ ಬರಬಹುದು. ನಾನು ಆಗಾಗ್ಗೆ ಏನು ಹೇಳುತ್ತಿದ್ದೇನೆಂದರೆ ಅದು ಕೋಲಾರ ಜಿಲ್ಲೆಯಲ್ಲಿ ಯಾವ ದೊಡ್ಡ ದೊಡ್ಡ ನದಿಗಳೂ ಇಲ್ಲ. ಆದ್ದರಿಂದ ಈ ಒಂದು ರೇಷ್ಮೆ ಮತ್ತು ಮಿಲ್ಕ್ ವಿಷಯದಲ್ಲಿ ಹೆಚ್ಚಿಗೆ ಹಣವನ್ನು ತೊಡಗಿಸಿಕೊಡಬೇಕೆಂದು ಈಗ ಈ ರೇಷ್ಮೆಗೆ ಗಂಟು ರೋಗ ಬಂದಿರುವುದರಿಂದ ಸರ್ಕಾರದವರು ಕಾಮನ್ ರೇರಿಂಗ್ ಸೆಂಟರ್ಸ್ ಅಥವಾ ಅದಕ್ಕೆ ಏನೇನು ಅನುಕೂಲಗಳು ಬೇಕು ಅದನ್ನು ಮಾಡಬೇಕು. ಅದು ಲಾಂಗ್ ರೇಂಜ್ ಆಗುತ್ತದೆ. ಆದರೂ ಕೂಡ ಅದನ್ನು ಇಮ್ಮಿಡಿಯೇಟ್ ಆಗಿ ಏನೊಂದು ಆತಂಕ ಒಡ್ಡಿದೆ, ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ಜಿಲ್ಲೆಯವರಾದ ಮಾನ್ಯ ರೇಷ್ಮೆ ಮಂತ್ರಿಗಳು ಹೆಚ್ಚಿಗೆ ಹಣವನ್ನು ಕೊಟ್ಟು ಇಮ್ಮಿಡಿಯೇಟ್ ಆಗಿ ಇದನ್ನು ಸಾಲ್ವ್ ಮಾಡಬೇಕು. ಈಗ ಕೂಡಲೇ ಕ್ರಮಕೈಗೊಳ್ಳದಿದ್ದ ಪಕ್ಷದಲ್ಲಿ ನಮ್ಮ ಜಿಲ್ಲೆಯಲ್ಲಿ ಸುಮಾರು ಆರೇಳು ಲಕ್ಷ ಜನರು ನಿರುದ್ಯೋಗಿಗಳಾಗುತ್ತಾರೆ ಹಾಗೂ ನಮ್ಮ ಜಿಲ್ಲೆಯಲ್ಲಿ ಕ್ಷಾಮ ಬರುವ ಪರಿಸ್ಥಿತಿ ಕೂಡ ಬರಬಹುದು. ಅದಕ್ಕೋಸ್ಕರ ಆದಷ್ಟು ಬೇಗ ತಾವು ಇದರ ಬಗ್ಗೆ ಮುತುವರ್ಜಿ ವಹಿಸಿ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ನಮ್ಮದು ಬಿತ್ತನೆಯ ವಲಯ ನಿನ್ನೆಯ ದಿವಸ ದೊಡ್ಡ ಕಾನ್‌ಫರೆನ್ಸ್ ನಡೆದಿದೆ. ಈಗ ಏನಾಗಿದೆ ಅಂದರೆ ತಾಂತ್ರಿಕವಾಗಿ ಮೊಟ್ಟೆಗೂಡುಗಳು ಅನೇಕ ರೋಗಕ್ಕೆ ತುತ್ತಾಗತಕ್ಕದ್ದು ಗಂಟು ರೋಗಕ್ಕೆ ಪರ್ಯಾಯವಾಗಿ ಏನಾದರೂ ಹುಡುಕತಕ್ಕಂಥಹ ವಿಚಾರದ ಬಗ್ಗೆ ಮೂರು ವರ್ಷದಲ್ಲಿ ನಮ್ಮ ಮಾನ್ಯ ಮುನಿಯಪ್ಪನವರು ಇದನ್ನು ತೆಗೆಯುತ್ತೇವೆಂದು ಹೇಳಿದ್ದಾರೆ. ಅದು ಬಹಳ ಕಷ್ಟ. ಅದು ಒಂದು ವರ್ಷದಲ್ಲೇ ಆಗಬೇಕೆಂದು ಹೇಳಿ ಒತ್ತಾಯ ಮಾಡಿದ್ದಾರೆ. ಆದರೆ ಈ ರೀಲರ್ಸ್‌ಗಳು ಏನಿದ್ದಾರೆ, ಅವರು ಒಳ್ಳೆಯ ಮೊಟ್ಟೆಗಳುನ್ನು ಭಿತ್ತನೆ ವಲಯದಿಂದ ತಂದು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ, ಕಳಪೆಮೊಟ್ಟೆಯನ್ನು ಬೀಜಕ್ಕೆ ಅವರು ಮಾರಾಟಮಾಡುತ್ತಾರೆ. ಆ ಕಳಪೆ ರೇಷ್ಮೆ ಗೂಡನ್ನು ಮಾರಿ ಅದರಲ್ಲಿ ಮಾಡತಕ್ಕ ಬಿತ್ತನೆ ಬೀಜ ಯಾವಾಗಲೂ ರೋಗದಿಂದ ಕೂಡಿರುತ್ತದೆ. ಅದರಲ್ಲಿ ಮುಕ್ಕಾಲು ಭಾಗ ರೋಗ ಇದ್ದೇ ಇರುತ್ತದೆ. ಅದನ್ನು ತಡೆಹಿಡಿದರೆ ನೀವು ಶೇಕಡ 25 ಭಾಗ ಕಂಟ್ರೋಲ್ ಮಾಡಬಹುದು. ಇದರ ಜೊತೆಗೆ ರೀಲರ್ಸ್‌ಗಳಿಗೋಸ್ಕರವಾಗಿ, ಬೇಯಿಸತಕ್ಕ ಮೊಟ್ಟೆಗಳನ್ನು 9 ಮಿಷಿನರಿಗಳನ್ನು ತಂದು ಇಟ್ಟಿದ್ದಾರೆ. ಇದಕ್ಕೆ ಸುಮಾರು 40-50 ಲಕ್ಷ ರೂಪಾಯಿಯಾಗುತ್ತದೆ. ಅದಕ್ಕೆ ಒಂದು ಸಣ್ಣ ಎಕ್ವಿಪ್‌ಮೆಂಟ್ ಇಲ್ಲದೆ9

ವರ್ಷಗಳಿಂದಲೂ ಅದನ್ನು ನಿಲ್ಲಿಸಿದ್ದಾರೆ. ಅದರಿಂದ ಬೇಯಿಸಿ ಅರು ರೀಲರ್ಸ್‌ಗಳಿಗೆ ಕೊಟ್ಟರೆ, ಅವರು ಕಳಪೆ ಮಟ್ಟದ್ದನ್ನು ಬೇರೆಯವರಿಗೆ ಮಾರಾಟ ಮಾಡಲು ಅವಕಾಶವಿರುವುದಿಲ್ಲ. ಆದರಿಂದ ರೋಗರಹಿತ ಮೊಟ್ಟೆಗಳನ್ನು ತಯಾರು ಮಾಡುವುಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡಿಸಿದರೆ ಈವತ್ತು ರೀಲರ್ಸ್‌ಗಳನ್ನು ಕಂಟ್ರೋಲ್ ಮಾಡಬಹುದು. ರೀಲರ್ಸ್‌ಗಳು ಮತ್ತು ಅಧಿಕಾರಿಗಳು ಶಾಮಿಲಾಗಿ ಈ ಕೆಲಸ ನಡೆಯುತ್ತಿದೆ ಎಂಬ ವಿಚಾರವನ್ನು ನಾವು ಸರ್ಕಾರದ ಗಮನಕ್ಕೆ ಎಷ್ಟು ಸಾರಿ ತಂದರೂ ಕೂಡ, ಇದರ ಬಗ್ಗೆ ತಾವು ಏನೂ ತನಿಖೆಯನ್ನು ಮಾಡಲಿಲ್ಲ. ಈ ಬಗ್ಗೆ ಯಾವ ವಿಚಾರಣೆಯನ್ನು ನಡೆಸಲಿಲ್ಲ. ಇದನ್ನು ಸರಿಪಡಿಸುವುದಕ್ಕೂ ಕೂಡ ಪ್ರಯತ್ನ ಪಡಲಿಲ್ಲ. ಇದನ್ನು ಸರಿಪಡಿಸಲು ತಾವು ಏನಾದರೂ ತ್ವರಿತವಾಗಿ ಕಾರ್ಯಕ್ರಮವನ್ನು ಹಾಕಬೇಕು. ಜೊತೆಗೆ ಶಾಮೀಲಾಗಿರತಕ್ಕ ಈ ರೀಲರ್‌ಗಳಿಗೆ ಲೈಸನ್ಸ್‌ಗಳನ್ನು ರದ್ದು ಮಾಡುವುದಕ್ಕೆ ನೀವು ಪ್ರಯತ್ನ ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ. ಇದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ ಅದರಲ್ಲೂ ಕೋಲಾರ, ಮೈಸೂರು, ಬೆಂಗಳೂರು ಗ್ರಾಮಂತರ, ತುಮಕೂರು, ಮಂಡ್ಯ ಅಲ್ಲದೆ ಈಗಾಗಲೇ ಬಯಲು ಸೀಮೆ ಭಾಗವಾದ ಬೆಳಗಾಂ, ಶಿವಮೊಗ್ಗ ಹಾಗೂ ಅನೇಕ ಜಿಲ್ಲೆಗಳಲ್ಲಿ ಈಗಾಗಲೇ ರೇಷ್ಮೆ ಬೆಳೆಗಾರರು ಇರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ. ಬಹಳಷ್ಟು ಅದಕ್ಕೆ ಬೇಡಿಕೆಗಳು ರೈತಾಪಿವರ್ಗದ ವತಿಯಿಂದ ಇದೆ. ಹಾಗೆಯೇ ಬೆಂಬಲವನ್ನು ಕೂಡ ಹಲವಾರು ವರ್ಷಗಳಿಂದ ಕೊಟ್ಟುಕೊಂಡು ಬಂದಿದ್ದೇವೆ. ಈ ಮಧ್ಯೆ ಈ ಗಂಟು ರೋಗ ಬಂದು ರೈತ ವರ್ಗ ಬಹಳ ತುತ್ತಾಗಿದೆ. ಇದರಿಂದ ಬಹಳ ಲಾಸ್ ಆಗುತ್ತಿದೆ. ಅದನ್ನು ಏನು ಮಾಡಿದರೂ ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿಗೆ ರೈತವರ್ಗ ಬಂದಿರತಕ್ಕದ್ದು ನಿಜ. ಅದರಲ್ಲಿ ಭಿನ್ನ ಭಾವ ಬಂದಿಲ್ಲ. ಈಗಾಗಲೇ ಮಾನ್ಯ ಸಚಿವರಾದ ಮುನಿಯಪ್ಪನವರು ಹೇಳಿದ ಹಾಗೆ, ನಾವು ಇದಕ್ಕೆ ತಜ್ಞರ ಅಭಿಪ್ರಾಯದ ಆಧಾರದಮೇಲೆ ಒಂದು ಯೋಜನೆಯನ್ನು ಕೂಡ ಸಿದ್ಧಮಾಡಿದ್ದೇವೆ. ಅದರ ಪ್ರಕಾರ 11-12ಕೋಟಿ ರೂಪಾಯಿಯ ಯೋಜನೆಯನ್ನು ಜಾರಿಗೊಳಿಸಬೇಕೆಂದು ನಾವು ನಬಾರ್ಡಿಗೆ ತಿಳಿಸಿದ್ದೇವೆ. ಇವತ್ತು ನಾವು "ವಿಶ್ವ"ಕಾರ್ಯಕ್ರಮವನ್ನು ಪ್ರಾರಂಭಮಾಡಬೇಕೆಂದು ಏನು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ, ಅದರ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದಂತಹ ಹುಚ್ಚಮಾಸ್ತಿಗೌಡರೂ ಸಹ ತಿಳಿಸಿದ್ದಾರೆ. ಈ ರೇಷ್ಮೆಯ ವಿಷಯದಲ್ಲಿ ಕೈಗಾರಿಕೆ ಏನಿದೆ ಅದನ್ನೂ ಕೂಡ ಸೇರಿಸಿದ್ದೇವೆ. ಇವತ್ತು ಈ ರೋಗ ಜಾಸ್ತಿಯಾಗಿ ಸಂಪೂರ್ಣ ವಿಫಲವಾಗುತ್ತಾ ಹೋದರೆ ಅದರಿಂದ ಲಕ್ಷಾಂತರ ಕುಟುಂಬಗಳಿಗೆ ಪೆಟ್ಟಾಗುವುದು ನಿಜವೆನ್ನುವ ಮಾತನ್ನು ನಾವು ಒಪ್ಪಲೇಬೇಕು.

1.55 ಪಿ.ಎಂ.

ಮೂಲಭೂತವಾಗಿ ಈ ವಿಚಾರವನ್ನು ನಾನು ಒಪ್ಪಿದಮೇಲೆ ಇದಕ್ಕೆ ಆ ರೋಗವನ್ನು ತಡೆಗಟ್ಟತಕ್ಕಂಥದ್ದು ಸಂಪೂರ್ಣವಾಗಿ ಅದನ್ನು ತೊಡೆದು ಹಾಕತಕ್ಕಂಥ ವಿಚಾರದಲ್ಲಿ ನಾವು ಯೋಜನೆಯನ್ನು ತಯಾರುಮಾಡಿ ಹಣವನ್ನು ನಾವು ತೊಡಗಿಸದಿದ್ದರೆ ಮುಂದೆ ಯಾವ ಪ್ರದೇಶದಲ್ಲಿ ಈ ಒಂದು ಕೈಗಾರಿಕೆಯನ್ನು ಬೆಳೆಸಬೇಕು ಎನ್ನತಕ್ಕಂಥ ಉದ್ದೇಶವನ್ನು ಇಟ್ಟುಕೊಂಡಿದ್ದೇವೆಯೋ ಅದು ಸಫಲವಾಗುವುದಿಲ್ಲ, ಒಂದು ವೇಳೆ "ವಿಶ್ವ" ಅಲ್ಲದಿದ್ದರೂ ಕೂಡ ನಮಗೆ ಸಿರಿಕಲ್ಚರ್ ವಿಚಾರದಲ್ಲಿ ಅದೇ ಒಂದು ದೊಡ್ಡ ಸಬ್ಜೆಕ್ಟ್ ಆಗಿದೆ. ಅದರಲ್ಲಿಯೂ ಕೂಡಾ ಕರ್ನಾಟಕ ರಾಜ್ಯ ಬಹಳ ಹೆಸರುವಾಸಿಯನ್ನು ಪಡೆದಿರತಕ್ಕಂಥ ಒಂದು

ರಾಜ್ಯ ಕೂಡ ಹೌದು. ಈ ಒಂದು ದೃಷ್ಟಿಯಿಂದ ಇವತ್ತು 1ಕೋಟಿ 26 ಲಕ್ಷ ರೂಪಾಯಿಗಳನ್ನು ಮಾರ್ಚ್ 92ರೊಳಗಾಗಿ ನಾವು ಖರ್ಚುಮಾಡತಕ್ಕಂಥ ವಿಚಾರ ಇದೆ. ಅದು ಹಣಕಾಸಿನ ನಮಗೆ ನಿಗದಿಯಾಗಿರತಕ್ಕಂಥ ವಿಚಾರದಲ್ಲಿ ಮಾನ್ಯ ಸಚಿವರು ತಮಗೆ ತಿಳಿಸಿದ್ದಾರೆ. ಇದನ್ನು ನಾನು ಅಷ್ಟಕ್ಕೆ ನಿಲ್ಲಿಸುವುದಿಲ್ಲ, ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು, ಉಪನಾಯಕರು ಮತ್ತು ಮಾನ್ಯ ಸದಸ್ಯರುಗಳಾದ ಭೈರೇಗೌಡರು ಕೂಡಾ ಆ ಕಡೆಯ ಭಾಗದಿಂದ ಬಂದಿರತಕ್ಕವರು, ಮಾನ್ಯ ವೆಂಕಟಪ್ಪನರರು ಮತ್ತು ಬೆಳಗಾಂನ ಮಾನ್ಯ ಶಿವಾನಂದ ಕೌಜಲಗಿಯವರು ಕೂಡ ಭಾಷಣ ಮಾಡಿದ್ದು ನನಗೆ ನೆನಪಿದೆ. ಆಮೇಲೆ ವಾಟಾಳರು, ಮಾನ್ಯ ಲಕ್ಕಪ್ಪನವರು, ರಾಜುಗೌಡರು ಹೇಳಿದ್ದಾರೆ. ಅನೇಕ ಜನ ಮಾನ್ಯ ಸದಸ್ಯರುಗಳು ಹೇಳಿರತಕ್ಕಂಥದ್ದು ಸಹಜವಾಗಿರತಕ್ಕಂಥ ಕಳಕಳಿಯ ಹಿನ್ನೆಲೆಯಲ್ಲಿಯೇ. ನಾವು ಒಂದೂವರೆ ಕೋಟಿ ರೂಪಾಯಿಗೆ ನಿಲ್ಲಿಸುವುದಿಲ್ಲ, ಆ ಹಣವನ್ನು ಇವತ್ತು ತಾವು ಏನು ಐದು ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ, ನನಗನ್ನಿಸುತ್ತಿದೆ, ಇದಕ್ಕೆ ನಾವು ಐದು ಕೋಟಿ ರೂಪಾಯಿಗಳನ್ನು ಇಡುವುದು ಬೇಡ, ಯಾವುದೋ ಒಂದು ಉದ್ದೇಶದಿಂದ ಈ ಮಾತನ್ನು ನಾನು ಆಡುತ್ತಿಲ್ಲ, ಹಣ ಇದಕ್ಕೆ ಎಷ್ಟು ಬೇಕೋ ಇದನ್ನು ತಹಬಂದಿಗೆ ತರುವುದಕ್ಕೆ, ಮೂರು-ಐದು-ಆರು ಕೋಟಿ ರೂಪಾಯಿಗಳಾದರೂ ಆಗಬಹುದು. Let us be prepared. ಅದಕ್ಕೆ ನಾವು ಪ್ರಿಪೇರ್ ಆಗದಿದ್ದರೆ ಮಾತ್ರ ಇದನ್ನು ತಹಬಂದಿಗೆ ತರುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಭಾವನೆಯಿಂದ ನಿಮ್ಮ ಅಭಿಪ್ರಾಯವನ್ನು ಸರ್ಕಾರ ಒಪ್ಪುತ್ತದೆ. ನಾವು ಇದಕ್ಕೆ ಯೋಜನೆಯನ್ನು ಮತ್ತೊಂದನ್ನು ಸಿದ್ಧಮಾಡುತ್ತೇವೆ. ತಮ್ಮ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಸದನದ ಸಮಿತಿ ಎಂದು ನೀವು ಏನು ಹೇಳುತ್ತೀರಿ, ನಾವು ಯಾರೂ ಕೂಡಾ ತಜ್ಞರಲ್ಲ. ಆಫ್ಟರ್ ಆಲ್, ರೈತರ ಒಂದು ವಿಚಾರ ನೋಡಿ ಮಾತನಾಡುತ್ತೇವೆ. ತಾವು ಮಾತನಾಡಿದರೂ ಅಷ್ಟೆ. ಯಾರಾದರೂ ಕೂಡಾ ಅಷ್ಟೆ. ಈ ವಿಚಾರವನ್ನು ತಜ್ಞರಿಗೆ ನಾವು ಬಿಡೋಣ. ನಾವು ನೀವು ಸೇರಿ ಹೆಚ್ಚು ಎಂದರೆ ಏನು ಮಾಡಬಹುದು, ಹಣಕಾಸಿನ ವಿಚಾರದಲ್ಲಿ ನಾವು ಮಾತನಾಡಿಕೊಳ್ಳಬಹುದು. ಇದನ್ನು ತಡೆಗಟ್ಟಿ ಎಂದು ನಾವು ಹೇಳಬಹುದೇ ವಿನಹಾ ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಅದುದರಿಂದ ಹಣಕಾಸನ್ನು ಪ್ರೊವೈಡ್ ಮಾಡತಕ್ಕಂಥ ವಿಚಾರದಲ್ಲಿ ನಾವು ಸಿದ್ಧರಾಗಿರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಇದು 3-4-5-6 ಕೋಟಿ ರೂಪಾಯಿಗಳಾದರೂ ಆಗಬಹುದು, ನಾವು ಸರ್ಕಾರದವರು ಸಿದ್ಧರಾಗಬೇಕಾಗುತ್ತದೆ. ನಾವು ಆ ಹಣವನ್ನು ಅಡ್ಜಸ್ಟ್ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ : ಈ ಸಭೆ ಮುಗಿದಮೇಲೆ, ಅಸೆಂಬ್ಲಿ ಸೆಷನ್ ಆದಮೇಲೆ ಈ ಪ್ರದೇಶದಲ್ಲಿರತಕ್ಕಂಥ ಶಾಸಕರನ್ನಾದರೂ ಕೂಡ ಕರೆದು ಅದಕ್ಕೆ ವಿವರವಾದಂಥ ಚರ್ಚೆ ಒಂದು ದಿವಸ ಅಲ್ಲ ಎರಡು ಅಲ್ಲ, ಎರಡು ದಿವಸ ಆಗಲಿ, ವಿವರವಾದಂತಹ ಚರ್ಚೆಯಾದರೂ ಕೂಡಾ ಮಾಡಿ ನಮ್ಮ ಸಲಹೆಗಳನ್ನು ಕೂಡ ಪಡೆಯುವುದಕ್ಕೆ ಸರ್ಕಾರ ದಯವಿಟ್ಟು ಸಿದ್ಧರಾಗಬೇಕು. ಈ ಸಲಹೆಯನ್ನಾದರೂ ಕೂಡಾ ಸರ್ಕಾರ ಒಪ್ಪಿಕೊಳ್ಳಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಒಪ್ಪುತ್ತೇನೆ. ಅದನ್ನು ಸರ್ಕಾರ ಒಪ್ಪುತ್ತದೆ. ತಮ್ಮ ಸಲಹೆ ಯೋಗ್ಯವಾಗಿದೆ. ಏಕೆಂದರೆ ತಮ್ಮ ಭಾಗದ, ಆ ಕಡೆ ಇರತಕ್ಕಂಥ ಬೆಳೆಗಾರರು ರೈತರು ಏನು ಇದ್ದಾರೆ, ಅವರ ಅಭಿಪ್ರಾಯಗಳನ್ನು ಹೊತ್ತು ತಾವು ಸಭೆಗೆ ಬರುತ್ತೀರಿ ಎನ್ನತಕ್ಕಂಥ ಜವಾಬ್ದಾರಿಯ ಹಿನ್ನೆಲೆಯಲ್ಲಿ ತಾವು ಹೇಳುತ್ತಿದ್ದೀರಿ.

ನಾವು ಅದನ್ನು ಅರ್ಥ ಮಾಡಿಕೊಳ್ಳುತ್ತೇವೆ. ಈ ಸದನ ಮುಗಿದರೂ ಕೂಡ ಇದೇನೂ ತಪ್ಪಾಗುವುದಿಲ್ಲ. ಮುಗಿದಮೇಲೆ ಕೂಡ ಸಭೆಯನ್ನು ಮಾನ್ಯ ಸಚಿವರು ಕರೆಯುತ್ತಾರೆ ಅದರಲ್ಲಿ ಏನು ತಪ್ಪಾಗುವುದಿಲ್ಲ. ಆ ರೀತಿ ಕರೆದು ಮಾತನಾಡಿದರೆ ಬಹಳ ಒಳ್ಳೆಯದು. ಇದು ಬೆಳಿಗ್ಗೆಯಿಂದ ಹಿಡಿದು ಮಧ್ಯಾಹ್ನ ಆಗಬಹುದು, ಸಾಯಂಕಾಲದವರೆಗೆ ಆಗಬಹುದು. ಒಂದು ದಿನ ಸೇರಿಕೊಂಡರೆ ಸಾಕು. ಆ ಸಭೆಯಲ್ಲಿ ಹಣಕಾಸಿನ ವಿಚಾರ ಮತ್ತೊಂದು ತಮಗೆ ಹೇಳುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ನಾವು ಕೆಲಸ ಮಾಡೋಣ.

ಉಪಾಧ್ಯಕ್ಷಿಣಿಯವರು : ಈಗ ಚರ್ಚೆ ಹಾಗೂ ಉತ್ತರ ಎರಡೂ ಮುಗಿದಿದೆ. ಈಗ ಸಭೆಯನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸಭೆ ಸಮಾವೇಶಗೊಳ್ಳುವುದು.

(ಸಭೆಯು 1-59ಕ್ಕೆ ಮುಕ್ತಾಯಗೊಂಡಿತು. ಮತ್ತೆ 3-00ಗಂಟೆಗೆ ಸಮಾವೇಶಗೊಳ್ಳುವುದು)

(ಸದನವು ಪುನಃ 3ಗಂಟೆ 1ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಹಾಗು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಇಲಾಖೆ ಸಚಿವರ ಹೆಸರು ಮುಂದೆ ಇರತಕ್ಕಂಥ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) 1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಕಾಯಿದೆಯ 9ನೇ ಕಲಮಿನ ಮೇರೆಗೆ :

ಕೋಲಾರದಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಮಠ ಟ್ರಸ್ಟ್ (ನೋಂದಾಯಿತ) ಅವರು 1836ನೇ ಕ್ರಮಾಂಕದ ನಿವೇಶನವನ್ನು ಖರೀದಿಸಿರುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕಕ ಸ್ಟ್ಯಾಂಪ್ ಕಾಯಿದೆಯ ಮೇರೆಗೆ ವಿಧಿಸಬಹುದಾದ ತೆರಿಗೆಯನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದ್ದರೆ ದಿನಾಂಕ 31-8-1991ರಂದು ಹೊರಡಿಸಿದ ಆದೇಶದ ಸಂಖ್ಯೆ ಆರ್‌ಡಿ 5 ಇಎಸ್‌ಆರ್ 91.

ಆ) 1908ನೇ ಇಸವಿಯ ಇಂಡಿಯನ್ ರಿಜಿಸ್ಟ್ರೇಷನ್ ಕಾಯಿದೆ 78ನೇ ವಿಧಿಯ (1908ನೇ ಇಸವಿಯ ಕೇಂದ್ರ ಕಾಯಿದೆಯ ಸಂಖ್ಯೆ 16)ಮೇರೆಗೆ; ಅಧಿಸೂಚನೆ ಸಂಖ್ಯೆ ಆರ್.ಡಿ. 408 ಇಎಸ್‌ಆರ್ 85 ,ದಿನಾಂಕ 27-5-1986ರಲ್ಲಿ ಅಧಿಸೂಚಿಸಿರುವ ಶುಲ್ಕದ ಪಟ್ಟಿಗೆ ತಿದ್ದುಪಡಿ-ಇದಕ್ಕೆ ಸಂಬಂಧಿಸಿದಂತೆ ದಿನಾಂಕ 31-8-1991ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ ಆರ್‌ಡಿ 5 ಇಎಸ್‌ಆರ್ 91.

ಇ) 1974ನೇ ಇಸವಿಯ ಕರ್ನಾಟಕ ಕೃಷಿ ಸಾಲ ನೀಡುವಿಕೆ ಹಾಗೂ ಇನ್ನಿತರ ಅವಕಾಶಗಳು ಕಾಯಿದೆಯ 16(3)ನೇ ಕಲಮಿನ ಮೇರೆಗೆ : ಸಂಖ್ಯೆ ಆರ್‌ಡಿ 316 ಇಎಸ್‌ಆರ್ 90 ದಿನಾಂಕ 31-8-1991. ಆದೇಶದ ಸಂಖ್ಯೆ ಆರ್‌ಡಿ 141 ಇಎಸ್‌ಆರ್ 90 ದಿನಾಂಕ 7-7-1990ಕ್ಕೆ ತಿದ್ದೋಲೆ ಹಾಗೂ